ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಬಂಡಾಯ ಕವಿ ಜಂಬಣ್ಣ ಅಮರಚಿಂತ ಇನ್ನಿಲ್ಲ



ಸಂಪುಟ 11 | ಸಂಚಿಕೆ 09 | ಪುಟ 16 | ಫೆಬ್ರವರಿ 20-26, 2017 | ರೂ. 10/-

web: www.janashakthi.co.in | e-mail : js_weekly@yahoo.com

'ಉಳುವವನೇ ಹೊಲದೊಡೆಯ' ಕನಸು ಬಿತ್ತಿದ ರಶ್ಯನ್ ಕ್ರಾಂತಿ

ರಷ್ಯಾಕ್ರಾಂತಿ ಮತ್ತು ಕೃಷಿ

ಅಕ್ಟೋಬರ್ ಕ್ರಾಂತಿ 100 ಪ್ರಕಟಣೆ ಮಾಲೆ





ДЕКРЕТЪ О ЗЕМЛѢ


Съѣзда Совѣтовъ Рабоч. и Солдат. Депутатовъ.

О землѣ.

ಅಕ್ಟೋಬರ್ 26 (ಆಗಿನ ರಶ್ಯನ್ ಕ್ಯಾಲೆಂಡರಿನಲ್ಲಿ-ಈಗಿನ ಕ್ಯಾಲೆಂಡರಿನಲ್ಲಿ ನವಂಬರ್8), 1917ರಂದು ಕಾರ್ಮಿಕರ ಮತ್ತು ಸೈನಿಕರ ಪ್ರತಿನಿಧಿಗಳ ಸಮ್ಮೇಳನ ಹೊರಡಿಸಿದ ಭೂಮಿ ಕುರಿತಾದ ಡಿಕ್ರಿ (ಆದೇಶ) ಯನ್ನು ಉಝ್ಬೇಕಿಸ್ತಾನದ ಹಳ್ಳಿಯೊಂದರಲ್ಲಿ ರೈತರಿಗೆ ಓದಿ ಹೇಳುತ್ತಿರುವುದು



ತಮಿಳುನಾಡು: ಕಾಲೂರಲು ಬಿಜೆಪಿ ಹುನ್ನಾರ



ಹೈಕಮಾಂಡ್‌ಗೆ ಲಂಚದ ಗುಟ್ಟು?

ಹಲವು 'ಜಗತ್ತು'ಗಳಿಗೆ ಕಿಂಡಿ

9th Biffes

ಕಾರ್ಪೊರೇಟ್‌ಗಳ ರಾಜಕೀಯ ಫಂಡಿಂಗ್‌ಗೆ ಹುನ್ನಾರ

ಪಠ್ಯ ಪುಸ್ತಕ ಪರಿಷ್ಕರಣೆ : ಬದ್ಧತೆ ಬೇಕು

ಕೇಂದ್ರ ಬಜೆಟಿನಲ್ಲಿ ಪರಿಶಿಷ್ಟ ಜಾತಿ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ತಿಲಾಂಜಲಿಗೆ ವ್ಯಾಪಕ ವಿರೋಧ

ಪ್ರಧಾನ ಮಂತ್ರಿಗಳಿಗೆ 26 ಸಂಸದರ ಪತ್ರ

ಈ ವರ್ಷದ ಕೇಂದ್ರ ಬಜೆಟಿನಿಂದ ಪರಿಶಿಷ್ಟ ಜಾತಿಗಳ ವಿಶೇಷ ಘಟಕ ಯೋಜನೆ(ಎಸ್‌ಸಿಪಿ) ಮತ್ತು ಬುಡಕಟ್ಟು ಉಪಯೋಜನೆ(ಟಿಎಸ್‌ಪಿ)ಯನ್ನು ಕೈಬಿಡಲಾಗಿದೆ. ಇದನ್ನು ವಿರೋಧಿಸಿ ಇವನ್ನು ಮತ್ತೆ ಸೇರಿಸಬೇಕು ಎಂದು ಆಗ್ರಹಿಸಿ 26 ಸಂಸತ್ ಸದಸ್ಯರು ಫೆಬ್ರುವರಿ 9ರಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಈ 26 ಎಂಪಿಗಳಲ್ಲಿ ಬಿಜೆಪಿ ಬಿಟ್ಟು ಬೇರೆಲ್ಲ ಪಕ್ಷಗಳ ಎಂಪಿಗಳು ಸೇರಿದ್ದಾರೆ.

ಈ ಉಪಯೋಜನೆಗಳ ಬದಲಿಗೆ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕಲ್ಯಾಣಕ್ಕೆ ಹಣ ಒದಗಿಸುತ್ತಿದ್ದೇವೆ ಎಂದು ಹೇಳಲಾಗಿದೆ, ಆದರೆ ಇದು ಕೇವಲ ಹೆಸರಿನ ಬದಲಾವಣೆ ಅಲ್ಲ, ಒಟ್ಟು ಚೌಕಟ್ಟನ್ನೇ ಪಲ್ಲಟಗೊಳಿಸಲಾಗಿದೆ, ಇದು ದೇಶದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಜನಗಳ ಮೇಲೆ ಗಂಭೀರ ದುಷ್ಪರಿಣಾಮ ಉಂಟು ಮಾಡುವ ಪಲ್ಲಟ ಎಂದು ಈ ಎಂಪಿಗಳು ತಮ್ಮ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಈ ಎರಡು ವಿಭಾಗಗಳಿಗೆ ಬಜೆಟ್ ನೀಡಿಕೆಯಲ್ಲಿ ಅನುಕ್ರಮವಾಗಿ 35ಶೇ. ಮತ್ತು 33ಶೇ. ಏರಿಕೆಯಾಗಿದೆ ಎಂದು ಹೇಳಿರುವುದು ಕೂಡ 'ಭ್ರಮಾತ್ಮಕ' ಎಂದು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಲಾಗಿದೆ. ವಾಸ್ತವವಾಗಿ ಈ ಹಣ ಈ ಎರಡು ವಿಭಾಗಗಳ ಕಲ್ಯಾಣಕ್ಕೆ ಖರ್ಚಾಗುವುದು ಕಡಿಮೆ, ಅದಕ್ಕೆ ಸಂಬಂಧಪಟ್ಟ ಆಡಳಿತಕ್ಕೆ, ಅಂದರೆ ಸಂಬಳಗಳು, ಪೆನ್ಶನ್‌ಗಳಿಗೆ ವೆಚ್ಚವಾಗುವುದೇ ಹೆಚ್ಚು ಎಂಬ ಸಂಗತಿಯತ್ತ ಈ ಮನವಿ ಪತ್ರ ಪ್ರಧಾನಿಗಳ ಗಮನ ಸೆಳೆದಿದೆ.

ಹಿಂದಿನ ವರ್ಷಗಳಲ್ಲಿ ಬಡ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಕೊಡಬೇಕಾಗಿರುವ ಮ್ಯಾಟ್ರಿಕೋತ್ತರ ಸ್ಕಾಲರ್‌ಶಿಪ್ ಕೊಟ್ಟಿಲ್ಲ, 11,267.61 ಕೋಟಿ ರೂ. ಬಾಕಿ ಇದೆ. ಇದನ್ನು ಈ ವರ್ಷದ ಬಜೆಟಿನಲ್ಲಿ ಲೆಕ್ಕಕ್ಕೆ ತಗೊಳ್ಳಬೇಕು ಎಂದು ಈ ಎಂಪಿಗಳು ಪ್ರಧಾನಿಗಳನ್ನು ಆಗ್ರಹಿಸಿದ್ದಾರೆ.

ಇದರಿಂದಾಗಿ ಬಿಹಾರ ರಾಜ್ಯವೊಂದರಲ್ಲೇ 15, 000 ಪರಿಶಿಷ್ಟ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ನಿಲ್ಲಿಸಬೇಕಾಗಿ ಬಂದಿದೆ ಎಂದು ಅದೇ ದಿನ ದಿಲ್ಲಿಯಲ್ಲಿ ಈ ವರ್ಷದ ಬಜೆಟ್ ಹಾಗೂ ಎಸ್‌ಸಿಪಿ/ ಟಿಎಸ್‌ಪಿ ಕುರಿತ ದುಂಡು ಮೇಜಿನ ಸಂವಾದದಲ್ಲಿ ಭಾಗವಹಿಸಿದವರೊಬ್ಬರು ಹೇಳಿದ್ದಾರೆ.

ದಲಿತ/ಆದಿವಾಸಿ ಹಕ್ಕುಗಳ ರಕ್ಷಣೆಗೆ ಆಂದೋಲನ

ಈ ಸಂವಾದದಲ್ಲಿ ಭಾಗವಹಿಸಿದ ದಲಿತ ಆರ್ಥಿಕ ಅಧಿಕಾರ ಆಂದೋಲನ(ಡಿಎಎಎ)ನ ಪಾಲ್ ದಿವಾಕರ್ ಯೋಜನಾ ಆಯೋಗವನ್ನು ಬರ್ಖಾಸ್ತು ಮಾಡಿದ ಮೇಲೆ ಒಟ್ಟು ಖರ್ಚಿನಲ್ಲಿ 4.63ಶೇ. ಪರಿಶಿಷ್ಟ ಜಾತಿಗಳಿಗೆ ಮತ್ತು 2.39ಶೇ. ಪರಿಶಿಷ್ಟ ಬುಡಕಟ್ಟುಗಳಿಗೆ ನೀಡಬೇಕೆಂಬ ಜಾಧವ್ ಸಮಿತಿ ಮಾರ್ಗದರ್ಶನಗಳನ್ನು ಅನುಸರಿಸಬೇಕಾಗಿತ್ತು. ಎಂದು ಒತ್ತಿ ಹೇಳಿದರು.

ಈ ಎಸ್‌ಸಿಪಿ/ಟಿಎಸ್‌ಪಿ ಹಣದಲ್ಲಿ ಯೋಜನೆ ಅಂತರ್ಗತವಾಗಿರಬೇಕು, ಪ್ರತಿ ಬ್ಲಾಕ್ ಮತ್ತು ಹಳ್ಳಿಯಲ್ಲಿ ಈ ಕುರಿತ ಯೋಜನೆಗಳ ಉಸ್ತುವಾರಿಗೆ ಕಾರ್ಯಪಡೆಗಳನ್ನು ರಚಿಸಬೇಕು ಎಂದು ಭಾರತ ಸರಕಾರದ ಮಾಜಿ ಕಾರ್ಯದರ್ಶಿ ಪಿ.ಎಸ್.ಕೃಷ್ಣನ್ ಹೇಳಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಮಾತಾಡುತ್ತ, ಹಕ್ಕುಗಳನ್ನೇನೋ ಕೊಡಲಾಗಿದೆ, ಆದರೆ ಅದಕ್ಕೆ ಬೆಂಬಲವಾಗಿ ಹಣ ಒದಗಿಸುತ್ತಿಲ್ಲ ಎಂದರು. ಪ್ರಸಕ್ತ ಸರಕಾರದ ದಲಿತ–ವಿರೋಧಿ ಧೋರಣೆಗಳ ವಿರುದ್ಧ ಹೋರಾಡಲು ಒಂದು ವಿಶಾಲ ವ್ಯಾಪ್ತಿಯ ಆಂದೋಲನವನ್ನು ಕಟ್ಟಬೇಕಾಗಿದೆ ಎಂದು ಅವರು ಒತ್ತಿ ಹೇಳಿದರು.

ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್(ಎಎಆರ್‌ಎಂ)ನ ಅಧ್ಯಕ್ಷರು ಮತ್ತು ಎಂಪಿಗಳೂ ಆಗಿರುವ ಜಿತೇಂದ್ರ ಚೌಧುರಿ ಎಲ್ಲ ಎಂಪಿಗಳೊಡನೆ ಈ ಬಗ್ಗೆ ಮಾತಾಡಿ ಮಾರ್ಚ್ 8 ರಂದು ಸಂಸತ್ತಿನ ಬಜೆಟ್ ಅಧಿವೇಶನ ಮತ್ತೆ ಆರಂಭವಾದ ಮೇಲೆ ಇದನ್ನು ಎತ್ತಲಾಗುವುದು ಎಂದರು. ಅಲ್ಲದೆ ಸಮಾನ ಮನಸ್ಕ ಎಂಪಿಗಳು ಎಸ್/ಎಸ್‌ಟಿ ಸಂಸದರ ವೇದಿಕೆಯಲ್ಲಿಯೂ ಇದನ್ನು ತಂದು ಮತ್ತೆ ಎಸ್‌ಸಿಪಿ/ಟಿಎಸ್‌ಪಿಗಳನ್ನು ಬಜೆಟಿನಲ್ಲಿ ಸೇರಿಸುವಂತೆ ಒತ್ತಡ ತರಲಾಗುವುದು ಹಾಗೂ ದಲಿತರು ಮತ್ತು ಆದಿವಾಸಿಗಳ ಆರ್ಥಿಕ ಹಕ್ಕುಗಳ ರಕ್ಷಣೆಗೆ ಒಂದು ಕೇಂದ್ರ ಕಾನೂನಿಗಾಗಿ ಹೋರಾಟ ನಡೆಸಲಾಗುವುದು ಎಂದು ಅವರು ಹೇಳಿದರು.

ಇನ್ನೊಬ್ಬ ಸಂಸತ್ ಸದಸ್ಯ ಡಿ.ರಾಜ ಅವರು ಮಾತಾಡುತ್ತ ನೀತಿ ಆಯೋಗ ರಚಿಸಿದ್ದು ಸಾರ್ವಜನಿಕ ಹಣವನ್ನು ಖಾಸಗಿ ವಲಯಕ್ಕೆ ಹಸ್ತಾಂತರಿಸಲಿಕ್ಕಾಗಿ, ಯೋಜನಾ ಆಯೋಗವಿಲ್ಲದಿರುವುದರಿಂದ ಈ ಘಟಕ/ಉಪ ಯೋಜನೆಗಳಿಗೆ (ಎಸ್‌ಸಿಪಿ/ಟಿಎಸ್‌ಪಿಗೆ) ಬೆಂಬಲವಾಗಿ ಒಂದು ಶಾಸನವನ್ನು ರೂಪಿಸಬೇಕು ಎಂದರು.

ಈ ಎಸ್‌ಸಿಪಿ/ಟಿಎಸ್‌ಪಿ ಕಾನೂನುಗಳನ್ನು ದುರ್ಬಲಗೊಳಿಸಬೇಕೆಂದು ನೀತಿ ಆಯೋಗದಿಂದ ರಾಜ್ಯ ಸರಕಾರಗಳಿಗೆ ಒಂದು ಸುತ್ತೋಲೆ ಹೋಗಿದೆ ಎಂಬುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಬಿ.ವಿ.ರಾಘವುಲು ಈ ದುಂಡು ಮೇಜಿನಲ್ಲಿ ಭಾಗವಹಿಸಿದವರ ಗಮನಕ್ಕೆ ತರುತ್ತ, ಇದು ಅಭಿವೃದ್ಧಿ ಪಕ್ಷಪಾತವಲ್ಲದೆ ಬೇರೇನೂ ಅಲ್ಲ ಎಂದು ಟಿಪ್ಪಣಿ ಮಾಡಿದರು.

ವಿಭಿನ್ನ ಜನಾಂದೋಲನಗಳ ಪ್ರತಿನಿಧಿಗಳು ಇ ದುಂಡುಮೇಜಿನಲ್ಲಿ ಭಾಗವಹಿಸಿದ್ದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಮಣ್ಣವತಿ ಮತ್ತು ಮೈಮೂನಾ ಮೊಲ್ಲ ತಮ್ಮ ಸಂಘಟನೆ ಈ ಸಂದೇಶವನ್ನು ಬುಡಮಟ್ಟಕ್ಕೆ ಒಯ್ಯುವಲ್ಲಿ ಕೈಜೋಡಿಸುತ್ತದೆ ಎಂದರು. ದಲಿತ ಶೋಷಣ ಮುಕ್ತಿ ಮಂಚ್‌ನ ಶ್ರೀನಿವಾಸ ರಾವ್ ತಮ್ಮ ಸಂಘಟನೆ ಇಂತಹ ಪ್ರಯತ್ನಗಳಿಗೆ ಬೆಂಬಲ ನೀಡುವುದನ್ನು ಮುಂದುವರೆಸುತ್ತದೆ ಮತ್ತು ದಲಿತರು ಹಾಗೂ ಆದಿವಾಸಿಗಳ ಹಕ್ಕುಗಳನ್ನು ಉಳಿಸಿಕೊಳ್ಳಲು ಜನಗಳನ್ನು ಅಣಿನೆರೆಸುತ್ತದೆ ಎಂದರು.

ಫ್ಯಾಕ್ಟರೀಸ್ ಆಕ್ಟ್‌ನಲ್ಲಿ ಕಾರ್ಮಿಕ–ವಿರೋಧಿ ಬದಲಾವಣೆಗಳ ಪ್ರಸಾವ:

ಕೇಂದ್ರ ಕಾರ್ಮಿಕ ಸಂಘಟನೆಗಳ ವಿರೋಧ

ಕೇಂದ್ರ ಕಾರ್ಮಿಕ ಮಂತ್ರಿ ಕಳೆದ ವಾರ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರ ಸಭೆ ಕರೆದು 1948ರ ಫ್ಯಾಕ್ಟರೀಸ್ ಆಕ್ಟ್(ಕಾರ್ಖಾನೆಗಳ ಕಾಯ್ದೆ)ಯ ಅನ್ವಯದ ಕನಿಷ್ಠ ಮಿತಿಯನ್ನು ಹೆಚ್ಚಿಸಲು ರಾಜ್ಯಗಳಿಗೆ ಅಧಿಕಾರ ಕೊಡುವ ಬದಲಾವಣೆ ತರಬೇಕೆಂಬ ಸರಕಾರದ ಪ್ರಸ್ತಾವವನ್ನು ಮುಂದಿಟ್ಟರು. ಇದನ್ನು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಬಲವಾಗಿ ವಿರೋಧಿಸಿವೆ.

ಈಗ ಈ ಕಾಯ್ದೆ ವಿದ್ಯುತ್ ಬಳಸುವ ಉದ್ದಿಮೆಗಳಲ್ಲಿ 10 ಅಥವ ಹೆಚ್ಚು ಕಾರ್ಮಿಕರನ್ನು ಮತ್ತು ವಿದ್ಯುತ್ ಬಳಸದಿರುವಲ್ಲಿ 20 ಅಥವ ಹೆಚ್ಚು ದುಡಿಸಿಕೊಳ್ಳುತ್ತಿದ್ದರೆ, ಅವಕ್ಕೆಲ್ಲಕ್ಕೂ ಅನ್ವಯವಾಗುತ್ತದೆ. ಇದನ್ನು ರಾಜ್ಯ ಸರಕಾರಗಳು ಅನುಕ್ರಮವಾಗಿ 20 ಮತ್ತು 40 ಕ್ಕೆ ಏರಿಸುವಂತಾಗಬೇಕು ಎಂಬುದು ಮೋದಿ ಸರಕಾರದ ಆಶಯ.

12 ಕೇಂದ್ರೀಯ ಕಾರ್ಮಿಕ ಸಂಗಟನೆಗಳು ಈ ಬಗ್ಗೆ ಒಂದು ಜಂಟಿ ಮನವಿ ಪತ್ರವನ್ನು ಸಲ್ಲಿಸಿ ಈ ಪ್ರಸ್ತಾವಕ್ಕೆ ತಮ್ಮ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿವೆ, ಅಷ್ಟೇ ಅಲ್ಲ, ಎಲ್ಲ ತಯಾರಿಕಾ ಸಂಸ್ಥೆಗಳಿಗೆ ಈ ಕಾಯ್ದೆಯನ್ನು ವಿಸ್ತರಿಸಬೇಕು ಎಂದು ಆಗ್ರಹಿಸಿವೆ.

ಈ ಹಿಂದೆ ಸರಕಾರ 40ಕ್ಕಿಂತ ಕಡಿಮೆ ಕಾರ್ಮಿಕರು ದುಡಿಯುತ್ತಿರುವ ಕಾರ್ಖಾನೆಗಳಿಗೆ ಪ್ರತ್ಯೇಕ 'ಸಣ್ಣ ಕಾರ್ಖಾನೆಗಳ ಕಾಯ್ದೆ' ತರುವುದಾಗಿ ಹೇಳಿತ್ತು. ಆದರೆ ಈಗ ಅಬಗ್ಗೆ ಕಾರ್ಮಿಕ ಮಂತ್ರಾಲಯದ ಅಧಿಕಾರಿಗಳು ಏನೂ ಹೇಳುತ್ತಿಲ್ಲ.

ಲೈಸನ್ಸ್ ಇಲ್ಲದೆ ಕಾರ್ಖಾನೆ ಸ್ಥಾಪನೆ?

ಉದ್ದಿಮೆದಾರರು ಲೈಸನ್ಸ್ ಪಡೆಯದೆ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಡಬೇಕು ಎಂಬುದು ಮೋದಿ ಸರಕಾರದ ಇನ್ನೊಂದು ಪ್ರಸ್ತಾವ. ವೆಬ್ ಆಧಾರಿತ ತಾಣದಲ್ಲಿ ಆನ್‌ಲೈನ್ ರಿಜಿಸ್ಟರ್ ಮಾಡಿಕೊಂಡರೆ ಸಾಕು ಎಂಬುದು ಅದರ ನಂಬಿಕೆಯಂತೆ.

"ಆನ್‌ಲೈನ್ ರಿಜಿಸ್ಟ್ರೇಶನ್ ಹೆಸರಲ್ಲಿ, ಸ್ವತಃ ಪ್ರಮಾಣಿಸಿದರೆ ಮಂಜೂರಾತಿ ಸಿಕ್ಕಂತೆ ಎಂದು ಭಾವಿಸುವ ಪ್ರಕ್ರಿಯೆ ಮತ್ತು ಲೈಸನ್ಸಿಂಗ್‌ಎಂಬುದನ್ನು ತೆಗೆದು ಹಾಕುವ ಮೂಲಕ ಮಾಲಕರನ್ನು ಯಾವುದೇ ನಿಯಂತ್ರಣದಿಂದ ಮುಕ್ತಗೊಳಿಸಿದಂತಾಗುತ್ತದೆ. ಇದು ಇದು ಕಾರ್ಮಿಕರ ಮತ್ತು ಒಟ್ಟಾರೆಯಾಗಿ ಸಮಾಜದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಕಾರ್ಮಿಕ ಸಂಘಟನೆಗಳು ಹೇಳಿವೆ.

ಅಕ್ರಮ ಆಸ್ತಿ ಸಂಪಾದನೆ ಬಗ್ಗೆ ಸುಪ್ರಿಂ ಕೋರ್ಟ್ ತೀರ್ಪಿನಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಹೊಸ ಹುರುಪು

18 ವರ್ಷಗಳ ಕಾನೂನು ಕಲಾಪಗಳ ನಂತರ ಮಾಜಿ ತಮಿಳುನಾಡು ಮುಖ್ಯಮಂತ್ರಿ ಜೆ.ಜಯಲಲಿತ, ಶಶಿಕಲ, ಸುಧಾಕರನ್ ಮತ್ತು ಇಳವರಸಿ ತಪ್ಪಿತಸ್ಥರೆಂದು 2015ರಲ್ಲಿ ನ್ಯಾಯ ಮೂರ್ತಿ ಮೈಕೆಲ್‌ದ ಕುನ್ಹ ಅವರಿಗೆ ಶಿಕ್ಷೆ ವಿಧಿಸಿದ್ದರು. ನಂತರ ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿ ಕುಮಾರಸಾಮಿ ಈ ಶಿಕ್ಷೆಯನ್ನು ರದ್ದು ಮಾಡಿ ಇವರೆಲ್ಲ ನಿರ್ದೋಷಿಗಳೆಂದು ತೀರ್ಪು ಕೊಟ್ಟರು. ಈಗ ಸುಪ್ರಿಂ ಕೋರ್ಟ್ ಹೈಕೋರ್ಟಿನ ಈ ತೀರ್ಪನ್ನು ವಜಾ ಮಾಡಿ ನ್ಯಾಯಮೂರ್ತಿ ದ ಕನ್ಹ ಅವರ ತೀರ್ಪನ್ನು ಎತ್ತಿ ಹಿಡಿದಿದೆ. ಶಶಿಕಲ, ಸುಧಾಕರನ್ ಮತ್ತು ಇಳವರಸಿ ಇವರಿಗೆ ನಾಲ್ಕು ವರ್ಷಗಳ ಶಿಕ್ಷೆ ಮತ್ತು 10 ಕೋಟಿ ರೂ. ದಂಡ ವಿಧಿಸಲಾಗಿದೆ.

ಸಿಪಿಐ(ಎಂ) ಈ ತೀರ್ಪನ್ನು ಸ್ವಾಗತಿಸಿದೆ. ಇದು ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದಲ್ಲಿ ತೊಡಗುವವರಿಗೆ ಒಂದು ಎಚ್ಚರಿಕೆ, ಇದು ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಹೊಸ ಹುರುಪು ನೀಡುತ್ತದೆ ಎಂದು ಅದು ಹೇಳಿದೆ.

ರಾಜ್ಯಪಾಲರು ರಾಜ್ಯದಲ್ಲಿ ಸ್ಥಿರತೆಯನ್ನು ಮತ್ತೆ ನೆಲೆಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ವಿಧಾನಸಭೆಯ ಅಧಿವೇಶನವನ್ನು ಕರೆದು ಹೊಸದೊಂದು ಸರಕಾರ ರಚನೆಯಾಗುವಂತೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಮಾತೆಂದರೆ ಇದು

ಧಾರ್ಮಿಕ ಭಾವನೆಯನ್ನು ಸಾಮಾಜಿಕ ಬದಲಾಣೆಯ ವಿರುದ್ಧ ಬಳಸಿದರೆ ಅದು ಖಂಡಿತ ಅಫೀಮು ಆಗುತ್ತದೆ. ಆದರೆ ಅದನ್ನು ಸಾಮಾಜಿಕ ಬದಲಾವಣೆಯ ಹೋರಾಟದ ಪರವಾಗಿ ಜತೆಗೂಡಿಸಿದರೆ ಅದು ಆಗ ಅದ್ಭುತ ಔಷಧಿ ಆಗಬಲ್ಲುದು.

– ಫಿಡೆಲ್ ಕ್ಯಾಸ್ಟ್ರೋ



ಭೂಸ್ವಾಧೀನ ಕಾನೂನನ್ನು ದುರ್ಬಲಗೊಳಿಸುವ ಪ್ರಯತ್ನಗಳ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ–ಬಿ.ವಿ.ರಾಘವುಲು

ಹಲವು ರಾಜ್ಯಗಳು 2013ರ ಭೂಸ್ವಾಧೀನ ಕಾಯ್ದೆಯನ್ನು ದುರ್ಬಗೊಳಿಸುವ ಪ್ರಯತ್ನಗಳನ್ನು ನಡೆಸುತ್ತಿವೆ. ಇದರ ವಿರುದ್ಧ ಹಾಗೂ ವಿಶೇಷ ಆರ್ಥಿಕ ವಲಯ(ಎಸ್‌ಇಝಡ್)ಗಳಿಗೆಂದು ಸ್ವಾಧೀನ ಮಾಡಿಕೊಂಡರೂ ವರ್ಷಗಳಾದರೂ ಏನೂ ಮಾಡದಿರುವುದಲ್ಲಿ ಬೂಮಿಯನ್ನು ಹಿಂದಕ್ಕೆ ಪಡೆಲು ಸಿಪಿಐ(ಎಂ) ರಾಷ್ಟ್ರವ್ಯಾಪಿ ಹೋರಾಟ ನಡೆಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಬಿ.ವಿ.ರಾಘವುಲು ಹಳಿದ್ದಾರೆ.

ಆಂಧ್ರಪ್ರದೇಶ, ತೆಲಂಗಾಣ, ಗುಜರಾತ್, ಝಾರ್ಖಂಡ್ ರಾಜ್ಯಗಳಲ್ಲಿ 2013ರ ಭೂಸ್ವಧೀನ ಕಾಯ್ದೆಯಲ್ಲಿನ ರೈತರ ಪರವಾಗಿರುವ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಕ್ರಮಗಳನ್ನು ನಿಷ್ಪ್ರಯೋಜಕಗೊಳಿಸುವ ಅಂಶಗಳನ್ನು ಸೇರಿಸಲಾಗುತ್ತಿದೆ. ಪಕ್ಷಭೇಧವಿಲ್ಲದೆ ಎಲ್ಲ ರೈತರನ್ನು ಒಟ್ಟಿಗೆ ತಂದು ಒಪ್ಪಿಗೆ, ನ್ಯಾಯಯುತ ಪರಿಹಾರ ಮುಂತಾದ ಈ ಕಾನೂನಿನ ಪ್ರಗತಿಪರ ಅಂಶಗಳನ್ನು ಉಳಿಸಿಕೊಳ್ಳಲು ಭೂಅಧಿಕಾರ ಆಂದೋಲನದ ಮಾದರಿಯಲ್ಲಿ ಒಂದು ದೊಡ್ಡ ಹೋರಾಟವನ್ನು ಹರಿಯ ಬಿಡುತ್ತದೆ ಎಂದು ರಾಘವುಲು ಹೇಳಿದ್ದಾರೆ.

ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯಲ್ಲಿ 22 ಸಾವಿರ ಎಕ್ರೆ ಭೂಮಿಯನ್ನು ವಡರೇವು ಮತ್ತು ನಿಝಾಮಪಟ್ಟಣಂ ಇಂಡಸ್ಟ್ರಿಯಲ್ ಕಾರಿಡಾರ್(ವಿಎನ್‌ಪಿಐಸಿ) ಯೋಜನೆಗೆ 2008ರಲ್ಲಿ ಸ್ವಾಧೀನ ಮಾಡಿಕೊಳ್ಳಲಾಗಿತ್ತು. "ಮಾರ್ಚ್ 9ರ ವಿಧಾನ ಪರಿಷತ್ತು ಚುನಾವಣೆಗಳ ನಂತರ ಈ ಭೂಮಿಯನ್ನು ಹಿಂದಿರುಗಿಸುವಂತೆ ಒತ್ತಾಯಿಸಿ ಹೋರಾಟಕ್ಕೆ ನಾನೇ ನೇತೃತ್ವ ವಹಿಸುತ್ತೇನೆ" ಎಂದು ರಾಘವುಲು ಹೇಳಿದ್ದಾರೆ.

ಎರಡು ಬಂದರುಗಳು ಮತ್ತು ಒಂದು ಕೈಗಾರಿಕಾ ಸಂಕುಲದ ಮೆಗಾಪ್ರಾಜೆಕ್ಟ್ ಎಂದು ಇದನ್ನು ಹೇಳಲಾಗಿತ್ತು, ಆದರೆ ವಿವಿಧ ಕಾರಣಗಳಿಂದಾಗಿ ಅದು ನೆಲದಿಂದ ಮೇಲೇಳಲೇ ಇಲ್ಲ. ಇದೇ ರೀತಿ ರಾಜ್ಯಾದ್ಯಂತ ವಿವಿಧೆಡೆಗಳಲ್ಲಿ ಎಸ್‌ಇಝಡ್ ಗೆಂದು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ, ಆದರೆ ಏನೂ ಆಗಿಲ್ಲ. ಸರಕಾರ ಈ ಭೂಮಿಗಳನ್ನು ರೈತರಿಗೆ ಹಿಂದಿರುಗಿಸಲು ಕ್ರಮ ವಹಿಸಬೇಕು ಎಂದು ಅವರು ಹೇಳಿದರು.

ಸಿಪಿಐ(ಎಂ) ಸಣ್ಣ ಮತ್ತು ಅಂಚಿನ ರೈತರ, ಅದರಲ್ಲೂ ದಲಿತರ ಪ್ರಶ್ನೆಗಳನ್ನೂ ಎತ್ತಿಕೊಳ್ಳುತ್ತದೆ. ಅಮರಾವತಿಯಲ್ಲಿ ರೈತರಿಗೆ ವಿವಿಧ ರೀತಿಯ ಭೂಮಿಗಳಿಗೆ, ದಲಿತರು ಮತ್ತು ಹಲ್ಲುಗಾವಲಿಗೆಂದು ಕೊಟ್ಟಿರುವ ಜಮೀನುಗಳಿಗೆ ಪರಿಹಾರ ಕೊಟ್ಟಿರುವಾಗ ದೋಣಕುಂಡದಲ್ಲಿ ದಲಿತರಿಗೆ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಪರಿಹಾರ ನಿರಾಕರಿಸಲು ಏನೂ ಕಾರಣಗಳಿಲ್ಲ ಎಂದು ಅವರು ಹೇಳಿದರು.

ಎರಡೂ 'ಹೈಕಮಾಂಡಿಗೆ ಲಂಚ'ದ 'ಗುಟ್ಟು'ಗಳು ರಟ್ಟಾಗಲಿ !

ಸಂಪಾದಕೀಯ

ಪ್ರಸಿದ್ಧ ರ್‍ಯಾಡಿಕಲ್ ಚಿಂತಕ ನೋಮ್ ಚೋಮ್ಸ್ಕಿ ಬೂರ್ಜ್ವಾ ಪ್ರಜಾಪ್ರಭುತ್ವದಲ್ಲಿ ಮಾಧ್ಯಮಗಳಲ್ಲಿ ಭ್ರಷ್ಟಾಚಾರದ ಹಗರಣಗಳು ಬಯಲಾಗುವ ಬಗ್ಗೆ ಒಂದು ಮಾತು ಹೇಳುತ್ತಾನೆ. ಆಳುವ ಬೂರ್ಜ್ವಾ ವರ್ಗದ ಭ್ರಷ್ಟಾಚಾರ ಸಾಮಾನ್ಯವಾಗಿ ಸುದ್ದಿಯಾಗುವುದಿಲ್ಲ. ಗುಟ್ಟಾಗಿಯೇ ಇರುತ್ತದೆ. ಆದರೆ ಆಳುವ ವರ್ಗದ ಒಂದು ವಿಭಾಗ ಇನ್ನೊಂದು ವಿಭಾಗವನ್ನು ಹಣಿಯಲು ನಿರ್ಧರಿಸಿದಾಗ 'ಪುರಾವೆ' ಸಮೇತ ಇಂತಹ ಗುಟ್ಟು ರಟ್ಟು ಮಾಡಲಾಗುತ್ತದೆ ಎನ್ನುತ್ತಾರೆ. ಆಗ ಎರಡೂ ಗುಂಪುಗಳು ಪರಸ್ಪರ ಜಿದ್ದಿಗೆ ಬಿದ್ದು ಎರಡೂ ಗುಂಪುಗಳ ಮತ್ತು ಆ ಮೂಲಕ ಇಡೀ ವ್ಯವಸ್ಥೆ ಎಷ್ಟು ಭ್ರಷ್ಟ ಎಂಬುದು 'ಪುರಾವೆ'ಯೊಂದಿಗೆ ಎಲ್ಲರಿಗೂ ತಿಳಿಯುತ್ತದೆ. ಈಗ ಕರ್ನಾಟಕದಲ್ಲಿ ನಾವು ಕಾಣುತ್ತಿರುವ 'ಸಿಡಿ-ಡೈರಿ' ಪ್ರಹಸನ ಇಂತಹುದೇ ಒಂದು ಪ್ರಸಂಗ ಅಂತ ಕಾಣುತ್ತದೆ.

ಕಾಂಗ್ರೆಸ್ ನಲ್ಲಾಗಲಿ, ಬಿಜೆಪಿಯಲ್ಲಾಗಲಿ 'ಆಂತರಿಕ' ಭ್ರಷ್ಟಾಚಾರ ಹೊಸದೂ ಅಲ್ಲ. ಗುಟ್ಟಾಗಿರುವಂಥದ್ದೂ ಅಲ್ಲ. ಮುಖ್ಯಮಂತ್ರಿಗಳಾಗಲು, ಆದ ಮೇಲೆ ಮುಂದುವರೆಯಲು ಅಥವಾ ಬದಲಾಯಿಸಲು ಹೈಕಮಾಂಡಿಗೆ ಸೂಟುಕೇಸು (ಲಂಚ ಎನ್ನುವುದು ಪೀಚು ಶಬ್ದವಾದೀತು!) ಕೊಡುವುದು ನಡೆಯುತ್ತಲೇ ಇದೆ. ಹಿಂದೆ ಮಾಧ್ಯಮಗಳಿಂದ 'ಮಿ. ಕ್ಲೀನ್' ಎಂಬ ಬಿರುದು ಗಳಿಸಿದ್ದ ಕಾಂಗ್ರೆಸ್ ಪ್ರಧಾನಿಗೆ, ಕರ್ನಾಟಕದ ಮುಖ್ಯಮಂತಿಯನ್ನು ಬದಲಾಯಿಸಲು ಹೆಂಡದ ಲಾಬಿ ಒಬ್ಬ ಮುಖ್ಯಮಂತ್ರಿ ಆಕಾಂಕ್ಷಿಯ ಪರವಾಗಿ ಕೋಟಿಗಟ್ಟಲೆ ಕೊಟ್ಟಿತ್ತು ಎಂಬ ಪ್ರಬಲ ಪುಕಾರು ಇತ್ತು. ಅದೇ ರೀತಿ ಬಿಜೆಪಿಯ ಕೇಂದ್ರ ಮಂತ್ರಿಣಿಯೊಬ್ಬರಿಗೆ ಗಣಿ ಧಣಿಗಳು ಮುಖ್ಯಮಂತ್ರಿ ಪೈಪೋಟಿಯಲ್ಲಿ ಹಲವು ಸೂಟುಕೇಸುಗಳನ್ನು ಕೊಟ್ಟಿದ್ದರು ಎಂಬುದೂ ಬಹಿರಂಗ ಗುಟ್ಟಾಗಿತ್ತು.


ಕೇಂದ್ರ ತನಿಖಾ ಸಂಸ್ಥೆಗಳ ದಾಳಿಯಲ್ಲಿ ಕಾಂಗ್ರೆಸ್ ನಾಯಕರೊಬ್ಬರ ಡೈರಿಯಲ್ಲಿ ಸಿದ್ಧರಾಮಯ್ಯ ಕಾಂಗ್ರೆಸ್ ಹೈಕಮಾಂಡಿಗೆ ಸಾವಿರ ಕೋಟಿ ರೂ. ಲಂಚ ಕೊಟ್ಟಿದ್ದಾರೆ ಎಂದು ನಮೂದಿಸಲಾಗಿದೆ ಎಂದು ಯೆಡಿಯೂರಪ್ಪ ಆಪಾದಿಸಿದ್ದಾರೆ. ಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ಅವರೇ ನಂತರ ಅದನ್ನು 65 ಕೋಟಿ ರೂ.ಗೆ 'ರಿವೈಸ್' ಮಾಡಿದರು. 150 ಕೋಟಿ ರೂ. 'ಸ್ಟೀಲ್ ಬ್ರಿಜ್' ಗೆ ಲಂಚ ಎಂದರು. ಅವರ ಆಪಾದನೆ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಇಂತಹ ಗಂಭೀರ ಆಪಾದನೆ ಮಾಡುತ್ತಿರುವ ಅವರ ಬಳಿ ಪುರಾವೆ ಇದ್ದರೆ ಅದನ್ನು ಏಕೆ ಬಹಿರಂಗ ಮಾಡುತ್ತಿಲ್ಲ? ಅಥವಾ ಎಸಿಬಿಗೋ ಲೋಕಾಯುಕ್ತಕ್ಕೋ ಏಕೆ ದೂರು ಕೊಡುತ್ತಿಲ್ಲ? ಕೇಂದ್ರ ತನಿಖಾ ಸಂಸ್ಥೆಗಳ ದಾಳಿಯಲ್ಲಿ ಸಿಕ್ಕಿದ ಡೈರಿಯಲ್ಲಿ ಏನಿದೆ ಎಂಬುದು ಅವರಿಗೆ ಹೇಗೆ ಗೊತ್ತಾಯಿತು? ಪ್ರಧಾನಿ ಮೋದಿ ವಿರುದ್ಧ ಇಂತಹುದೇ ಡೈರಿಯಲ್ಲಿ ನಮೂದಿಸಲಾದದ್ದರ ಮೇಲೆ ಆಧಾರಿತ ಭ್ರಷ್ಟಾಚಾರದ ಆಪಾದನೆ ಬಗ್ಗೆ ಬಿಜೆಪಿ ಅದೇ ನೀತಿಯನ್ನು ಪಾಲಿಸಿದೆಯೇ?

ಇದಕ್ಕೆ ಪ್ರತಿಯಾಗಿ ಯೆಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ಹೈಕಮಾಂಡಿಗೆ ಸೂಟುಕೇಸುಗಳನ್ನು ಕೊಟ್ಟಿದ್ದರು ಎಂಬ ದೂರನ್ನು ಕಾಂಗ್ರೆಸ್ (ಕೆಪಿಸಿಸಿ ಕಾನೂನು ಸೆಲ್) ಎಸಿಬಿಗೆ 'ಪುರಾವೆ'ಯಾದ ಸಿಡಿ ಜತೆ ಸಲ್ಲಿಸಿದೆ. ಸಿಡಿಯಲ್ಲಿ ಯೆಡಿಯೂರಪ್ಪ-ಅನಂತ ಕುಮಾರ್ ಸಂಭಾಷಣೆಯಲ್ಲಿ, ಯೆಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ಹೈಕಮಾಂಡಿಗೆ ಲಂಚ ಕೊಟ್ಟಿದ್ದರು ಎಂದು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಇದು ಆಪಾದನೆ ರುಜುವಾತು ಮಾಡಲು ಸಾಕಾ ಎಂಬುದು ಬೇರೆ ವಿಷಯ. ಆದರೆ ಇದು ಕನಿಷ್ಟ ಜವಾಬ್ದಾರಿಯುತ ಪ್ರತಿಕ್ರಿಯೆ.

ರಾಜ್ಯದ ಮುಖ್ಯಮಂತ್ರಿಯಾಗಲು, ಮುಂದುವರೆಯಲೂ ದೇಶದ ಎರಡು ಪ್ರಮುಖ ರಾಜಕೀಯ ಪಕ್ಷಗಳಲ್ಲೂ ಹೈಕಮಾಂಡಿಗೆ ನೂರಾರು/ಸಾವಿರಾರು ಕೋಟಿ ರೂ, ಲಂಚ ಕೊಡಬೇಕು ಎನ್ನುವುದು ಗಂಭೀರ ವಿಷಯ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅರ್ಥಹೀನಗೊಳಿಸುವ ಮತ್ತು ಬುಡಮೇಲು ಮಾಡುವ ಸಂಗತಿ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಯಬೇಕು. ಯೆಡಿಯೂರಪ್ಪನವರು ಕೆಪಿಸಿಸಿ ಸೆಲ್ ನಂತೆ ತಮ್ಮ ಬಳಿ ಇರುವ ಪುರಾವೆ ಜತೆ ಎಸಿಬಿ ಗೆ ದೂರು ಸಲ್ಲಿಸಬೇಕು. ಕೆಪಿಸಿಸಿ ಸೆಲ್ ಸಲ್ಲಿಸಿರುವ ಮತ್ತು ಯೆಡಿಯೂರಪ್ಪನವರು ಸಲ್ಲಿಸಲಿರುವ ದೂರುಗಳ ಬಗ್ಗೆ ಉನ್ನತ ಮಟ್ಟದ ವೇಗದ ತನಿಖೆ ನಡೆಯಬೇಕು. ಮೇಲುನೋಟಕ್ಕೆ ದೂರಿನಲ್ಲಿ ಹುರುಳಿರುವುದು ಕಂಡು ಬಂದರೆ ಸಂಬಂಧ ಪಟ್ಟವರು ರಾಜೀನಾಮೆ ಕೊಡಬೇಕು. ಇದು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಒತ್ತಾಯವಾಗಬೇಕು.

ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜಯಲಲಿತಾ ಅವರ ಆದಾಯ ಮೀರಿದ ಆಸ್ತಿ ಪ್ರಕರಣ, ದೀರ್ಘ ವಿಳಂಬದ ನಂತರವಾದರೂ ಅಂತಿಮವಾಗಿ ಶಿಕ್ಷೆಯಲ್ಲಿ ಕೊನೆಗೊಂಡಿರುವುದು ಉತ್ತಮ ಬೆಳವಣಿಗೆ. ಆದರೆ ಯೆಡಿಯೂರಪ್ಪನವರ ಭ್ರಷ್ಟಾಚಾರ ಪ್ರಕರಣದಲ್ಲಿ ಅವರು ಖುಲಾಸೆಯಾಗಿರುವುದು, ವ್ಯಾಪಂನಂತಹ ಭೀಕರ ಹಗರಣ ಇನ್ನೂ ಒಂದು ತಾರ್ಕಿಕ ಅಂತ್ಯ ಕಾಣದೆ ಸಾಕ್ಷಿಗಳ ನಿಗೂಢ ಸಾವು/ಕೊಲೆಗಳಾಗುತ್ತಿರುವುದು, ಮೋದಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಕೇಂದ್ರ ತನಿಖಾ ಸಂಸ್ಥೆಗಳ ದಾಳಿಯಲ್ಲಿ ಸಿಕ್ಕಿದ ಡೈರಿಯಲ್ಲಿ ನಮೂದಿಸಿದ ಮಾಹಿತಿ ಆಧಾರದ ಮೇಲೆ ತನಿಖೆ ನಡೆಯಬೇಕು ಎಂಬ ಅರ್ಜಿಯನ್ನು (ಹವಾಲಾ ಡೈರಿಗಳ ಮಾಹಿತಿ ಆಧಾರದ ಮೇಲೆ ತನಿಖೆಗೆ ಅನುಮತಿ ನೀಡಿದ್ದ ಹಿಂದಿನ ನಿರ್ಣಯ ಬದಲಿಸಿ)ಸುಪ್ರೀಂ ಕೋರ್ಟೂ ಸಹ ತಳ್ಳಿ ಹಾಕಿರುವುದು - ಮುಖ್ಯಮಂತ್ರಿಗಳ ಮಟ್ಟದಲ್ಲಿ ಭ್ರಷ್ಟಾಚಾರ ತಡೆಗೆ ದೃಢ ಹೆಜ್ಜೆಯಿಡುವ ಭರವಸೆಯನ್ನಂತೂ ಕೊಡುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಬಿಜೆಪಿ-ಕಾಂಗ್ರೆಸುಗಳ ಎರಡೂ ಆಪಾದನೆಗಳ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ಎಲ್ಲಾ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಬಲವಾಗಿ ಒತ್ತಾಯಿಸಬೇಕು. ಬಿಜೆಪಿ-ಕಾಂಗ್ರೆಸುಗಳ ಆಪಾದನೆಗಳ ಮೇಲಾಟಗಳ ಪ್ರಹಸನವನ್ನು, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವ, ಬೂರ್ಜ್ವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಯಲುಗಳಿಸುವ ಅವಕಾಶವಾಗಿ ಪರಿವರ್ತಿಸಬೇಕು.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಪರಿಷ್ಕೃತ ಪಠ್ಯ : ರಾಜಕೀಯ ಬದ್ಧತೆ ಅಗತ್ಯ

ಎಸ್.ವೈ. ಗುರುಶಾಂತ್

ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಪಠ್ಯ ಪುಸ್ತಕಗಳನ್ನು ಪರಿಷ್ಕರಿಸಿ ಸರಕಾರಕ್ಕೆ ವರದಿ ಸಲ್ಲಿಸಿಯಾಗಿದೆ. ಪರಿಷ್ಕೃತ ಪಠ್ಯ ಪುಸ್ತಕಗಳ ಜಾರಿಗೆ ತರುವ ಹೊಣೆಯೀಗ ರಾಜ್ಯ ಸರ್ಕಾರದ್ದು. 'ಈ ವರ್ಷದಿಂದಲೇ ಅವನ್ನು ಅಳವಡಿಸಿಕೊಳ್ಳಲಾಗುವುದು' ಎಂದು ಶಿಕ್ಷಣ ಸಚಿವ ತನ್ವೀರ್ ಸೇಠ್ ಹೇಳಿರುವುದು ಸ್ವಾಗತಾರ್ಹ. ಆದರೆ ಅದು ಜಾರಿಯಾದೀತೆ? ಎಂಬ ಅನುಮಾನ ಕಾಡದೇ ಇರದು. ಯಾಕೆಂದರೆ ಈ ಮೊದಲು ಈ ಸಚಿವರೇ ಇವು ಈ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸುವುದಿಲ್ಲ, 2018ರಲ್ಲೇ ಸಾದ್ಯ ಎಂಬ ಹೇಳಿಕೆಯನ್ನೂ ನೀಡಿದ್ದರು. ಸಾಕಷ್ಟು ಒತ್ತಡದ ಬಳಿಕ ಈ ಸಾಲಿನಲ್ಲಿ ಜಾರಿಗೊಳಿಸುವ ಆಶ್ವಾಸನೆ ನೀಡಿದ್ದಾರೆ.

ಶಿಕ್ಷಣದಂತಹ, ಅದರಲ್ಲೂ ಪಠ್ಯಪುಸ್ತಕದ ವಸ್ತು-ವಿಷಯಗಳಲ್ಲಿ ಆಗಲೇಬೇಕಾದ ಬದಲಾವಣೆ ಪರಿಷ್ಕರಣೆ ಕುರಿತಂತೆ ಸರ್ಕಾರದ ಅತಂತ್ರ ನಿಲುವು ಆತಂಕಕಾರಿ. ಇಂತಹುದೇ ಅನಿಶ್ಚಿತ ನಿಲುವುಗಳು ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಪದೇ ಪದೇ ತೆಗೆದುಕೊಳ್ಳುತ್ತಾ ಬಂದಿದೆ. ಮೂಢನಂಬಿಕೆ ನಿಷೇದ ಮಸೂದೆ ವಿಷಯವೂ ಅಷ್ಟೇ. ಇಡೀ ಸರ್ಕಾರಕ್ಕೆ ಬದ್ಧತೆಯ ಕೊರತೆಯಿದೆ. ಹಿಂದೆ ಬಿಜೆಪಿ ಪಕ್ಷ ಬಹುಮತದಿಂದ ಅಧಿಕಾರಕ್ಕೆ ಬರುವ ಮೊದಲೇ ಆರೆಸ್ಸೆಸ್ ಶಿಕ್ಷಣದ ಪಠ್ಯದಲ್ಲಿ ಏನೆಲ್ಲಾ ಬದಲಾವಣೆಗಳು ಬರಬೇಕೆಂದು ನಿರ್ದಿಷ್ಟವಾದ ಸೂಚನೆಗಳೊಂದಿಗೆ ಸಿದ್ಧವಾಗಿತ್ತು. ಸರ್ಕಾರ ಅಧಿಕಾರಕ್ಕೇರುತ್ತಿದ್ದಂತೆ ಪಠ್ಯಗಳನ್ನು ತನ್ನ ಕೋಮುವಾದೀ ಸಿದ್ಧಾಂತಕ್ಕೆ ಅನುಗುಣವಾಗಿ ಬದಲಾಯಿಸಿತು. ಕನಿಷ್ಠ ನಮ್ಮ ದೇಶದ ಸಂವಿಧಾನಕ್ಕೆ, ಪರಂಪರೆಗೆ, ನಾಡಿನ ಭವಿಷ್ಯದ ಬಗ್ಗೆ ಎಳ್ಳಷ್ಟು ಕಾಳಜಿ, ಗೌರವ ತೋರದೇ ಎಳೆಯ ಮೆದುಳುಗಳಲ್ಲಿ ಮತೀಯವಾದದ ವಿಷ ಪ್ರಾಶಸನ ಮಾಡಿಯಾಗಿತ್ತು. ಆಗ ಎದ್ದು ಬಂದ ಸಾರ್ವಜನಿಕ ಆಕ್ಷೇಪಗಳು, ಪ್ರತಿಭಟನೆಯನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಪೂರ್ಣವಾಗಿ ನಿರ್ದಾಕ್ಷಿಣ್ಯವಾಗಿ ನಿರ್ಲಕ್ಷಿಸಿತು. 2013 ರಲ್ಲಿ ರಾಜ್ಯದ ಜನ ಬಿಜೆಪಿಯ ದುರಾಡಳಿತಕ್ಕೆ ಬೇಸತ್ತು ಸೋಲಿಸಿದರು. ಆಗ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈ ವಿಷಯವನ್ನು ತೆಗೆಯಲು ಮೀನಮೇಷ ಎಣಿಸಿತ್ತು, ಪರಿಷ್ಕರಣೆಗಾಗಿ ಭಾರೀ ಒತ್ತಡ ಸೃಷ್ಟಿಸಿದ್ದು, ಬಳಿಕ ಹಿರಿಯ ಸಾಹಿತಿ ಡಾ॥ ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಸಮಿತಿಯೊಂದು ರಚನೆಯಾಗಿತ್ತು.

ಪ್ರೊ. ಬರಗೂರ ರವರ ಸಮಿತಿ ಕಾಲಮಿತಿಯಲ್ಲಿ ಪರಿಷ್ಕರಿಸಿ ನೀಡಿದೆ. ಮಕ್ಕಳಲ್ಲಿ ವೈಜ್ಞಾನಿಕ ದೃಷ್ಟಿಕೋನ, ಕೋಮುಸೌಹಾರ್ಧತೆ, ಪ್ರಾದೇಶಿಕ ಭಿನ್ನತೆಗಳನ್ನು ಒಳಗೊಳ್ಳುವುದು, ಮುಖ್ಯವಾಗಿ ಕನ್ನಡೇತರ ಪಠ್ಯಗಳಲ್ಲಿ ಕನ್ನಡದ ಸಾಹಿತ್ಯ-ಸಾಂಸ್ಕೃತಿ ಪರಿಚಯಕ್ಕೂ ಒತ್ತು ನೀಡಿದೆ ಎಂಬುದನ್ನೂ ದೊರೆತಿರುವ ಮಾಹಿತಿಗಳಿಂದ ತಿಳಿಯಬಹುದು. ಶೈಕ್ಷಣಿಕ ಅಗತ್ಯಗಳು, ಸಾಮರ್ಥ್ಯದ ಹೆಚ್ಚಳ ಹಾಗೂ ಸಾಮಾಜಿಕ ಕಾಳಜಿಗಳನ್ನು ಈ ಸಮಿತಿ ಹೊಂದಿರುವುದು ಉಲ್ಲೇಖನೀಯ. ಹೀಗಾಗಿಯೇ ಪರಿಷ್ಕರಣೆಯಾಗಿದೆ.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು ಶಿಕ್ಷಣ ಕ್ಷೇತ್ರದಲ್ಲಿ ಭಾರೀ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ. ಕೆಲವನ್ನೂ ಮಾಡಿಯೂ ಆಗಿದೆ. ಸಂಘ ಪರಿವಾರಕ್ಕೆ ಮೊದಲ ಗುರಿ ಶಿಕ್ಷಣ. ಈ ಮೂಲಕವೇ ಇಡೀ ದೇಶದ ಎಳೆಯ, ಯುವ ಮನಸ್ಸುಗಳನ್ನು ಸುಲಭವಾಗಿ ಬುಡಮೇಲುಗೊಳಿಸಬಹುದು ಎಂಬುದು ಅದರ ಕಾರ್ಯಸೂಚಿ. ಹಿಂದೆ ಅಟಲ್ ಬಿಹಾರ ವಾಜಪೇಯಿ ಸರ್ಕಾರ ಮಾಡಿದ ಅಪಾರ ಹಾನಿ, ಅಲ್ಲದೇ ಬಿಜೆಪಿ ಆಡಳಿತವಿದ್ದ ಇರುವ ಮಧ್ಯಪ್ರದೇಶ, ರಾಜಸ್ತಾನ್, ಉತ್ತರ ಪ್ರದೇಶ್, ಛತ್ತೀಸ್‌ಘಡ್ ಮುಂತಾದೆಡೆಗಳಲ್ಲಿಯೂ ಫ್ಯಾಶಿಸ್ಟ್ ಮನೋಭಾವಕ್ಕನುಗುಣವಾಗಿ, ಪಠ್ಯಗಳನ್ನು ಬದಲಾಯಿಸಿದೆ. ಬಿಜೆಪಿ ನೇತೃತ್ವದ ಎನ್‌ಡಿಎಸರ್ಕಾರ ಸೋತು ಕಾಂಗ್ರೆಸ್ ನೇತೃತ್ವದ ಯುಪಿಎ - 1, ಯುಪಿಎ - 2 ಬಂದಾಗ ಕೋಮುವಾದಿ ವಿಷ ತೆಗೆಯಬೇಕೆಂದು ಒತ್ತಾಯಿಸಿದರೂ, ಮನಮೋಹನ್ ಸಿಂಗ್ ಸರಕಾರ ಪೂರ್ಣವಾಗಿ ನಿರ್ಲಕ್ಷಿಸುತ್ತಾ ಬಂದಿದ್ದು ಕ್ರೂರ ಸತ್ಯ. ಈಗ ಮೋದಿ ಸರ್ಕಾರ ಅದನ್ನು ಮತ್ತಷ್ಟು ಹೆಚ್ಚಿಸಲು, ಶಿಕ್ಷಣ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಕತ್ತನ್ನೇ ಹಿಸುಕುತ್ತಾ ಹೊರಟಿರುವಾಗ ಕರ್ನಾಟಕದಲ್ಲಿನ ಈ ಪಠ್ಯ ಪರಿಷ್ಕರಣೆಗೆ ಸಾಮಾಜಿಕ, ರಾಜಕೀಯ ಇಚ್ಛಾಶಕ್ತಿ ತೋರಬೇಕಿದೆ.

ಆದರೆ ಈಗಿನ ಸನ್ನಿವೇಶಗಳನ್ನು ಗಮನಿಸಿದರೆ ಪಠ್ಯ ಪರಿಷ್ಕರಣೆ ಜಾರಿ ಮತ್ತು ಅದನ್ನು ಕಾಯ್ದುಕೊಳ್ಳುವುದು ಸವಾಲಿನ ವಿಷಯವು ಆಗಿದೆ. ಇದಕ್ಕೆ ವಿರೋಧ ಪಕ್ಷವಾಗಿರುವ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಅನಗತ್ಯ ತಕರಾರು ಎತ್ತಿದೆ. ಸಭಾತ್ಯಾಗ ಮಾಡಿ ರಂಪಾಟ ಮಾಡುತ್ತಿದೆ ಮತ್ತು ಪರಿಷ್ಕೃತ ಅಂಶಗಳ ಬಗ್ಗೆ ವಿಕೃತಗೊಳಿಸಿ ಪ್ರಚಾರಿಸುತ್ತಿದೆ. ಇದನ್ನು ಎದುರಿಸುವುದು ಅತ್ಯಂತ ಮಹತ್ವದ್ದಾಗಿದೆ. ■

ಮಹಿಳೆಯರ ಮೇಲೆ ದೌರ್ಜನ್ಯ ತಡೆಗೆ ಪುರುಷರ ಸಹಕಾರ ಅಗತ್ಯ
ಚಂದ್ರಕಲಾ ನಂದಾವರ ಮಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ

ವರದಿ: ವಾ.ಉ.

ಮಹಿಳೆ ಇಂದು ಜಾತಿ, ಧರ್ಮದ ಕಟ್ಟುಕಟ್ಟಲೆಯ ಮಧ್ಯೆ ಬದುಕು ಸಾಗಿಸುತ್ತಿದ್ದಾಳೆ. ಸಾಮರಸ್ಯದ ಮಧ್ಯೆ ಕೌಟುಂಬಿಕ ದೌರ್ಜನ್ಯಗಳ ವಿರುದ್ಧವೂ ಹೋರಾಟ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದಾಳೆ. ಮಹಿಳೆಯರ ಮೇಲೆ ದೌರ್ಜನ್ಯ ಪುರುಷ ಪ್ರಾಧಾನ್ಯದ ವ್ಯವಸ್ಥೆಯಲ್ಲೇ ನಡೆಯುತ್ತಿದ್ದು, ದೌರ್ಜನ್ಯ ನಡೆದಾಗ ಅದನ್ನು ತಡೆಯಲು ಪ್ರಜ್ಞಾವಂತ ಪುರುಷರು ಎಲ್ಲಾ ರೀತಿಯ ಸಹಕಾರ ನೀಡಬೇಕು ಎಂಬುದಾಗಿ ಸಾಹಿತಿ ಹಾಗೂ ನಿವೃತ್ತ ಪ್ರಾಂಶುಪಾಲೆ ಚಂದ್ರಕಲಾ ನಂದಾವರ ಹೇಳಿದರು. ಅವರು ಫೆಬ್ರವರಿ 13 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ವತಿಯಿಂದ ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಿಲ್ಲೆಯಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ಖಂಡಿಸಿ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಮಹಿಳೆಯು ಶ್ರೀಮಂತರ ಮತ್ತು ಬಡವರ ಮನೆ ಎಂಬ ವ್ಯತ್ಯಾಸವಿಲ್ಲದೆ ಶೋಷಣೆಗೆ ಒಳಗಾಗುತ್ತಾಳೆ. ಒಲೆಯ ಬಿಸಿಯೂ ಸೇರಿದಂತೆ ಎಲ್ಲ ಸಾಮಾಜಿಕ ಬಿಸಿಯನ್ನು ಆಕೆ ಎದುರಿಸುತ್ತಿದ್ದಾಳೆ ಎಂದ ಚಂದ್ರಕಲಾ ನಂದಾವರ, 500 ಮತ್ತು 1000 ರೂ. ನೋಟಿನ ಮಾನ್ಯತೆ ರದ್ದು ಮಾಡಿದಾಗ ಹೆಚ್ಚು ತೆ-ಊಂದರೆಗೆ ಒಳಗಾಗಿರುವುದು ಮಹಿಳೆಯರು. ಧರ್ಮದ ಹೆಸರಿನಲ್ಲಿ ಮಹಿಳೆಯರ ಮೇಲೆ ಅತ್ಯಂತ ಹೀನಾಯವಾಗಿ ದೌರ್ಜನ್ಯ ನಡೆಯುತ್ತಿದೆ. ಮಹಿಳೆ ಜಾತಿ, ಧರ್ಮ, ಭಾಷೆಯನ್ನು ಮೀರಿ ಬದುಕು ಸಾಗಿಸುತ್ತಿದ್ದಾಳೆ ಎಂದು ಹೇಳಿದರು.

ಪ್ರತಿಭಟನೆಯನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ, ಕಾರ್ಯದರ್ಶಿ ರಾಧಾ ಮೂಡಬಿದರೆ, ಮುಖಂಡರಾದ ಪದ್ಮಾವತಿ ಶೆಟ್ಟಿ, ಕಿರಣಪ್ರಭಾ, ಭಾರತಿ ಬೋಳಾರ ಮಾತನಾಡಿದರು. ನೋಟು ರದ್ಧತಿ ಬಡ ಮಹಿಳೆಯರು ಅದರಲ್ಲೂ ಬೀಡಿ ಕಾರ್ಮಿಕರ ಮೇಲೆ ಮಾಡಿರುವ ಸಂಕಷ್ಟಗಳನ್ನು ಭಾಷಣಕಾರರು ಉಲ್ಲೇಖಿಸಿದರು. ಪಬ್‌ದಾಳಿ, ಹೋಮ್‌ಸ್ಟೇ ದಾಳಿಗಳ ಬಳಿಕವೂ ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಮುಂದುವರಿದಿದೆ. ಉಜಿರೆಯ ಸೌಜನ್ಯ ಕೊಲೆ ಪ್ರಕರಣವಾಗಲೀ, ಪಂಜಿಮೊಗರು ಜೋಡಿ ಕೊಲೆ ಪ್ರಕರಣವಾಗಲೀ ಆರೋಪಿಗಳ ಪತ್ತೆಯಾಗದೇ ನಾಲ್ಕು ವರ್ಷಗಳಿಂದ ಬಾಕಿ ಉಳಿದಿದೆ ಎಂದು ತಿಳಿಸಲಾಯಿತು.

ಸಮುದಾಯ ರಾಜ್ಯ ಉಪಾಧ್ಯಕ್ಷ ವಾಸುದೇವ ಉಚ್ಚಿಲ ಸಮಾರೋಪ ಭಾಷಣ ಮಾಡಿದರು. ಜನವಾದಿ ಮಹಿಳಾ ಸಂಘದ ಜಿಲ್ಲಾ ಮುಖಂಡರಾದ ಗಿರಿಜ, ಪುಷ್ಪಾ, ಭವ್ಯಾ, ಬಬಿತ, ಲಕ್ಷ್ಮಿ, ನಳಿನಾಕ್ಷಿ, ಹೇಮಲತಾ ಧರಣಿಯಲ್ಲಿ ಭಾಗವಹಿಸಿದ್ದರು. ರಾಧಾ ಮೂಡಬಿದರೆ ಸ್ವಾಗತಿಸಿದರು. ಪುಷ್ಪಾ ವಂದಿಸಿದರು.

ನಿವೇಶನ ರಹಿತರಿಂದ ಸುರತ್ಕಲ್‌ನ ಮಂಗಳೂರು ಮನಪಾ–ಉಪಕಚೇರಿಗೆ ಮುತ್ತಿಗೆ:

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ನಿವೇಶನ ರಹಿತರು ಸಿಪಿಐ(ಎಂ) ನೇತೃತ್ವದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿಯನ್ನು ಕಳೆದ ನಾಲ್ಕು ವರ್ಷಗಳ ಹಿಂದೆಯೇ ರಚಿಸಿ ಹಲವಾರು ಬಾರಿ ಹೋರಾಟ, ಸತ್ಯಗ್ರಹಗಳನ್ನು ನಡೆಸುತ್ತಾ ಬಂದಿದೆ. ಇದರ ಫಲವಾಗಿ ಪಾಲಿಕೆ ಆಡಳಿತ ನಿವೇಶನಕ್ಕಾಗಿ ಜಮೀನು ಗುರುತಿಸಿ ಜಿ+2 ಮಾದರಿಯಲ್ಲಿ ಗೃಹ ನಿರ್ಮಾಣಕ್ಕೆ ಯೋಜನೆ ಹಾಕಿಕೊಂಡು ಅರ್ಜಿಗಳನ್ನು ಆಹ್ವಾನಿಸಿದೆ. ಮೊದಲ ಹಂತದಲ್ಲಿ ಪಾಲಿಕೆ ಸಿದ್ಧಮಾಡಿದ ಪಟ್ಟಿಯಲ್ಲಿ ಹೋರಾಟ ಸಮಿತಿಯ ವತಿಯಿಂದ ಸಲ್ಲಿಕೆಯಾದ ಅರ್ಜಿಗಳಲ್ಲಿ ಮೊದಲಿನವುಗಳನ್ನು ಬಿಟ್ಟು, ಆನಂತರ ಪಾಲಿಕೆಗೆ ಸಲ್ಲಿಕೆಯಾದ ಅರ್ಜಿಗಳನ್ನು ಅಂತಿಮ ಫಲಾನುಭವಿ ಪಟ್ಟಿಯಲ್ಲಿ ಸೇರಿಸಿರುವುದು ಕಂಡು ಬರುತ್ತದೆ. ಮಂಗಳೂರು ದಕ್ಷಿಣ ಮತ್ತು ಮಂಗಳೂರು ಉತ್ತರ ವಿಧಾನಸಭಾ ವ್ಯಾಪ್ತಿಯಲ್ಲಿ ಮಂಗಳೂರು ಪಾಲಿಕೆ ಬರುತ್ತಿರುವುದರಿಂದ ಶಾಸಕರುಗಳ ಕೈವಾಡ ನಡೆದಿದ್ದು, ಅರ್ಹ ಅರ್ಜಿದಾರರನ್ನು ಕೈಬಿಡಲಾಗಿದೆ ಎಂಬುದಾಗಿ ಫೆಬ್ರವರಿ 13 ರಂದು ಸುರತ್ಕಲ್ ಮಂಗಳೂರು ಮಹಾನಗರ ಪಾಲಿಕೆ ಉಪಕಚೇರಿಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿಯ ಪ್ರತಿಭಟನಾಕಾರರು ಆರೋಪಿಸಿದರು.

ಸುರತ್ಕಲ್‌ನ ಶಾಸಕರು ನಿವೇಶನ ರಹಿತರ ಪ್ರಶ್ನೆಯಲ್ಲೂ ಕಿಂಚಿತ್ತೂ ಕಾಳಜಿ ತೋರಿಸಿಲ್ಲ. ಪಾಲಿಕೆಯ ಸದಸ್ಯರಿಗೂ ತಿಳಿಸದೆ ಪಾಲಿಕೆ ಕಚೇರಿಯಲ್ಲಿ ಫಲಾನುಭವಿಗಳ ಪಟ್ಟಿ ಸಿದ್ಧ ಮಾಡಲಾಗಿದೆ ಎಂಬುದಾಗಿ ಪ್ರತಿಭಟನಾಕಾರರು ಆಕ್ಷೇಪಿಸಿದರು. ಸಿಪಿಐ(ಎಂ) ಪಕ್ಷದ ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ, ಹೋರಾಟ ಸಮಿತಿಯ ಕಾನೂನು ಸಲಹೆಗಾರ ಕೃಷ್ಣಪ್ಪ ಕೊಂಚಾಡಿ, ಡಿವೈಎಫ್‌ಐ ದ.ಕ. ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂತೋಷ್ ಶಕ್ತಿನಗರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಸಮಿತಿ ಅಧ್ಯಕ್ಷ ಪ್ರೇಮನಾಥ ಜಲ್ಲಿಗುಡ್ಡೆ ಪ್ರತಿಭಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಹೋರಾಟ ಸ್ಥಳಕ್ಕೆ ಶಾಸಕರ ಕಚೇರಿ ಆಪ್ತ ಸಹಾಯಕ ಆಗಮಿಸಿ ಮನವಿ ಸ್ವೀಕರಿಸಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಯೋಗೀಶ್ ಜಪ್ಪಿನಮೊಗರು ಸ್ವಾಗತಿಸಿದರು. ಹೋರಾಟ ಸಮಿತಿಯ ಖಜಾಂಚಿ ಪ್ರಭಾವತಿ ಬೋಳೂರು ವಂದಿಸಿದರು.

ನೋಟು ಅಮಾನ್ಯೀಕರಣ ವಿರುದ್ಧ ಸಿಪಿಐ(ಎಂ) ದ.ಕ.ಜಿಲ್ಲಾದ್ಯಂತ ಪ್ರಚಾರಾಂದೋಲನ:

ನೋಟು ಅಮಾನ್ಯೀಕರಣದ ದುಷ್ಪರಿಣಾಮಗಳನ್ನು ರದ್ದುಮಾಡಬೇಕೆಂದು ಆಗ್ರಹಿಸಿ 10 ಹಕ್ಕೊತ್ತಾಯಗಳನ್ನು ಮುಂದಿಟ್ಟು ಫೆಬ್ರವರಿ 6ರಿಂದ 13ರ ವರೆಗೆ ರಾಷ್ಟ್ರಾದ್ಯಂತ ಜನಾಂದೋಲನವನ್ನು ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಕೊಟ್ಟ ಕರೆಯ ಮೇರೆಗೆ, ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯು ಜಿಲ್ಲಾದ್ಯಂತ ಪ್ರಚಾರಾಂದೋಲನವನ್ನು ರೂಪಿಸಿ ನಡೆಸಿರುತ್ತದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಅಲ್ಲಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿದೆ.

ಬಿ.ಸಿ.ರೋಡಿನಲ್ಲಿ ನಡೆದ ಪ್ರಮುಖ ಸಭೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಭಾಗವಹಿಸಿ ಮಾತನಾಡಿದರು. ಗುರುಪುರ ಕೈಕಂಬದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯ ಯು.ಬಿ.ಲೋಕಯ್ಯ ಭಾಗವಹಿಸಿ ಮಾತನಾಡಿದರು. ಮೂಡಬಿದ್ರೆಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಭಾಗವಹಿಸಿ ಮಾತನಾಡಿದರು. ಉಳ್ಳಾಲದಲ್ಲಿ ನಡೆದ ಸಭೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯ ಕೃಷ್ಣಪ್ಪ ಸಾಲಿಯಾನ್ ಮತ್ತು ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಸುನಿಲ್ ಕುಮಾರ್ ಬಜಾಲ್ ಭಾಗವಹಿಸಿ ಮಾತನಾಡಿರು. ಬೆಳ್ತಂಗಡಿಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ ಭಾಗವಹಿಸಿ ಮಾತನಾಡಿದರು. ಮಂಗಳೂರು ನಗರ ದಕ್ಷಿಣ ಮತ್ತು ಉತ್ತರದಲ್ಲಿ ನಡೆದ ಸಭೆಗಳಲ್ಲಿ ಸಮಿತಿ ಕಾರ್ಯದರ್ಶಿಗಳಾದ ಕೃಷ್ಣಪ್ಪ ಕೊಂಚಾಡಿ ಮತ್ತು ಸುನಿಲ್ ಕುಮಾರ್ ಬಜಾಲ್ ಭಾಗವಹಿಸಿ ಮಾತನಾಡಿದರು.

ಮೈಕ್ರೋ ಫೈನಾನ್ಸ್ ಸಾಲಗಾರರ ಹೋರಾಟ



ಬಲವಂತದ ಮೈಕ್ರೋ ಫೈನಾನ್ಸ್ ಸಾಲ ವಸೂಲಾತಿ ವಿರೋಧಿಸಿ, 1000, 500 ರೂ ನೋಟು ನಿಷೇದದಿಂದ ಜನಸಾಮಾನ್ಯರಿಗಾಗುತ್ತಿರುವ ಸಂಕಷ್ಟದ ವಿರುದ್ಧ ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಮುಂದು ಇಂದು ಮೈಕ್ರೋ ಫೈನಾನ್ಸ್ ಸಾಲಗಾರರ ಹೋರಾಟ ಸಮಿತಿಯಿಂದ ಧರಣಿ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾದ್ಯಕ್ಷರು ಮಾಜಿ ಶಾಸಕರು ಮತ್ತು **CPIM** ರಾಜ್ಯ ಕಾರ್ಯದರ್ಶಿ ಗಳಾದ ಜಿವಿ ಶ್ರೀರಾಮರೆಡ್ಡಿಯವರು ಧರಣಿ ಉದ್ದೇಶಿಸಿ ಮಾತನಾಡಿದರು.

ಸಾಲಗಾರರ ಸಾಲವನ್ನು ಸರಕಾರವೆ ತುಂಬಬೇಕು, ಕಿರುಕುಳ ನೀಡುವ ಮೈಕ್ರೋಫೈನಾನ್ಸ್ ಗಳ ಮೇಲೆ ಕ್ರಮ ಜರುಗಿಸಬೇಕು, ರಾಷ್ಟ್ರೀಕೃತ ಬ್ಯಾಂಕಗಳು ಸಾಲ ನೀಡಲು ನಿಯಮಗಳ ಸಡಿಲಿಕೆಗಾಗಿ, 2000ರೂ ಮುಖಬೆಲೆ ರವಾನೆಯಾದ ಮಾಹಿತಿಯನ್ನು ಬಹಿರಂಗ ಗೊಳಿಸಲು ಒತ್ತಾಯಿಸಲಾಯಿತು.

ಧರಣಿಯಲ್ಲಿ ಮುಖಂಡರಾದ ಉ.ನಾಗರಾಜ್, ನಿರುಪಾದಿ, ಆರತಿ ತಿಪ್ಪಣ್ಣ, ಸುಂಕಪ್ಪ ಗದಗ್, ಗುರುರಾಜ್ ದೇಸಾಯಿ, ಪ್ರಕಾಶ್, ದೊಡ್ಡನಗೌಡ, ಅಮರೇಶ್ ಕಡಗದ್, ಗೀತಾ, ಶಕುಂತಲಾ ಸೇರಿದಂತೆ ಸಾವಿರಾರು ಜನ ಇದ್ದರು.



ಸರ್ಕಾರ ಕೊಟ್ಟ ಮಾತಿಗೆ ತಪ್ಪಬಾರದು ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಸೇವೆಯನ್ನು ಖಾಯಂಗೋಳಿಸುವಂತೆ ಒತ್ತಾಯಿಸಿ ತುಮಕೂರಿನ ಜಿಲ್ಲಾ ಪೌರ ಕಾರ್ಮಿಕರ ಸಂಘಟನ CITU ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವಾರ ಚರಿತ್ರೆಯಲ್ಲಿ

18 ಫೆಬ್ರುವರಿ 1946

ರಾಯಲ್ ಇಂಡಿಯಾ ನೇವಿ (ರಿನ್) ಬಂಡಾಯ



ರಿನ್ ಬಂಡಾಯ ಬ್ರಿಟಿಶ್ ಸರಕಾರವನ್ನು ನಡುಗಿಸಿ 1947ರಲ್ಲಿ ಕೊನೆಗೂ ಭಾರತ ತೊರೆಯಲು ಕಾರಣವಾದ ಪ್ರಮುಖ ಕಾರಣಗಳಲ್ಲಿ ಒಂದು. ಬ್ರಿಟಿಶ್ ಸರಕಾರ 1857ರ ನಂತರ ಸೈನ್ಯದಲ್ಲಿ ಬಂಡಾಯ ಎದುರಿಸಿದ್ದು ರಿನ್ ಬಂಡಾಯದಲ್ಲೇ. ನೌಕಾ ಸೈನಿಕರ ಆಹಾರ ಸೇರಿದಂತೆ ಕೆಟ್ಟ ಸೇವಾ ಪರಿಸ್ಥಿತಿಯ ವಿರುದ್ಧ ಮುಂಬಯಿಯಲ್ಲಿ ಈ ದಿನ ಆರಂಭವಾದ ಬಂಡಾಯ ಕರಾಚಿ ಮತ್ತು ಕಲ್ಕತ್ತಾ ನೌಕಾ ಸೇನಾ ಘಟಕಗಳಿಗೆ ಹಬ್ಬಿ, 66 ಯುದ್ಧ ಹಡಗುಗಳು ಮತ್ತು 10 ಸಾವಿರ ನೌಕಾ ಸೈನಿಕರನ್ನು ಒಳಗೊಂಡಿತ್ತು. ಬಂಡಾಯದ ದಿನಗಳಲ್ಲಿ ನೌಕಾ ಸೈನಿಕರು ಬ್ರಿಟಿಶ್ ಅಧಿಕಾರಿಗಳ ಆಜ್ಞೆ ಪಾಲಿಸಲಿಲ್ಲ ಮತ್ತು ಭಾರತ ಧ್ವಜವನ್ನು ಯುದ್ಧ ಹಡಗುಗಳ ಮೇಲೆ ಹಾರಿಸಿದರು. ರಿನ್ ಬಂಡಾಯಕ್ಕೆ ಮುಂಬಯಿಯ ಕಾರ್ಮಿಕರು ಒಂದು ದಿನದ ಮುಷ್ಕರ ಮತ್ತು ನಾಗರಿಕರು ಹರತಾಳದೊಂದಿಗೆ ಬೆಂಬಲಿಸಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ರಿನ್ ಬಂಡಾಯವನ್ನು ಖಂಡಿಸಿತು. ಕಮ್ಯುನಿಸ್ಟ್ ಪಕ್ಷ ಮಾತ್ರ ಬೆಂಬಲಿಸಿತು. ವಲ್ಲಭಬಾಯಿ ಪಟೇಲ್ ಅವರ ಒತ್ತಡದ ಮೇರೆಗೆ ಬಂಡಾಯ ಹಿಂತೆಗೆದುಕೊಳ್ಳಲಾಯಿತು. ಬಂಡಾಯದಲ್ಲಿ 7 ಸೈನಿಕರು ಮತ್ತು ಒಬ್ಬ ಅಧಿಕಾರಿ ಸತ್ತರು. ವಿಚಾರಣೆಯ ನಂತರ 476 ನೌಕಾ ಸೈನಿಕರನ್ನು ವಜಾ ಮಾಡಲಾಯಿತು. ಸ್ವಾತಂತ್ರ್ಯದ ನಂತರವೂ ಭಾರತ ಮತ್ತು ಪಾಕಿಸ್ತಾನದ ನೌಕಾ ಸೈನ್ಯಕ್ಕೆ ವಜಾ ಆದವರನ್ನು ಪುನಃ ತೆಗೆದುಕೊಳ್ಳಲಾಗಲಿಲ್ಲ ಎಂಬುದು ಗಮನಾರ್ಹ.

ಹೆಣ್ಣುಮಕ್ಕಳನ್ನು ತಲುಪದ 'ಶುಚಿ' ಯೋಜನೆ; ಇದಕ್ಕೆ ಯಾರು ಹೊಣೆ?



ರಾಜ್ಯ ಸರ್ಕಾರ ಈವರೆಗೆ ಘೋಷಿಸಿರುವ ಯೋಜನೆ–ಭಾಗ್ಯಗಳು ಜನಪರವಾಗಿವೆ ಅನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅವುಗಳಲ್ಲಿ ಬಹುಪಾಲು ಎಲ್ಲ ಯೋಜನೆಗಳೂ ವೈಫಲ್ಯದ ಹಾದಿಯನ್ನೇ ತುಳಿದಿವೆ ಎಂದರೆ ಉತ್ಪ್ರೇಕ್ಷೆಯಲ್ಲ. ಘೋಷಣೆಯಾದಾಗಿಂದಲೂ ಸಮರ್ಪಕವಾಗಿ ಅನ್ವಯವಾಗದೆ ಇದ್ದ 'ಶುಚಿ' ಯೋಜನೆ ಕೂಡ ಈ ಸಾಲಿಗೆ ಸೇರುತ್ತದೆ. ಪ್ರೌಢ ಹೆಣ್ಣುಮಕ್ಕಳಿಗೆ ಉಚಿತ ಸ್ಯಾನಿಟರಿ ಪ್ಯಾಡ್ ವಿತರಿಸುವ ಈ ಯೋಜನೆ, ಫಲಾನುಭವಿಗಳನ್ನು ತಲುಪದೆ ಕೊಳೆಯುತ್ತಿದೆ.

ಏನಿದು ಯೋಜನೆ?

ರಾಜ್ಯದಲ್ಲಿ 14 ರಿಂದ 19 ವರ್ಷದ ಒಳಗಿನ ಹೆಣ್ಣುಮಕ್ಕಳು ಋತುಚಕ್ರ ಸಂದರ್ಭದಲ್ಲಿ ಸೋಂಕು ತಗುಲಿ ಗರ್ಭಕೋಶದ ತೊಂದರೆಗೆ ಒಳಗಾಗುತ್ತಿದ್ದಾರೆ ಎಂಬ ಆರೋಗ್ಯ ಇಲಾಖೆಯ ವರದಿ ಹಿನ್ನೆಲೆಯಲ್ಲಿ ಸರ್ಕಾರ 2014ರಲ್ಲಿ 'ಶುಚಿ' ಯೋಜನೆ ಆರಂಭಿಸಿತ್ತು. ಈ ಯೋಜನೆಯ ಪ್ರಕಾರ ಶಿಕ್ಷಣ ಇಲಾಖೆ ವತಿಯಿಂದ ಪ್ರೌಢಶಾಲಾ ಮಕ್ಕಳಿಗೆ, ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿನ (6 ರಿಂದ ಎಸ್ಸೆಸ್ಸೆಲ್ಸಿವರೆಗೆ) ವಿದ್ಯಾರ್ಥಿನಿಯರಿಗೆ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಮೂಲಕ 19 ವರ್ಷದ ಒಳಗಿನ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಅಡಿ ಬರುವ ಶಾಲೆಗಳ ವಿದ್ಯಾರ್ಥಿನಿಯರಿಗೆ ಪ್ಯಾಡ್'ಗಳನ್ನು ಉಚಿತವಾಗಿ ವಿತರಿಸಬೇಕೆಂಬ ಸೂಚನೆಯಿತ್ತು.

ಆರಂಭಿಕ ವರ್ಷದಲ್ಲಿ ಈ ಯೋಜನೆ ಅಡಿಯಲ್ಲಿ ವಿತರಿಸಲ್ಪಟ್ಟ ಪ್ಯಾಡ್'ಗಳು ಪೂರೈಕೆ ಕೊರತೆಯಿಂದ ಕೇವಲ ಪ್ರದರ್ಶನಕ್ಕೆ ಸೀಮಿತವಾಗಿದ್ದವು. ಅರಿವು ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿನಿಯರಿಗೆ ಬಳಕೆಯ ವಿಧಾನ ತೋರಿಸಲಷ್ಟೆ ಅವನ್ನು ಬಳಸುವ ಪರಿಸ್ಥಿತಿ ಇತ್ತು. ಸರ್ಕಾರ 32 ಲಕ್ಷ ಯುವತಿಯರಿಗೆ ಸ್ಯಾನಿಟರಿ ಪ್ಯಾಡ್'ಗಳನ್ನು ವಿತರಿಸುವ ಗುರಿ ಹೊಂದಿದ್ದರೂ ಪೂರೈಕೆ ಮಾತ್ರ ಅದರ ಕಾಲು ಭಾಗದಷ್ಟೂ ಇರಲಿಲ್ಲ. ಈ ಕುರಿತು ಸಾಕಷ್ಟು ಚರ್ಚೆ, ದೂರುಗಳು ಸರ್ಕಾರವನ್ನು ಮುಟ್ಟಿದ ನಂತರ ಪೂರೈಕೆ ಪ್ರಮಾಣದಲ್ಲಿ ಏರಿಕೆ ಕಂಡು ರಾಜ್ಯದ ಬಹುತೇಕ ಎಲ್ಲ ಸರ್ಕಾರಿ ಹೈಸ್ಕೂಲ್ – ಕಾಲೇಜ್'ಗಳನ್ನು ತಲುಪಿತು. ಆದರೆ ಅಲ್ಲಿಂದ ಮುಂದೆ ಬೇರೆಯದೇ ಸಮಸ್ಯೆಗಳು ಶುರುವಾದವು.

ಏನು ಸಮಸ್ಯೆ?

ಮೊದಲನೆಯದಾಗಿ ದಾಸ್ತಾನು ಬಂದು ಬಿದ್ದ ಶುಚಿ ಪ್ಯಾಡ್'ಗಳನ್ನು ವಿದ್ಯಾರ್ಥಿನಿಯರಿಗೆ ಸೂಕ್ತ ತಿಳಿವಳಿಕೆಯೊಂದಿಗೆ ವಿತರಿಸುವ ಕೆಲಸ ಮಾಡುವವರೇ ಇಲ್ಲವಾದರು. ಶಿಕ್ಷಕಿಯರು ಇದನ್ನೊಂದು ಹೆಚ್ಚುವರಿ ಕೆಲಸವೆಂದು ಭಾವಿಸಿ ದೂರವುಳಿದರು. ಸರ್ಕಾರವೂ ವಿತರಣೆ ಕುರಿತಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಲಿಲ್ಲ. ಯೋಜನೆಯ ಪ್ರಕಾರ 15 ದಿನಗಳಿಗೊಮ್ಮೆ ವಿದ್ಯಾರ್ಥಿನಿಯರಿಗೆ 10 ಪ್ಯಾಡ್'ಗಳುಳ್ಳ 'ಶುಚಿ' ಸ್ಯಾನಿಟರಿ ಪ್ಯಾಕೇಟನ್ನು ನೀಡಬೇಕು. ಆದರೆ ತಿಂಗಳಿಗೊಮ್ಮೆ ನೀಡುವ ಪರಿಪಾಠವೂ ಬಹುತೇಕ ಕಡೆ ಇಲ್ಲವಾಗಿದೆ.

ಎರಡನೆಯದಾಗಿ ವಿದ್ಯಾರ್ಥಿನಿಯರಿಗೆ ರಾಜ್ಯ ಸರಕಾರ ಪೂರೈಸ್ತಿರುವ ಪ್ಯಾಡ್ ಗುಣಮಟ್ಟದ್ದಾಗಿಲ್ಲ ಎಂದು ಸ್ವತಃ ವಿದ್ಯಾರ್ಥಿನಿಯರೇ ಅವನ್ನು ನಿರಾಕರಿಸತೊಡಗಿದರು. ಈ ಪ್ಯಾಡ್ ಬಳಕೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಅನ್ನೋದು ವಿದ್ಯಾರ್ಥಿನಿಯರ ದೂರು. ಆದರೆ ಅದನ್ನು ಸರಕಾರಕ್ಕೆ ತಿಳಿಸುವ ಧೈರ್ಯವನ್ನು ಶಿಕ್ಷಣ ಅಧಿಕಾರಿಗಳು ಮಾಡದೇಹೋದರು. ಪರಿಣಾಮ, ಸಾವಿರಾರು ಸಂಖ್ಯೆಯಲ್ಲಿ ಸ್ಯಾನಿಟರಿ ಪ್ಯಾಡ್'ಗಳು ಗೋಡೋನ್'ನಲ್ಲಿ ಕೊಳೆಯುವಂತಾಗಿದೆ.

ಎಸ್ಎಫ್ಐ ಪ್ರತಿಭಟನೆ

ಶುಚಿ ಯೋಜನೆಯ ವೈಫಲ್ಯ ಸರ್ಕಾರ ಮತ್ತು ಶಾಲಾಡಳಿತಕ್ಕೆ ಹೆಣ್ಣುಮಕ್ಕಳ ಮೇಲಿರುವ ನಿರ್ಲಕ್ಷ್ಯ ಧೋರಣೆಯನ್ನು ತೋರಿಸುತ್ತದೆ ಎಂದು ಎಸ್ಎಫ್ಐ ಆರೋಪಿಸಿದೆ. ಋತುಚಕ್ರಅವಧಿಯಸಮಸ್ಯೆಗಳಿಂದಾಗಿ ಹೆಣ್ಣುಮಕ್ಕಳು ಗೈರುಹಾಜರಾಗುವುದು, ಶಾಲೆಯನ್ನೇ ತೊರೆಯುವುದು ನಡೆಯುತ್ತವೆ. ಹೀಗಿರುವಾಗ ಸರ್ಕಾರ ತನ್ನ ಯೋಜನೆಯ ಅನುಷ್ಠಾನಕ್ಕೆ ಮತ್ತು ಗುಣಮಟ್ಟದ ಸ್ಯಾನಿಟರಿ ಪ್ಯಾಡ್ ಪೂರೈಕೆಗೆ ಒತ್ತು ನೀಡಬೇಕಿತ್ತು. ಹಾಗೆ ಮಾಡುವಲ್ಲಿ ಅದು ಸೋತಿದೆಯಾದ್ದರಿಂದ ಸರ್ಕಾರದ ಗಮನ ಸೆಳೆಯಲು ಪ್ರತಿಭಟನೆ ನಡೆಸಲಿದ್ದೇವೆ ಎನ್ನುತ್ತಾರೆ ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ. ಈ ನಿಟ್ಟಿನಲ್ಲಿ ಮೊದಲ ಪ್ರತಿಭಟನೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗುವುದು ಎಂದೂ ಅವರು ತಿಳಿಸಿದ್ದಾರೆ.

•

ಬಂಡವಾಳದಾರರ ಕೋಟಿಗಟ್ಟಲೆ ಸಾಲ ಮನ್ನಾ – ರೈತರ ಸಾಲ ಮನ್ನಾ ಇಲ್ಲ

ಜೇವರ್ಗಿ : 11 ಫೆಬ್ರುವರಿ 2017 ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) ಪ್ರಚಾರ ಆಂದೋಲನ ಬಹಿರಂಗ ಸಭೆ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ವಿ.ಜಿ.ಕೆ. ನಾಯರ ಇವರು ಸಭೆಯನ್ನುದ್ದೇಶಿಸಿ ಮಾತನಾಡಿ ಬಿ.ಜೆ.ಪಿ. ಸರ್ಕಾರ ಚುನಾವಣಾ ಪ್ರಚಾರದಲ್ಲಿ ಕಪ್ಪು ಹಣ ಬಯಲಿಗೆ ತರುತ್ತೇವೆ ಎಂದು ಹೇಳಿ ಎಲ್ಲಾ ಬ್ಯಾಂಕ್ ಖಾತೆಗಳಿಗೆ ಕನಿಷ್ಠ ರೂ. 1500000/– ಜಮಾ ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿಯವರೆಗೆ ಯಾರ ಬ್ಯಾಂಕ್ ಖಾತೆಗೂ ಒಂದು ನಯಾಪೈಸೆ ಹಣ ಜಮಾ ಮಾಡಿಲ್ಲ. ಇದನ್ನು ಮುಚ್ಚಿಕೊಳ್ಳಲು ನೋಟು ರದ್ದತಿ ಆದೇಶ ಜಾರಿ ಮಾಡಿ ಜನಸಾಮಾನ್ಯರಿಗೆ ಗೊಂದಲ ಸೃಷ್ಟಿಮಾಡಿ ಜನ ದುಡಿದ ಜಮಾ ಇಟ್ಟ ಹಣ ಕೈಗೆ ಸಿಗದಂತೆ ಕಾನೂನು ಹೊರಡಿಸಿದ್ದಾರೆ. ಅನ್ನದಾತರ ರೈತರ ಬಗ್ಗೆ ಕಾಳಜಿ ಇಲ್ಲದ ಮೋದಿ ಸರ್ಕಾರ ರೈತರ ಸಾಲ ಮನ್ನಾ ಮಾಡಲು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ವಿಪರ್ಯಾಸವೇನೆಂದರೆ, ಉದ್ಧಿಮೆಯ ಆದಾನಿ ಗ್ರೂಪ್ ಕಂಪನಿಯವರಿಗೆ ಕೋಟಿಗಟ್ಟಲೆ ಸಾಲ ಮನ್ನಾ ಮಾಡಿದ್ದಾರೆ. ಇಂತಹ ಕೆಟ್ಟ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕೆಂದು ಕೇಂದ್ರ ಸರ್ಕಾರದ ವಿರುದ್ಧ ಗುಡಿಗಿದರು.

ಪಕ್ಷದ ಮುಖಂಡರಾದ ಮಾರುತಿ ಮಾನ್ಪಡೆ ಇವರು ಮಾತನಾಡಿ ಬಡವರ ರೇಷನ್ ಕಾರ್ಡಗಳನ್ನು ಬೇಕಾ ಬಿಟ್ಟಿ ರದ್ದು ಮಾಡಿ ಸಿಗುವ ಅಲ್ಪ ಸ್ವಲ್ಪ ಆಹಾರ ದಾನ್ಯಗಳು ಸಿಗದಂತೆ ಮಾಡಿದ್ದಾರೆ. ನಮ್ಮ ರೇಷನ್ ಕಾರ್ಡಗಳು ಏಕೆ ರದ್ದು ಮಾಡಿದ್ದೀರೆಂದು ಸಾರ್ವಜನಿಕರು ಅಧಿಕಾರಿಗಳಿಗೆ ಕೇಳಿದರೆ ಆ ಧಾರ ಕಾರ್ಡ ಲಿಂಕ್ ಮಾಡಿರುವದಿಲ್ಲವೆಂದು ಸುಳ್ಳು ಸಬೂಬ ಹೇಳುತ್ತಾರೆ. ಒಂದು ಬಾರಿಯಲ್ಲ ಕನಿಷ್ಠ 2–3 ಬಾರಿ ರೇಷನ್ ಕಾರ್ಡಗೆ ಆಧಾರ ಕಾರ್ಡ ಲಿಂಕಿಗಾಗಿ ದಾಖಲಾತಿಗಳು ಕೊಟ್ಟರೂ ನಿಮ್ಮ ರೇಷನ್ ಕಾರ್ಡಿಗೆ ಆಧಾರ ಕಾರ್ಡ ಲಿಂಕಾಗಿರುವದಿಲ್ಲವೆಂದು ಆಹಾರ ಕೊಡುವುದನ್ನು ನಿಲ್ಲಿಸುತ್ತಿದ್ದಾರೆ.

ತೊಗರಿ ಬೆಂಬಲ ಬೆಲೆಗಾಗಿ ಸುಮಾರು 2 ತಿಂಗಳಿನಿಂದ ನಿರಂತರ ಹೋರಾಟ ಮಾಡುತ್ತಾ ಬಂದರು ತೊಗರಿಗೆ 75000/– ಬೆಂಬಲ ಬೆಲೆ ನಿಗದಿ ಮಾಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಹಾಗೂ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಕೇಂದ್ರ ಸರ್ಕಾರ ರಾಜ್ಯದ ಮೇಲೆ ಒಬ್ಬರ ಮೇಲೆ ಒಬ್ಬರು ಹಾಕುತ್ತಾ ಗೊಬ್ಬರ ಗಾಡಿಹೊಡೆದಂತೆ ಮಾಡುತ್ತಿದ್ದಾರೆ.

2015–16ನೇ ಸಾಲಿನ ತೊಗರಿ ಬೆಳೆಗೆ ವಿಮೆ ಹಣ ಮಂಜೂರಿಯಾಗಿ ಕನಿಷ್ಠ 5–6 ತಿಂಗಳು ಗತಿಸಿದರೂ ಸಂಪೂರ್ಣವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ವಿಮೆ ಹಣ ಮಂಜೂರಿ ಮಾಡುತ್ತಿಲ್ಲ. ರೈತರ ಮೇಲೆ ಗೂಬೆ ಕೂರಿಸಿ ಒಂದೇ ಆಸ್ತಿಯ ಮೇಲೆ 2 ಕ್ಕಿಂತ ಹೆಚ್ಚಿನ ಬ್ಯಾಂಕಿನಲ್ಲಿ ಸಾಲ ಪಡೆದು ವಿಮೆ ಹಣ ಮಂಜೂರಿ ಮಾಡಿಸಿಕೊಂಡಿದ್ದೀರಿ ಎಂದು ರೈತರಿಗೆ ಹೇಳಿ ಇದಕ್ಕೆ ನಿಮ್ಮ ತಾಲ್ಲೂಕಿನ ಶಾಸಕರು ಸರ್ಕಾರಕ್ಕೆ ದೂರು ಕೊಟ್ಟು ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ. ಎಂದು ಜಿಲ್ಲಾಡಳಿತ ಅಧಿಕಾರಿಗಳು ಸಬೂಬ ಹೇಳುತ್ತಿದ್ದಾರೆ. ಇದಕ್ಕೆಲ್ಲಾ ನಾವು ರೈತರು ಒಪ್ಪುವುದಿಲ್ಲ, ವಿಮೆ ಹಣ ಮಂಜೂರಿಯಾದ ಮೇಲೆ ರೈತರ ಖಾತೆಗಳಿಗೆ ಸಂಪೂರ್ಣ ವಿಮೆ ಹಣ ಜಮಾ ಮಾಡಬೇಕು. ಇಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಭಲವಾದ ಹೋರಾಟ ಮಾಡುತ್ತೇವೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು ಇದೇ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶರಣಬಸಪ್ಪ ಮಮಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುಭಾಸ ಹೊಸಮನಿ, ತಾಲೂಕ ಘಟಕ ಸದಸ್ಯರಾದ ವೆಂಕೋಬರಾವ ವಾಗಣಗೇರಿ, ಸಿದ್ದರಾಮ ಹರವಾಳ, ವಿಠಲ ಯಾತನೂರ, ಈರಣ್ಣ ಚಿಗರಿ ಯಾತನೂರ, ರಾಮು ಹೆಗ್ಗಿನಾಳ, ದೇವಿಂದ್ರ ಅವರಾದ, ಗಜರಾಬಾಯಿ ಹಾಲಗತ್ತರಗಾ, ಗಂಗಮ್ಮ ಯತ್ನಾಳ, ಇನ್ನೂ ನೂರಾರು ಪಕ್ಷದ ಸದಸ್ಯರು ಹಾಜರಿದ್ದರು.

ಸುಭಾಶ ಹೊಸಮನಿ





ಗಂಗಾವತಿಯಲ್ಲಿ SFI ರಾಜ್ಯಸಮ್ಮೇಳನ

ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ, ಖಾಸಗಿ ರಂಗದಲ್ಲಿ ಮೀಸಲಾತಿ ಜಾರಿಗೆ ಆಗ್ರಹಿಸಿ ಇದೇ ತಿಂಗಳು ಫೆ. 23ರಿಂದ 26 ರವರೆಗೆ SFI ನ 14ನೇ ರಾಜ್ಯ ಸಮ್ಮೇಳನ ಗಂಗಾವತಿಯಲ್ಲಿ ಜರುಗಲಿದೆ ಎಂದು SFI ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಹೇಳಿದರು.

ಸಮ್ಮೇಳನದ ಬಹಿರಂಗ ಸಭೆಯನ್ನು ಕೂಡಲ ಸಂಗಮದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮಿಗಳು ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ SFI ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಡಾ.ವಿಕ್ರಂ ಸಿಂಗ್, ಚಿತ್ರನಟ ಚೇತನ್, ಬಳ್ಳಾರಿ ಮಹಾನಗರ ಪಾಲಿಕೆ ಸದಸ್ಯೆ ಪರ್ವೀನ್ ಬಾನು (ತೃತೀಯ ಲಿಂಗಿ) KPRS ಜಿಲ್ಲಾಧ್ಯಕ್ಷ ಉ.ನಾಗರಾಜ್ ಕೇಂದ್ರ ಸಮಿತಿ ಸದಸ್ಯೆ ರೇಣುಕಾ ಕಹಾರ್, ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು SFI ರಾಜ್ಯಾಧ್ಯಕ್ಷ ವಿ.ಅಂಬರೀಶ ವಹಿಸಲಿದ್ದಾರೆ.

ವಿದ್ಯಾರ್ಥಿ ಚಳುವಳಿ ಮುಂದಿರುವ ಸವಾಲುಗಳ ಕುರಿತು SFI ಅಖಿಲ ಭಾರತ ಅಧ್ಯಕ್ಷರಾದ ವಿ.ಪಿ.ಸಾನು ಮಾತನಾಡಲಿದ್ದು, "ಖಾಸಗೀರಂಗದಲ್ಲಿ ಮೀಸಲಾತಿ ಜಾರಿ" ಕುರಿತು ರಾಷ್ಟ್ರೀಯ ಕಾನೂನು ಶಾಲೆಯ ಸಂಶೋಧಕರಾದ ಡಾ. RV ಚಂದ್ರಶೇಖರ್ ಮಾತನಾಡಲಿದ್ದಾರೆ. ಎಸ್.ಎಫ್.ಐ ಸಂಸ್ಥಾಪಕ ಮುಖಂಡರು, ಮಾಜಿ ಶಾಸಕರಾದ GV ಶ್ರೀರಾಮರೆಡ್ಡಿ, CITU ಜಿಲ್ಲಾಧ್ಯಕ್ಷ ನಿರುಪಾದಿ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ SFI ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ, ಜಿಲ್ಲಾಧ್ಯಕ್ಷ ಅಮರೇಶ್ ಕಡಗದ್, CITU ಜಿಲ್ಲಾ ಕಾರ್ಯದರ್ಶಿ ಖಾಸಂ ಸರ್ದಾರ. ಮುಖಂಡರಾದ ಸುಬಾನ್ ಸಯ್ಯದ್, ಶಿವಕುಮಾರ್, ನಂದೀಶ್, ರಾಜ ಕುಮಾರ್, ಕೃಷ್ ಇದ್ದರು.

ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆ: ಒಣ ಕಸರತ್ತಿನ ವರದಿ

ಕೇಂದ್ರ ಸರ್ಕಾರವು ಇತ್ತೀಚಿಗೆ ಸಂಸತ್ತಿನಲ್ಲಿ ಮಂಡಿಸಿರುವ 2016–17ನೆಯ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ಅನಾಣ್ಯೀಕರಣ ದೇಶದ ಒಳಿತಿಗಾಗಿ ಅನುಷ್ಠಾನಗೊಳಿಸಲಾಗಿದೆ ಎಂಬುದನ್ನು ಮತ್ತು ಅದರಿಂದ ಜಿಡಿಪಿ ಮೇಲೆ ಉಂಟಾಗಿರುವ ಪರಿಣಾಮ ತೀವ್ರತರವಾದುದಲ್ಲ ಎಂಬುದನ್ನು ಸಾಧಿಸಲು ಇನ್ನಿಲ್ಲದ ಪ್ರಯತ್ನವನ್ನು–ಕಸರತ್ತನ್ನು ಅದರಲ್ಲಿ ಮಾಡಿರುವುದನ್ನು ಕಾಣಬಹುದು. ಆದರೆ ಅದರಲ್ಲಿ ಅದರ ಕರ್ತೃವಾದ ಅರವಿಂದ ಸುಬ್ರಮಣ್ಯಮ್ ಏನೆಲ್ಲ ಕಸರತ್ತು ಮಾಡಿದರೂ ಆರ್ಥಿಕತೆಯ ವಸ್ತುಸ್ಥಿತಿಯು ಅನಾವರಣ ಮಾಡಿರುವ ಅನಾಣ್ಯೀಕರಣದ ಅದ್ವಾನಗಳನ್ನು ಮತ್ತು ಅದು ಜನಸಾಮಾನ್ಯರ ಬದುಕನ್ನು ಮೂರಾಬಟ್ಟೆ ಮಾಡಿರುವುದನ್ನು ಮುಚ್ಚಿಡುವುದು ಅವರಿಗೆ ಸಾಧ್ಯವಾಗಿಲ್ಲ. ನಮ್ಮ ದೇಶದ ಜಿಡಿಪಿ ಬೆಳವಣಿಗೆ ಮೇಲೆ ಅನಾಣ್ಯೀಕರಣವು ಉಂಟು ಮಾಡಿರುವ ಅಘಾತವನ್ನು ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ವರದಿ ಮಾಡಿವೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ(ಐಎಮ್‌ಎಫ್), ಸೆಂಟರ್ ಫಾರ್ ಮಾನಿಟರಿಂಗ್ ದಿ ಇಂಡಿಯನ್ ಎಕಾನಮಿ(ಸಿಎಮ್‌ಐಇ), ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ), ವಿಶ್ವಸಂಸ್ಥೆ ಮುಂತಾದವು ಅನಾಣ್ಯೀಕರಣದಿಂದಾಗಿ 2016–17ನೆಯ ಸಾಲಿನಲ್ಲಿ ಶೇ.7.5 ಪ್ರಮಾಣದಲ್ಲಿ ನಡೆಯಬೇಕಾಗಿದ್ದ ಜಿಡಿಪಿ ಬೆಳವಣಿಗೆ ಪ್ರಮಾಣ ಶೇ.6.5 ಕ್ಕೆ ಇಳಿಯಬಹುದಾದ ಸಾಧ್ಯತೆಯನ್ನು ಗುರುತಿಸಿವೆ.

ತಕ್ಷಣದ ನೋವು ಬಡವರಿಗೆ ದೀರ್ಘಾವಧಿ ಲಾಭ ಉಳ್ಳವರಿಗೆ

ಈ ಎಲ್ಲ ಸಂಸ್ಥೆಗಳು ಜಿಡಿಪಿಯ ಬೆಳವಣಿಗೆ ಕುಸಿತಕ್ಕೆ ಅನಾಣ್ಯೀಕರಣವೇ ಕಾರಣ ಎಂಬುದನ್ನು ಸಾರುತ್ತಿವೆ. ಈ ಸಂಸ್ಥೆಗಳು ಅನಾಣ್ಯೀಕರಣದ ಪರಿಣಾಮಗಳು ಕೇವಲ 2016–17ಕ್ಕೆ ಮಾತ್ರ ಸೀಮಿತವಾಗಿರದೆ ಅದು ಎರಡು–ಮೂರು ವರ್ಷ ಮುಂದುವರಿಯುವ ಸಾಧ್ಯತೆಯನ್ನು ವರದಿ ಮಾಡುತ್ತಿವೆ. ಅನಾಣ್ಯೀಕರಣವು ತಕ್ಷಣದಲ್ಲಿ ನೋವನ್ನುಂಟು ಮಾಡಿದರೂ ಅದರ ದೀರ್ಘಾವಧಿ ಲಾಭಗಳು ಅಪಾರ ಎಂಬುದನ್ನು ಪ್ರಚುರ ಪಡಿಸಲು ಕೇಂದ್ರ ಸರ್ಕಾರ ಹೆಣಗಾಡುತ್ತಿದೆ ಮತ್ತು ಆರ್ಥಿಕ ಸಮೀಕ್ಷೆಯಲ್ಲಿ ಅರವಿಂದ್ ಸುಬ್ರಮಣ್ಯಮ್ ಇದಕ್ಕಾಗಿ ಹರಸಾಹಸ ಪಟ್ಟಿದ್ದಾರೆ. ಅದರಲ್ಲಿ ಅವರು ಯಶಸ್ವಿಯಾಗಿಲ್ಲ ಎಂಬುದನ್ನು ಅನೇಕ ವಿದ್ವಾಂಸರು ದೃಢಪಡಿಸಿದ್ದಾರೆ. ಇಲ್ಲಿರುವ ಮತ್ತೊಂದು ಕಟುಸತ್ಯವನ್ನು ಗುರುತಿಸಬೇಕು. ಅದೇನೆಂದರೆ ಅನಾಣ್ಯೀಕರಣ ಮಾತ್ರವಲ್ಲ, ಅದು ಯಾವುದೇ ಸುಧಾರಣೆಯಾದರೂ ಅವುಗಳ ತಕ್ಷಣದ ನೋವು ಸಮಾಜದ ವಂಚಿತರಿಗೆ, ಅಂಚಿನಲ್ಲಿರುವವರಿಗೆ ಮಾತ್ರ ಉಂಟಾದರೆ ಮತ್ತು ಅದರ ದೀರ್ಘಾವಧಿ ಲಾಭಗಳು(ಲಾಭಗಳು ಅನ್ನುವುದಿದ್ದರೆ)ಉಳ್ಳವರಿಗೆ ದೊರೆಯುತ್ತವೆ ಎಂಬುದು ಲಾಗಾಯ್ತಿನಿಂದ ಅನುಭವಕ್ಕೆ ಬಂದಿರುವ ಸಂಗತಿಯಾಗಿದೆ.

ಅನಾಣ್ಯೀಕರಣವು ತಕ್ಷಣದಲ್ಲಿ ನೋವನ್ನುಂಟು ಮಾಡಿದರೂ ಅದರ ದೀರ್ಘಾವಧಿ ಲಾಭಗಳು ಅಪಾರ ಎಂಬುದನ್ನು ಪ್ರಚುರ ಪಡಿಸಲು ಕೇಂದ್ರ ಸರ್ಕಾರ ಹೆಣಗಾಡುತ್ತಿದೆ ಮತ್ತು ಆರ್ಥಿಕ ಸಮೀಕ್ಷೆಯಲ್ಲಿ ಅರವಿಂದ್ ಸುಬ್ರಮಣ್ಯಮ್ ಇದಕ್ಕಾಗಿ ಹರಸಾಹಸ ಪಟ್ಟಿದ್ದಾರೆ. ಅದರಲ್ಲಿ ಅವರು ಯಶಸ್ವಿಯಾಗಿಲ್ಲ ಎಂಬುದನ್ನು ಅನೇಕ ವಿದ್ವಾಂಸರು ದೃಢಪಡಿಸಿದ್ದಾರೆ. ಇಲ್ಲಿರುವ ಮತ್ತೊಂದು ಕಟುಸತ್ಯವನ್ನು ಗುರುತಿಸಬೇಕು. ಅದೇನೆಂದರೆ ಅನಾಣ್ಯೀಕರಣ ಮಾತ್ರವಲ್ಲ, ಅದು ಯಾವುದೇ ಸುಧಾರಣೆಯಾದರೂ ಅವುಗಳ ತಕ್ಷಣದ ನೋವು ಸಮಾಜದ ವಂಚಿತರಿಗೆ, ಅಂಚಿನಲ್ಲಿರುವವರಿಗೆ ಮಾತ್ರ ಉಂಟಾದರೆ ಮತ್ತು ಅದರ ದೀರ್ಘಾವಧಿ ಲಾಭಗಳು(ಲಾಭಗಳು ಅನ್ನುವುದಿದ್ದರೆ) ಉಳ್ಳವರಿಗೆ ದೊರೆಯುತ್ತವೆ ಎಂಬುದು ಲಾಗಾಯ್ತಿನಿಂದ ಅನುಭವಕ್ಕೆ ಬಂದಿರುವ ಸಂಗತಿಯಾಗಿದೆ.

ಅನಾಣ್ಯೀಕರಣವನ್ನು ತರಾತುರಿಯಲ್ಲಿ ಮತ್ತು ಪೂರ್ವ ಸಿದ್ಧತೆಯಿಲ್ಲದೆ ಜಾರಿಗೊಳಿಸಲಾಗಿದೆ ಎಂಬುದು ಇಂದು ಸ್ಪಷ್ಟವಾಗಿದೆ. ಇತ್ತೀಚಿಗೆ ರಿಸರ್ವ್ ಬ್ಯಾಂಕಿನ ಗೌರ್ವನರ್ ಆರ್ಥಿಕತೆಯಲ್ಲಿ ಚಲಾವಣೆಯಲ್ಲಿರುವ ಹಣದ ಪ್ರಮಾಣ ಎಷ್ಟಿದೆ ಎಂಬುದು ಮುಂದಿನ ಜೂನ್ ತಿಂಗಳಲ್ಲಿ ತಿಳಿದು ಬರುತ್ತದೆ ಎಂದು ಹೇಳಿದ್ದಾರೆ. ದೇಶದ ಕೇಂದ್ರೀಯ ಬ್ಯಾಂಕೊಂದಕ್ಕೆ ಆರ್ಥಿಕತೆಯಲ್ಲಿ ಚಲಾವಣೆಯಲ್ಲಿರುವ ಹಣವನ್ನು ಮಾಪನ ಮಾಡಲು ಆರು ತಿಂಗಳು ಹಿಡಿದರೆ ಆ ಆರ್ಥಿಕತೆಯನ್ನು ದೇವರೇ (ದೇವರು ಅನ್ನುವುದು ಇದ್ದರೆ) ಕಾಪಾಡಬೇಕು. ನವೆಂಬರ್ 08 ರಂದು ರೂ.500 ಮತ್ತು ರೂ.1000 ನೋಟುಗಳನ್ನು ರದ್ದು ಮಾಡಿದ ಮೇಲೆ ಎಷ್ಟು ನಗದು ಹಣ ಬ್ಯಾಂಕಿಂಗ್ ವಲಯಕ್ಕೆ ವಾಪಸ್ಸು ಬಂದಿದೆ? ಎಷ್ಟು ಕಪ್ಪು ಹಣವನ್ನು ವಶಪಡಿಸಿಕೊಳ್ಳಲಾಗಿದೆ? ಮರುನಾಣ್ಯೀಕರಣದ ಮೂಲಕ ಆರ್ಥಿಕತೆಗೆ ಸರಬರಾಜು ಮಾಡಿದ ಹಣವೆಷ್ಟು? ಮುಂತಾದ ಸಂಗತಿಗಳ ಬಗ್ಗೆ ರಿಸರ್ವ್ ಬ್ಯಾಂಕಿಗೆ ಮಾಹಿತಿ ನೀಡುವುದು ಇಂದಿಗೂ ಸಾಧ್ಯವಾಗಿಲ್ಲ. ಅನಾಣ್ಯೀಕರಣದ ವೈಫಲ್ಯಕ್ಕೆ ಮತ್ತು ರಿಸರ್ವ್ ಬ್ಯಾಂಕಿನ ಸ್ವಾಯತ್ತತೆಗೆ ದಕ್ಕೆ ಬಂದಿರುವುದಕ್ಕೆ ಇವುಗಳಿಗಿಂತ ಇನ್ನೇನು ಪುರಾವೆಗಳು ಬೇಕು?

ಕಪ್ಪು ಹಣ ನಿಗ್ರಹಕ್ಕೆ ಮತ್ತು ಖೋಟಾ ನೋಟುಗಳ ಚಲಾವಣೆಯನ್ನು ತಡೆಯಲು ಅಗತ್ಯವಾದ ಕ್ರಮಗಳೆಂದರೆ ತೆರಿಗೆ ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವುದು ಮತ್ತು ಹಣದ ಚಲಾವಣೆ ವಾಸ್ತುಶಿಲ್ಪವನ್ನು ಸುಧಾರಿಸುವುದು. ಅದು ಬಿಟ್ಟು ಅನಾಣ್ಯೀಕರಣವು ಇದಕ್ಕೆ ಸೂಕ್ತ ಕ್ರಮವಲ್ಲ.

ನಗದಿನ ಪ್ರಮಾಣ ಮತ್ತು ಭ್ರಷ್ಟಾಚಾರ

ಅನಾಣ್ಯೀಕರಣದ ಹಿನ್ನೆಲೆಯಲ್ಲಿ ಅರವಿಂದ್ ಸುಬ್ರಮಣ್ಯಮ್ ಅವರು ತಾವು ಸಿದ್ಧಪಡಿಸಿರುವ ಆರ್ಥಿಕ ಸಮೀಕ್ಷೆಯಲ್ಲಿ ಎರಡು ವಿಚಿತ್ರ ಪ್ರಮೇಯಗಳನ್ನು ಮಂಡಿಸಿದ್ದಾರೆ. ಮೊದಲನೆಯದು: ಯಾವ ಆರ್ಥಿಕತೆಯಲ್ಲಿ ನಗದು ಹಣದ ಸರಬರಾಜು ಅಧಿಕವಾಗಿರುತ್ತದೊ ಅಲ್ಲಿ ಭ್ರಷ್ಟಾಚಾರವು ಅಧಿಕವಾಗಿರುತ್ತದೆ. ಎರಡನೆಯದು: ಅಧಿಕ ಮೌಲ್ಯದ ನೋಟುಗಳು ಮತ್ತು ಭ್ರಷ್ಟಾಚಾರಗಳ ನಡುವೆ ಅನುಲೋಮ ಸಂಬಂಧವಿದೆ. ಎರಡನೆಯದರ ಬಗ್ಗೆ ಮೊದಲು ಚರ್ಚೆ ಮಾಡೋಣ. ಒಂದು ವೇಳೆ ಎರಡನೆಯ ಪ್ರಮೇಯವು ನಿಜವಾಗಿಯೂ ಆಚರಣೆಯಲ್ಲಿದ್ದರೆ ಏಕೆ ಸರ್ಕಾರ ನವೆಂಬರ್ 08 ರಂದು ರೂ.500 ಮತ್ತು ರೂ.1000 ನೋಟುಗಳನ್ನು ರದ್ದು ಪಡಿಸಿ ರೂ.2000 ಮೌಲ್ಯದ ನೋಟುಗಳನ್ನು ಸರಬರಾಜಿಗೆ ತಂದಿತು? ಭ್ರಷ್ಟಾಚಾರಕ್ಕೆ ಅನುಕೂಲ ಮಾಡಿಕೊಡುವುದು ಸರ್ಕಾರದ ಉದ್ದೇಶವಾಗಿರಲಿಕ್ಕಿಲ್ಲ. ಆದರೆ ರೂ.500 ಮತ್ತು ರೂ.1000 ಮೌಲ್ಯದ ನೋಟುಗಳನ್ನು ಭ್ರಷ್ಟಾಚಾರದ ಕಾರಣವನ್ನು ಮುಂದೊಡ್ಡಿ ರದ್ದು ಮಾಡಿ ಅವುಗಳಿಗಿಂತಲೂ ಹೆಚ್ಚಿನ ಮೌಲ್ಯವಾದ ರೂ.2000 ಮೌಲ್ಯದ ನೋಟುಗಳನ್ನು ಸರಬರಾಜಿಗೆ ಏಕೆ ತರಲಾಯಿತು ಎಂಬುದು ನಮಗೆ ಅರ್ಥವಾಗುತ್ತಿಲ್ಲ.

ಚಲಾವಣೆಗೆ ಬಿಟ್ಟಿರುವ ರೂ.2000 ನೋಟಿನ ಸಮಸ್ಯೆಯನ್ನು ಅನುಭವಿಸಿಯೇ ತಿಳಿಯಬೇಕು. ಇತ್ತೀಚಿಗೆ ಬೆಂಗಳೂರಿನ ಸೆಂಟ್ ಜಾನ್ಸ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿನ ರಕ್ತ ಪರೀಕ್ಷೆ ಕೌಂಟರಿನಲ್ಲಿ ನಾನು ಸರದಿಯಲ್ಲಿ ನಿಲ್ಲುವುದಕ್ಕೆ ಮೊದಲೇ ಕೈಯಲ್ಲಿ ರೂ.2000 ನೋಟು ಹಿಡಿದುಕೊಂಡು ವೃದ್ಧರೊಬ್ಬರು ನಿಂತಿದ್ದರು. ಏಕೆಂದರೆ ಅವರ ಬಿಲ್ಲು ನಾಲ್ಕು ನೂರು ಚಿಲ್ಲರೆ ಪಾವತಿಸಲು ಅವರು ರೂ.2000 ನೋಟು ನೀಡಿದ್ದರು. ಆದರೆ ಅಲ್ಲಿ ಚಿಲ್ಲರೆ ಇರಲಿಲ್ಲ. ಅದಕ್ಕಾಗಿ ಅವರು ಕಾಯುತ್ತಿದ್ದರು. ಇದು ತಕ್ಷಣದ ಅಥವಾ ದೀರ್ಘಾವದಿಯ ನೋವಿನ ಪ್ರಶ್ನೆಯಲ್ಲ.



ಪ್ರೊ. ಟಿ.ಆರ್. ಚಂದ್ರಶೇಖರ

ಇಲ್ಲಿ ಆರ್ಥಿಕ ನಷ್ಟವೇನಿಲ್ಲ. ಆದರೆ ವೃದ್ಧರೊಬ್ಬರಿಗೆ ಉಂಟಾದ ಮಾನಸಿಕ ನೋವನ್ನು ಪರಿಹರಿಸುವುದು ಹೇಗೆ!

ಸಮೀಕ್ಷೆಯ ವಿಚಿತ್ರ ವಾದಗಳು

ಈ ಸಮೀಕ್ಷೆಯಲ್ಲಿ ಅನಾಣ್ಯೀಕರಣವು ಅನೌಪಚಾರಿಕ ವಲಯವನ್ನು ಔಪಚಾರಿಕ ವಲಯದಲ್ಲಿ ವಿಲೀನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಲಾಗಿದೆ. ಇದನ್ನು ಹೇಗೆ ನಂಬುವುದು ಅರ್ಥವಾಗುತ್ತಿಲ್ಲ. ಈ ಬಗೆಯ ಪರಿವರ್ತನೆಯು ದಿಢೀರನೆ ನಡೆಯುವ ಪ್ರಕ್ರಿಯೆಯಲ್ಲ. ಇದು ದೀರ್ಘಾವಧಿಯಲ್ಲಿ ನಡೆಯುವ ಕ್ರಿಯೆ. ಆದರೆ ಅನೌಪಚಾರಿಕ ವಲಯದಲ್ಲಿ ಜನರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ, ಅಲ್ಲಿ ಉತ್ಪಾದನೆಯು ಕುಸಿಯುತ್ತಿರುವುದದ ಬಗ್ಗೆ ಮತ್ತು ಇವೆಲ್ಲದರ ಪರಿಣಾಮವಾಗಿ ಅನುಭೋಗ ನೆಲಕಚ್ಚಿರುವುದರ ಬಗ್ಗೆ ಸಮೀಕ್ಷೆಯು ಮೌನ ವಹಿಸಿದೆ. ಇವೆಲ್ಲವೂ ಜಿಡಿಪಿಯ ಬೆಳವಣಿಗೆ ಪ್ರಮಾಣವನ್ನು ತಗ್ಗಿಸುವುದರಲ್ಲಿ ಅನುಮಾನಕ್ಕೆ ಆಸ್ಪದವಿಲ್ಲ.

ಸಮೀಕ್ಷೆಯಲ್ಲಿ ಅನಾಣ್ಯೀಕರಣದ ಪರಿಣಾಮವನ್ನು ಪರಿಶೀಲಿಸಲು ಚಾಲ್ತಿ ಬೆಲೆಯಲ್ಲಿನ ಜಿಡಿಪಿಯನ್ನು ಪರಿಗಣಿಸಬೇಕೆ ವಿನಾ ನೈಜ ಬೆಲೆಗಳಲ್ಲಿನ ಜಿಡಿಪಿಯಲ್ಲಿನ ಬೆಳವಣಿಗೆಯಲ್ಲ ಎಂಬ ವಿಚಿತ್ರ ವಾದವನ್ನು ಅರವಿಂದ್ ಸುಬ್ರಮಣ್ಯಮ್ ಮಂಡಿಸಿದ್ದಾರೆ. ಅರ್ಥಶಾಸ್ತ್ರದ ಮೊದಲ ಪಾಠವೆಂದರೆ ನೈಜ ಬೆಲೆಗಳಲ್ಲಿನ ವಿಶ್ಲೇಷಣೆ ಮುಖ್ಯವೇ ವಿನಾ ಚಾಲ್ತಿ ಬೆಲೆಗಳಲ್ಲಿನ ಮೀಮಾಂಸೆಯಲ್ಲ. ಅರ್ಥಶಾಸ್ತ್ರದ ಮೊದಲ ಪಾಠಕ್ಕೆ ಇಲ್ಲಿ ದಕ್ಕೆ ಉಂಟಾಗಿದೆ. ಇದರ ಆಧಾರದ ಮೇಲೆ 2017–18ನೆಯ ಸಾಲಿನ ಜಿಡಿಪಿ ಬೆಳವಣಿಗೆ ಪ್ರಮಾಣ ಶೇ.6.75 ರಿಂದ ಶೇ.7.5 ರ ಮಧ್ಯದಲ್ಲಿರುತ್ತದೆ ಎಂಬ ಅಂದಾಜನ್ನು ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ತಜ್ಞರು ಮತ್ತು ಸಂಶೋಧನಾ ಸಂಸ್ಥೆಗಳು 2017–18ರಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣ ಶೇ.6.5ರಷ್ಟಾಗುತ್ತದೆ ಎಂಬುದನ್ನು ದೃಢಪಡಿಸಿವೆ.

ಜಿಡಿಪಿ ವ್ಯಸನ

ಜಗದೀಶ್ ಭಗವತಿ (ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಇವರು ಖ್ಯಾತ ಅರ್ಥಶಾಸ್ತ್ರಜ್ಞರು), ಅರವಿಂದ್ ಪಣಗಾರಿಯ(ನೀತಿ ಆಯೋಗದ ಉಪಾಧ್ಯಕ್ಷರು), ಅರವಿಂದ ಸುಬ್ರಮಣಿಯಮ್ (ಹಣಕಾಸು ಸಚಿವಾಲಯದ ಪ್ರಧಾನ ಸಲಹೆಗಾರರು), ವಿವೇಕ್ ದೆಬ್ರಾಯ್(ನೀತಿ ಆಯೋಗದ ಸದಸ್ಯ), ಅರುಣ್ ಜೇಟ್ಲಿ(ಕೇಂದ್ರ ಹಣಕಾಸು ಸಚಿವರು) ಮುಂತಾದವರನ್ನು 'ಜಿಡಿಪಿ ವ್ಯಸನಿಗಳು' ಎಂದು ಕರೆಯಬಹುದು. ಏಕೆಂದರೆ ಇವರೆಲ್ಲ ಜಿಡಿಪಿಯ ಬೆಳವಣಿಗೆಯೇ ಅಭಿವೃದ್ಧಿ ಎಂದು ನಂಬಿದವರು ಮತ್ತು ಅದರ ಬಗ್ಗೆ ಜಪ ಮಾಡುತ್ತಿರುವವರು. ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆರ್ಥಿಕ ಸಮೃದ್ಧತೆ ಸಮರ್ಥಕರಾಗಿದ್ದ ಜಗದೀಶ್ ಭಗವತಿ ಅವರು ಜನರ ಬದುಕಿನ ಸಮೃದ್ಧತೆಯನ್ನು ಪ್ರತಿಪಾದಿಸುವ ಅಮರ್ತ್ಯ ಸೆನ್ ಜೊತೆಯಲ್ಲಿ ಕದನವನ್ನೇ ನಡೆಸಿದರು. ಅವರ ಪಟ್ಟ ಶಿಷ್ಯರಾಗಿರುವ ಪಣಗಾರಿಯ ಅವರು ಭಾರತದ ಜಿಡಿಪಿಯ ಬೆಳವಣಿಗೆ ಪ್ರಮಾಣ ವಾರ್ಷಿಕ ಶೇ.6 ರಿಂದ ಶೇ.8 ರಷ್ಟಾದರೆ ಮುಂದಿನ 15 ವರ್ಷಗಳಲ್ಲಿ ಅದರ ಜಿಡಿಪಿಯು 6 ರಿಂದ 8 ಟ್ರಿಲಿಯನ್ ಡಾಲರ್ ಆಗುತ್ತದೆ ಎಂದು ಭವಿಷ್ಯ ನುಡಿಯುತ್ತಿದ್ದಾರೆ. ಒಂದು ಟ್ರಿಲಿಯನ್ ರೂಪಾಯಿ ಅಂದರೆ ಒಂದು ಲಕ್ಷ ಕೋಟಿ ರೂಪಾಯಿಗಳು. ಅಂದರೆ ಇದು ಒಂದರ ಮುಂದೆ 12 ಸೊನ್ನೆಗಳ ಮೌಲ್ಯಕ್ಕೆ ಸಮ(1,000,000,000,000). ಜನರ ಬದುಕು, ಅವರ ಜೀವನಾಧಾರ, ಆಹಾರ, ಶಿಕ್ಷಣ, ಆರೋಗ್ಯ–ಮುಂತಾದವುಗಳಿಗಿಂತ ಜಿಡಿಪಿ ವ್ಯಸನಿಗಳಿಗೆ ವರಮಾನವೇ ಸಕಲವೂ ಆಗಿ ಬಿಟ್ಟಿದೆ. ಇವರು ಉಳ್ಳವರ ಆರ್ಥಿಕತೆಯ ಬಗ್ಗೆ ಮಾತನಾಡುತ್ತಿದ್ದಾರೆ ವಿನಾ ಹಸಿವು, ದುಸ್ಥಿತಿ, ಬಡತನ, ಅಸಮಾನತೆ, ತಾರತಮ್ಯ ಎದುರಿಸುತ್ತಿರುವವರ ಬಗ್ಗೆ ಮಾತನಾಡುತ್ತಿಲ್ಲ.

ಆದರೆ ಈ ಬಗೆಯ ಜಿಡಿಪಿಯ ಏರಿಕೆಯಿಂದ ಜನರ ಬದುಕು ಸಮೃದ್ಧವಾಗುತ್ತದೆಯೇ? ಇದರಿಂದ ಜನರ ಆರೋಗ್ಯ, ಮಹಿಳೆಯರ ಜೀವನ ಸುಖಮಯವಾಗುತ್ತದೆಯೇ? ಭಾರತವು 'ಹಸಿವು ಮುಕ್ತ' ಆಗುತ್ತದೆಯೇ? ಈ ಜಿಡಿಪಿ ವ್ಯಸನಿಗಳಿಗೆ ಜನರು, ಜನರ ಬದುಕು, ಮಹಿಳೆಯರ ಜೀವನ ಮುಖ್ಯವಾಗುವುದಿಲ್ಲ. ಕಳೆದ 60–70 ವರ್ಷಗಳಲ್ಲಿನ ಜಗತ್ತಿನ ಅನುಭವವೆಂದರೆ ಜಿಡಿಪಿ ಅನ್ನುವುದು ಉಳ್ಳವರ ಬದುಕನ್ನು ಸಮೃದ್ಧಗೊಳಿಸುವ ಸೂಚಿಯಾಗಿದೆ ವಿನಾ ಜನರ ಬದುಕನ್ನು ಸೂಚಿಸುವ ಸಂಗತಿಯಾಗಿಲ್ಲ. ವ್ಯಾಪಾರಗಾರರು, ಉದ್ಯಮಪತಿಗಳು, ಹೂಡಿಕೆದಾರರ ಪ್ರತಿನಿಧಿಯಂತಿರುವ ಆಳುವ ವರ್ಗವು ಅವರ ಹಿತಾಸಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಜಿಡಿಪಿಯ ಬಗ್ಗೆ ಮಾತನಾಡುತ್ತಿದೆ. ಅನಾಣ್ಯೀಕರಣವು ವಿಫಲವಾದ ಮೇಲೆ ಕಪ್ಪುಹಣದ ಬಗ್ಗೆ ಮಾತನಾಡುವುದನ್ನು ಆಳುವ ವರ್ಗ ಕೈಬಿಟ್ಟು ನಗದು–ರಹಿತ ಆರ್ಥಿಕತೆಯ ಬಗ್ಗೆ ಬೊಬ್ಬಿಡುತ್ತಿದೆ.

ನಗದು ರಹಿತ ವ್ಯವಹಾರ

ಅನಾಣ್ಯೀಕರಣದ ನಂತರ ಆಳುವ ವರ್ಗವು ಮಾತನಾಡುತ್ತಿರುವ ನಗದು ರಹಿತ ವ್ಯವಹಾರವು ಕೂಡ ಉಳ್ಳವರನ್ನು ಗಮನದಲ್ಲಿಟ್ಟುಕೊಂಡೇ ಜಾರಿಗೊಳಿಸಲಾಗುತ್ತಿದೆ. ನವೆಂಬರ್ 08 ರಂದು ಸರ್ಕಾರವು ರೂ.500 ಮತ್ತು ರೂ.1000 ನೋಟುಗಳನ್ನು ರದ್ದುಪಡಿದ್ದನ್ನು ಪ್ರಕಟಿಸಿದಾಗ ಪೇಟಿಎಮ್‌ನ ಮಾಲೀಕರು ಪಾರ್ಟಿಯೊಂದರಲ್ಲಿ ಕುಣಿಯುತ್ತಿದ್ದರಂತೆ. ದಿನಕ್ಕೆ 200–300 ರೂಪಾಯಿ ದುಡಿಯುವ ಮಂದಿಗೆ ಬ್ಯಾಂಕು ಖಾತೆ, ಡಿಜಿಟೈಸೇಶನ್, ನೆಟ್ ಅಕೌಂಟ್ ಮುಂತಾದವು ಅರ್ಥರಹಿತ ಸಂಗತಿಗಳು. ಸರ್ಕಾರದ ಅನಾಣ್ಯೀಕರಣದ, ಡಿಜಿಟೈಸೇಶನ್‌ನ ಉದ್ದೇಶದಲ್ಲಿ ಇವರು ಇಲ್ಲವಾಗಿದ್ದಾರೆ. ಆರ್ಥಿಕ ಸಮೀಕ್ಷೆಯಲ್ಲಿ ಅನಾಣ್ಯೀಕರಣದ ಸಮರ್ಥನೆಗಾಗಿ ಒಣ ಕಸರತ್ತು ಮಾಡಲಾಗಿದೆಯೇ ವಿನಾ ಅದರಿಂದ ಮೂರಾಬಟ್ಟೆಯಾದ ಜನರ ಬದುಕಿನ ಬಗ್ಗೆ ಸೂಕ್ಷ್ಮ ವಿಶ್ಲೇಷಣೆ ಕಾಣುವುದಿಲ್ಲ. ಒಂದು ತಪ್ಪನ್ನು ಅದು ತಪ್ಪೆಂದು ಗೊತ್ತಿದ್ದರೂ ಸಮರ್ಥಿಸುವ ಕ್ರಮದಲ್ಲಿ ನೈತಿಕತೆಯ ಅಭಾವ ಕಂಡು ಬರುತ್ತದೆ. ಅನಾಣ್ಯೀಕರಣದ ಮಹತ್ವವಾದ ಕಾಣಿಕೆ ಯಾವುದೆಮದರೆ ಅದು ದೇಶದ ಜಿಡಿಪಿಯಲ್ಲಿ ಶೇ.1 ರಿಂದ ಶೇ.2 ರಷ್ಟು ಕಡಿತ ಉಂಟು ಮಾಡಿದ್ದಾಗಿದೆ ಎಂದು ಸ್ಪಷ್ಟವಾಗಿ ಹೇಳಿ ಬಿಡಬಹುದು. ಬಡವರಿಗೆ, ವಂಚಿತರಿಗೆ, ಅಂಚಿನಲ್ಲಿರುವವರಿಗೆ ಅನಾಣ್ಯೀಕರಣದಿಂದ ತಕ್ಷಣದಲ್ಲಿ ಮತ್ತು ತದನಂತರವೂ ನೋವುಗಳಿಂದ ಮುಕ್ತಿ ಮಾತ್ರ ಕನಸಿನ ಗಂಟಾಗಿದೆ. ■

ರಾಜ್ಯಸಭೆಯನ್ನು ಕೆಳದರ್ಜೆಗೆ ಇಳಿಸುವ ಮೋದಿ ಸರಕಾರದ 'ಮನಿ ಬಿಲ್' ಪ್ರಹಾರ



ಸರಕಾರವು ಶಾಸನಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ರಾಜ್ಯಸಭೆಗೆ ಯಾವುದೇ ದನಿ ಇಲ್ಲದಂತೆ ಮಾಡಲು ಹೆಚ್ಚೆಚ್ಚಾಗಿ 'ಮನಿ ಬಿಲ್' ಅಂದರೆ 'ಹಣ ಮಸೂದೆ'ಯ ದಾರಿಯ ಮೊರೆ ಹೋಗುತ್ತಿದೆ. ರಾಜ್ಯಸಭೆಯಲ್ಲಿ ಬಿಜೆಪಿ ನೇತೃತ್ವದ ಸರಕಾರಕ್ಕೆ ಬಹುಮತ ಇಲ್ಲದಿರುವುದರಿಂದ ಆ ಅಡ್ಡಿಯನ್ನು ನಿವಾರಿಸಲೆಂದು ಅದು ಇಂತಹ ದುರುಪಯೋಗದ ಮಾರ್ಗಕ್ಕೆ ಇಳಿಯುತ್ತಿದೆ. ಈ ಮೂಲಕ ಅದು ರಾಜ್ಯಸಭೆಯ ಘನತೆಯನ್ನು ಕುಂದಿಸಿ ಸಾಂವಿಧಾನಿಕ ಯೋಜನೆಯನ್ನು ಉಲ್ಲಂಘಿಸುತ್ತಿದೆ.

ಪ್ರಕಾಶ ಕಾರಟ್



ಮೋದಿ ಸರಕಾರ ಸಂಸತ್ತಿನಲ್ಲಿ ಕಾನೂನುಗಳನ್ನು ಅಂಗೀಕಾರ ಮಾಡುವ ದಿಸೆಯಲ್ಲಿ ರಾಜ್ಯಸಭೆಯನ್ನು ಬದಿಗೊತ್ತಲು ಹಣ ಮಸೂದೆ(ಮನಿ ಬಿಲ್)ಯ ನಿರೂಪಣೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಈ ಮೂಲಕ ಅದು ಮೇಲ್ಮನೆಯ ಘನತೆಯನ್ನು ವ್ಯವಸ್ಥಿತವಾಗಿ ಕುಂದಿಸುತ್ತಿದೆ.

ಕಳೆದ ವರ್ಷ ಸಂಸತ್ತು ಆಧಾರ್ ಮಸೂದೆಯನ್ನು ಅಂಗೀಕರಿಸಿತು. ಅದನ್ನು ಲೋಕಸಭಾಧ್ಯಕ್ಷರು 'ಮನಿ ಬಿಲ್' ಎಂದು ಹೆಸರಿಸಿದರು. ಸಂವಿಧಾನದ 110ನೇ ವಿಧಿ 'ಮನಿ ಬಿಲ್'ನ ಮಾನದಂಡವನ್ನು ಕೊಟ್ಟಿದೆ. ಅದು ತೆರಿಗೆಗಳ ಹೇರಿಕೆ ಅಥವಾ ಭಾರತದ ಸಂಚಿತ ನಿಧಿ (ಕನ್ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾ) ಇವುಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಸರಕಾರ ನೀಡುವ ಸೇವೆಗಳಿಗೆ 'ಅನನ್ಯ ಗುರುತು ಸಂಖ್ಯೆ'(ಯುಐಡಿ)ಯನ್ನು ಜೋಡಿಸುವ ಆ ಧಾರ್ ಮಸೂದೆಯನ್ನು ಯಾವ ದೃಷ್ಟಿಯಲ್ಲೂ 'ಮನಿ ಬಿಲ್' ಅಥವ 'ಹಣ ಮಸೂದೆ' ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದಾಗ್ಯೂ ಸ್ಪೀಕರ್ ಹಾಗೆಂದೇ ನಿರ್ಧರಿಸಿದರು. 'ಹಣ ಮಸೂದೆ'ಯನ್ನು ರಾಜ್ಯಸಭೆ ತಿದ್ದುಪಡಿ ಮಾಡಲಾಗದು ಹಾಗೂ ಅದನ್ನು 14 ದಿನಗಳೊಳಗೆ ವಾಪಸ್ ಕಳಿಸಬೇಕು. ಈ ರೀತಿಯಾಗಿ ಆದ–ಾರ್ ಮಸೂದೆಯನ್ನು ರಾಜ್ಯಸಭೆಯ ಯಾವುದೇ ಪರಿಶೀಲನೆ ಅಥವಾ ತಿದ್ದುಪಡಿಗೆ ಒಳಪಡಿಸದಂತೆ ತಪ್ಪಿಸಲಾಯಿತು.

ಇದೇ ಜಾಡಿನಲ್ಲಿ ಮುಂದುವರಿದಿರುವ ಸರಕಾರವು ಶಾಸನಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ರಾಜ್ಯಸಭೆಗೆ ಯಾವುದೇ ದನಿ ಇಲ್ಲದಂತೆ ಮಾಡಲು ಹೆಚ್ಚೆಚ್ಚಾಗಿ 'ಮನಿ ಬಿಲ್' ದಾರಿಯ ಮೊರೆ ಹೋಗುತ್ತಿದೆ. 'ಹಣಕಾಸು ಮಸೂದೆ 2016' (ಫೈನಾನ್ಸ್ ಬಿಲ್, 2016) ಲೋಕಸಭೆಯಲ್ಲಿ ಅಂಗೀಕಾರವಾದಾಗ, ಅದು ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆ (ಎಫ್‌ಸಿಆರ್‌ಎ)ಗೆ ತಿದ್ದುಪಡಿಯನ್ನು ಒಳಗೊಂಡಿತ್ತು. ವಿದೇಶಿ ಕಂಪೆನಿಗಳ ಭಾರತೀಯ ಸಹವರ್ತಿ ಕಂಪೆನಿಗಳನ್ನು ಭಾರತೀಯ ಕಂಪೆನಿಗಳೆಂದೇ ಪರಿಗಣಿಸುವುದು ಅದರ ಉದ್ದೇಶವಾಗಿತ್ತು. ಎಫ್‌ಸಿಆರ್‌ಎಗೆ ಸಂಬಂಧಿಸಿದ ಈ ತಿದ್ದುಪಡಿ ಮನಿ ಬಿಲ್‌ನ ವ್ಯಾಖ್ಯೆಗೆ ಒಳಪಡುವುದಿಲ್ಲ. ಆದರೆ ಅದನ್ನು ಹಣಕಾಸು ಮಸೂದೆ ಜೊತೆಗೆ ತಳಕು ಹಾಕಲಾಯಿತು. ವಿದೇಶಿ ದೇಣಿಗೆಗಳನ್ನು ಸ್ವೀಕರಿಸುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾನೂನನ್ನು ಉಲ್ಲಂಘಿಸಿವೆ ಎಂದು ದೆಹಲಿ ಹೈಕೋರ್ಟ್ ನೀಡಿದ್ದ ಒಂದು ತೀರ್ಪಿನಿಂದ ಬಚಾವಾಗುವುದಕ್ಕಾಗಿ ಈ ತಿದ್ದುಪಡಿ ಮಾಡಲಾಯಿತು. ಅದನ್ನು ಎಫ್‌ಸಿಆರ್‌ಎಗೆ ತಿದ್ದುಪಡಿ ಎಂದು ಪ್ರತ್ಯೇಕವಾಗಿ ಕೈಗೆತ್ತಿಕೊಂಡಿದ್ದರೆ ಅದನ್ನು ರಾಜ್ಯಸಭೆಯಲ್ಲಿ ಕೂಡ ಅಂಗೀಕರಿಸಬೇಕಾಗುತ್ತಿತ್ತು. ರಾಜ್ಯಸಭೆಯಲ್ಲಿ ಬಿಜೆಪಿ ನೇತೃತ್ವದ ಸರಕಾರಕ್ಕೆ ಬಹುಮತ ಇಲ್ಲದಿರುವುದರಿಂದ ಆ ಅಡ್ಡಿಯನ್ನು ನಿವಾರಿಸಲೆಂದು ಅದು ಹೆಚ್ಚೆಚ್ಚು 'ಮನಿ ಬಿಲ್' ಮಾರ್ಗಕ್ಕೆ ಇಳಿಯುತ್ತಿದೆ.

ಪ್ರಸಕ್ತ 'ಹಣಕಾಸು ಮಸೂದೆ 2017'ರಲ್ಲಿ, ಚುನಾವಣಾ ಬಾಂಡ್‌ಗಳನ್ನು ನೀಡುವ ಸಂಬಂಧವಾಗಿ ಆರ್‌ಬಿಐ ಕಾನೂನು, ಆದಾಯ ತೆರಿಗೆ ಕಾನೂನು ಮತ್ತು ಜನತಾ ಪ್ರಾತಿನಿಧ್ಯ ಕಾನೂನಿಗೆ ತಿದ್ದುಪಡಿಗಳು ಸೇರಿವೆ. ರಾಜಕೀಯ ದೇಣಿಗೆಯನ್ನು ಶುದ್ಧೀಕರಿಸುವ ಸಲುವಾಗಿ ಇದನ್ನು ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಅದು ತೆರಿಗೆಯಾಗಲಿ 'ಭಾರತದ ಸಂಚಿತ ನಿಧಿ'ಗಾಗಲೀ ಯಾವುದೇ ರೀತಿಯಲ್ಲಿ ಸಂಬಂಧಿಸಿದ್ದಲ್ಲ. ಆದ್ದರಿಂದ ಅದು 'ಮನಿ ಬಿಲ್' ವ್ಯಾಪ್ತಿಗೆ ಬರುವುದಿಲ್ಲ.

ಮೋದಿ ಸರಕಾರ ಉದ್ದೇಶಪೂರ್ವಕವಾಗಿ ಈ ಮಾರ್ಗ ಹಿಡಿದಿದೆ ಎನ್ನುವುದಕ್ಕೆ ಹಣಕಾಸು ಸಚಿವ ಅರುಣ್ ಜೇಟ್ಲಿ 2015ರ ಆಗಸ್ಟ್‌ನಲ್ಲಿ ನೀಡಿದ್ದ ಹೇಳಿಕೆಯೇ ಸಾಕ್ಷಿಯಾಗಿದೆ. ಸಂಸತ್ತಿನಲ್ಲಿ ಕೋಲಾಹಲ ಉಂಟಾಗಿ ಸದನದ ಕಾರ್ಯಕಲಾಪಗಳು ನಡೆಯದಿದ್ದಾಗ, 'ಕಲಾಪ ಸ್ಥಗಿತತೆ ಮುಂದುವರಿದರೆ ಅನೇಕ ಕಾನೂನುಗಳನ್ನು ಮನಿ ಬಿಲ್ ರೂಪದಲ್ಲಿ ತರಬೇಕಾಗುತ್ತದೆ' ಎಂದು ಅವರು ಹೇಳಿದ್ದರು.

ಸಂವಿಧಾನದ 110ನೇ ವಿಧಿಯ ಪ್ರಕಾರ ಮನಿ ಬಿಲ್ ಯಾವುದು ಎಂಬುದನ್ನು ನಿರ್ಧರಿಸ ಬೇಕಾದವರು ಲೋಕಸಭಾಧ್ಯಕ್ಷರು. ಅವರು ವಿವಿಧ ಶಾಸನಗಳನ್ನು 'ಮನಿ ಬಿಲ್' ಎಂದು ನಿರ್ಧರಿಸುವಂತೆ ಮಾಡಿ ಸರಕಾರವು ರಾಜ್ಯಸಭೆಯ ಘನತೆಯನ್ನು ಕುಂದಿಸುವ ಮೂಲಕ ಸಾಂವಿಧಾನಿಕ ಯೋಜನೆಯನ್ನು ಉಲ್ಲಂಘಿಸುತ್ತಿದೆ.

ಈ ಬಜೆಟ್ ಅಧಿವೇಶನದಲ್ಲಿ ಸರಕು ಮತ್ತು ಸೇವೆಗಳ (ಜಿಎಸ್‌ಟಿ) ಮೂರು ಶಾಸನಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಅವು ಯಾವುವೆಂದರೆ ಕೇಂದ್ರೀಯ ಜಿಎಸ್‌ಟಿ ಕಾಯ್ದೆ, ಸಮಗ್ರ ಜಿಎಸ್‌ಟಿ ಕಾಯ್ದೆ ಮತ್ತು ಪರಿಹಾರ ಕಾಯ್ದೆ. ಜಿಎಸ್‌ಟಿ ಕೇಂದ್ರ–ರಾಜ್ಯ ಸಂಬಂಧಗಳು ಮತ್ತು ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ್ದಾಗಿದೆ. ರಾಜ್ಯಗಳ ಮಂಡಳಿಯಾಗಿ ರಾಜ್ಯಸಭೆಗೆ ಇದರಲ್ಲಿ ನಿರ್ಣಾಯಕ ದನಿಯಿರಬೇಕು. ಆದರೆ, ಜಿಎಸ್‌ಟಿ ಸಾಂವಿಧಾನಿಕ ತಿದ್ದುಪಡಿ ಮಸೂದೆ ಚರ್ಚೆಯ ವೇಳೆ ಈ ಚರ್ಚೆಯ ನಂತರ ಬರುವ ಜಿಎಸ್‌ಟಿ ಮಸೂದೆಗಳನ್ನು 'ಹಣ ಮಸೂದೆ' ಎಂದು ಪರಿಗಣಿಸಬಾರದು ಎಂದು ಸದಸ್ಯರು ಬಲವಾಗಿ ಒತ್ತಾಯಿಸಿದ್ದರೂ ಮೋದಿ ಸರಕಾರವು ಈ ಶಾಸನಗಳನ್ನು 'ಹಣ ಮಸೂದೆ' ಎಂದು ಘೋಷಿಸಲು ಯೋಜಿಸುತ್ತಿದೆ. ಇದು ಖುಲ್ಲಂಖುಲ್ಲಾ ಸಾಂವಿಧಾನಿಕ ಅನೌಚಿತ್ಯತೆಯಾಗಿದೆ.

ಆಧಾರ್ ಮಸೂದೆಯನ್ನು 'ಹಣ ಮಸೂದೆ'ಯಾಗಿ ಪರಿಗಣಿಸಿದ್ದನ್ನು ಪ್ರಶ್ನಿಸಿ ರಾಜ್ಯಸಭೆ ಸದಸ್ಯ ಜೈರಾಮ್ ರಮೇಶ್ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. 'ಹಣ ಮಸೂದೆ' ಅಥವ 'ಮನಿ ಬಿಲ್' ಎಂದು ಪರಿಗಣಿಸುವಲ್ಲಿ ಲೋಕಸಭಾಧ್ಯಕ್ಷರ ನಿರ್ಣಯವೇ ಅಂತಿಮವಾಗಿರುವುದರಿಂದ ಸುಪ್ರಿಂ ಕೋರ್ಟ್ ಸಂಸತ್ತಿನ ಒಳಗಿನ ಒಂದು ಶಾಸನಾತ್ಮಕ ವಿಧಾನದಲ್ಲಿ ಮಧ್ಯಪ್ರವೇಶ ಮಾಡಲು ತನಗೆ ಪ್ರತ್ಯೇಕವಾದ ಸ್ವತಂತ್ರ ಆಧಾರಗಳಿವೆಯೇ ಎಂಬುದನ್ನು ನಿರ್ಧರಿಸುವ ಕಷ್ಟಕರ ಸವಾಲನ್ನು ಎದುರಿಸಬೇಕಾಗಿದೆ.

ಆದರೆ ಈಗ ಬೇಕಿರುವುದು, ತನ್ನನ್ನು ಈ ರೀತಿ ಬೇಕಾಬಿಟ್ಟಿಯಾಗಿ ಕೆಳದರ್ಜೆಗೆ ಇಳಿಸುವುದರ ವಿರುದ್ಧ ರಾಜ್ಯಸಭೆಯ ಒಂದು ಸಾಮೂಹಿಕ ನಿಲುವು. 'ಹಣ ಮಸೂದೆ'ಯ ದುರುಪಯೋಗವನ್ನು ತಕ್ಷಣವೇ ನಿಲ್ಲಿಸಬೇಕೆಂಬ ಆಗ್ರಹಕ್ಕೆ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಬೆಂಬಲ ನೀಡಬೇಕಾಗಿದೆ.

ಅನು:ವಿಶ್ವ

ತಮಿಳುನಾಡು: ಕದಡಿದ ನೀರಲ್ಲಿ ಮೀನು ಹಿಡಿಯುವ ಪ್ರಯತ್ನ

ತಮಿಳುನಾಡಿನಲ್ಲಿ ಕೊನೆಗೂ ರಾಜ್ಯಪಾಲರು ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡುವ ಸಂವಿಧಾನಿಕ ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ. ಆದರೆ ಒಂದು ವಾರದ ಕಾಲ ಅವರು ಶ್ರೀಮತಿ ಜಯಲಿತಾರವರ ಸಾವು ಒದಗಿಸಿದ ಅವಕಾಶವನ್ನು ಬಳಸಿಕೊಂಡು ಕದಡಿದ ನೀರಲ್ಲಿ ಮೀನು ಹಿಡಿಯಲು ಪ್ರಯತ್ನಿಸುವ ಕೇಂದ್ರದ ಆಳುವ ಪಕ್ಷದ ಪ್ರತಿನಿಧಿಯಂತೆ ವರ್ತಿಸಿದ್ದು ಪ್ರಜಾಪ್ರಭುತ್ವವಾದಿಗಳಲ್ಲಿ ಖೇದ ಉಂಟು ಮಾಡಿತ್ತು. ಇದನ್ನು ಆಗ ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ನೀಡಿದ ಹೇಳಿಕೆ ಬಲವಾಗಿ ಖಂಡಿಸಿತ್ತು. ಅದರ ಮುಖ್ಯ ಅಂಶಗಳನ್ನು ಇಲ್ಲಿ ಕೊಡಲಾಗಿದೆ.

ತಮಿಳುನಾಡಿನಲ್ಲಿ ಒಂದು ಅಸಾಮಾನ್ಯ ರಾಜಕೀಯ ಪರಿಸ್ಥಿತಿಯಿದೆ. ಕಳೆದ ಒಂದು ವಾರ ಆಳುವ ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ(ಎಐಎಡಿಎಂಕೆ)ನಲ್ಲಿ ಪಕ್ಷ ಮತ್ತು ಸರಕಾರದ ಹತೋಟಿ ಯಾರಲ್ಲಿರಬೇಕು ಎಂಬ ಪ್ರಶ್ನೆಯ ಮೇಲೆ ಆಂತರಿಕ ಕಲಹ ನಡೆಯುತ್ತಿದೆ. ಇದಕ್ಕೂ ರಾಜ್ಯದ ಜನತೆಯನ್ನು ಬಾಧಿಸುತ್ತಿರುವ ಬರ, ಕುಡಿಯುವ ನೀರಿನ ಕೊರತೆ, ರೈತರ ಆತ್ಮಹತ್ಯೆಗಳು, ಮಹಿಳೆಯರು, ಮಕ್ಕಳ ಮೇಲೆ ಹಲ್ಲೆಗಳು ಮಂತಾದ ಸಮಸ್ಯೆಗಳಿಗೂ ಏನೇನೂ ಸಂಬಂಧವಿಲ್ಲ. ಅವಕ್ಕೆಲ್ಲ ಪರಿಹಾರ ಕಾಣಬರುತ್ತಿಲ್ಲ, ಮಾತ್ರವಲ್ಲ, ಅವು ಉಲ್ಬಣಗೊಳ್ಳುತ್ತಿವೆ. ತಮಿಳುನಾಡು ಒಂದು ಅನಾಹುತಕಾರಿ ಸ್ಥಿತಿಯಲ್ಲಿದೆ, ಏಕೆಂದರೆ ಮುಖ್ಯಮಂತ್ರಿಗಳು ಹಂಗಾಮಿಯಾಗಿದ್ದಾರೆ, ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲ. ಇದರಿಂದ ಜನಕ್ಕೆ ದಿಕ್ಕಿಲ್ಲದಂತೆ ಆಗಿದೆ. ಒಬ್ಬ ಪೂರ್ಣಕಾಲದ ರಾಜ್ಯಪಾಲರು ಕೂಡ ಇಲ್ಲ. ಆಡಳಿತ ಅಸ್ತವ್ಯಸ್ತಗೊಂಡಿದೆ. ಇವೆಲ್ಲದರ ನಡುವೆ ಅಧಿಕಾರ ಗ್ರಹಣಕ್ಕೆ ಮತ್ತು ಪಕ್ಷದ ಆಸ್ತಿಗಳ ಮೇಲೆ ಹತೋಟಿಗೆ ಅನಾರೋಗ್ಯಕರ ಸ್ಪರ್ಧೆ ನಡೆದಿದೆ.

ನಿಜ, ತಮ್ಮ ಮುಖಂಡರನ್ನು ಚುನಾಯಿಸುವುದು ಎಐಎಡಿಎಂಕೆ ಶಾಸಕರಿಗೆ ಬಿಟ್ಟದ್ದು. ಆದರೆ ಶಶಿಕಲಾ ಅವರು ಮುಖ್ಯಮಂತ್ರಿಗಳಾಗಲು ತೋರಿಸಿರುವ ಆತುರ ಹಲವು ಪ್ರಶ್ನೆಗಳನ್ನು ಎತ್ತಿದೆ. ಅವರಿಗೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಸುಪ್ರಿಂ ಕೋರ್ಟ್ ತೀರ್ಪು ಸದ್ಯದಲ್ಲೇ ಬರಲಿರುವಾಗ ಅಧಿಕಾರ ವಹಿಸಿಕೊಳ್ಳುವುದು ಆಕೆಗೆ ತರವಲ್ಲ ಎಂಬ ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಹುದು. ಈ ಹಿಂದೆ, ಆಕೆ ಪಕ್ಷದಲ್ಲಾಗಲೀ, ಸರಕಾರದಲ್ಲಾಗಲೀ, ಪ್ರಮುಖ ಪಾತ್ರವನ್ನೇನೂ ವಹಿಸಿಲ್ಲ, ಈಗ ಪಕ್ಷ ಮತ್ತು ಮುಖ್ಯಮಂತ್ರಿ ಪದವನ್ನು ವಹಿಸಿಕೊಳ್ಳುವ ಆಕೆಯ ಪ್ರಯತ್ನಗಳು ಸ್ವೀಕಾರಾರ್ಹವೆನಿಸುತ್ತಿಲ್ಲ

ಹಂಗಾಮಿ ಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ ಈಗ ಶಶಿಕಲಾ ಅವರ ವಿರುದ್ಧ ಗಂಭೀರ ಆಪಾದನೆಗಳನ್ನೆತ್ತುತ್ತಿದ್ದಾರೆ. ಆದರೆ ಅವರ ದಾಖಲೆಯೇನೂ ಪ್ರಶ್ನಾತೀತವಾಗಿಲ್ಲ. ಜಲ್ಲಿಕಟ್ಟು ಹೋರಾಟದ ಕೊನೆಯ ದಿನ ಹರಿಯಬಿಟ್ಟ ಅಮಾನುಷ ಹಿಂಸಾಚಾರಕ್ಕೆ ಅವರು ಉತ್ತರ ಕೊಡಬೇಕಾಗಿದೆ, ಮತ್ತು ರೈತರ ಆತ್ಮಹತ್ಯೆಗಳ ಪ್ರಶ್ನೆಯ ಬಗ್ಗೆ ನಿರ್ಲಕ್ಷ್ಯದ ನಿಲುವಿಗೆ ಅವರೇ ಜವಾಬುದಾರರಾಗಿದ್ದಾರೆ. ಅವರು ಅಧಿಕಾರದ ಕಚ್ಚಾಟದ ಮಧ್ಯದಲ್ಲೇ ಇದ್ದಾರೆ ಎಂಬುದನ್ನು ಮರೆಯುವಂತಿಲ್ಲ .

ಈ ನಡುವೆ ಬಿಜೆಪಿ ಶ್ರೀಮತಿ ಜಯಲಿತಾರವರ ಸಾವು ಒದಗಿಸಿದ ಅವಕಾಶವನ್ನು ಬಳಸಿಕೊಂಡು ಕದಡಿದ ನೀರಲ್ಲಿ ಮೀನು ಹಿಡಿಯಲು ಪ್ರಯತ್ನಿಸುತ್ತಿದೆ. ಒಂದೆಡೆಯಲ್ಲಿ ಅವರು ರಾಜ್ಯದ ಹಿತಗಳಿಗೆ ವಿಶ್ವಾಸಘಾತ ಮಾಡುತ್ತಿದ್ದರೆ, ಇನ್ನೊಂದೆಡೆಯಲ್ಲಿ, ದಕ್ಷಿಣದ ಈ ಪ್ರಮುಖ ರಾಜ್ಯದಲ್ಲಿ ಕಾಲೂರಲು ಅವಕಾಶ ಪಡೆಯುವ ಪ್ರಯತ್ನವನ್ನು ನಡೆಸುತ್ತಿದೆ. ಅವರು ಬಿಂಬಿಸುತ್ತಿರುವ ಕೋಮುವಾದಿ ರಾಜಕೀಯವನ್ನು ಕಡೆಗಣಿಸುವಂತಿಲ್ಲ, ಅದು ರಾಜ್ಯದ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ಮೌಲ್ಯಗಳ ಪರಂಪರೆಗೆ ತದ್ವಿರುದ್ಧವಾದದ್ದು

ಇಂತಹ ಸನ್ನಿವೇಶದಲ್ಲಿ ರಾಜ್ಯಪಾಲರು ಸಂವಿಧಾನ ಪ್ರಕ್ರಿಯೆಯನ್ನು ಆರಂಭಿಸಬೇಕಿತ್ತು. ಆದರೂ, ರಾಜ್ಯದ ಗಂಭೀರ ಪರಿಸ್ಥಿತಿ ತಿಳಿದಿದ್ದರೂ ಅವರು ಚೆನ್ನೈಗೆ ಬರಲಿಲ್ಲ. ಈಗ ಸಂಬಂಧಪಟ್ಟ ಪಕ್ಷಗಳನ್ನು ಭೇಟಿ ಮಾಡಿದ ನಂತರ ಕ್ರಮ ವಹಿಸಲು ವಿಳಂಬ ಮಾಡುತ್ತಿದ್ದಾರೆ, ವಿವಿಧ ರಾಜ್ಯಗಳಲ್ಲಿ ಬಿಜೆಪಿ ರಾಜ್ಯಪಾಲರನ್ನು ತನ್ನ ರಾಜಕೀಯ ಹಿತಗಳನ್ನು ಈಡೇರಿಸಿಕೊಳ್ಳಲು ಬಳಸುತ್ತಿರುವ ಹಲವು ಉದಾಹರಣೆಗಳಿವೆ. ಈ ಹಿಂದೆ ಕಾಂಗ್ರೆಸ್ ಈ ನಿಲುವು ತಳೆಯುತ್ತಿತ್ತು. ಅದೀಗ ತಮಿಳುನಾಡಿನಲ್ಲಿ ಪುನರಾವರ್ತನೆಗೊಳ್ಳುತ್ತಿದೆ.


ತಮಿಳುನಾಡು ಜನಸಮೂಹಗಳು ಅಧಿಕಾರದಾಹದ, ಭ್ರಷ್ಟಾಚಾರ, ಜಾತಿವಾದ ಮತ್ತು ಕೋಮುವಾದದ ರಾಜಕೀಯವನ್ನು ತಿರಸ್ಕರಿಸಬೇಕು, ಜನಪರ ಧೋರಣೆಗಳು ಮತ್ತು ತತ್ವಗಳನ್ನು ಆಧರಿಸಿರುವ ಒಂದು ರಾಜಕೀಯ ಪರ್ಯಾಯದ ಸುತ್ತ ಅಣಿನೆರೆಯಬೇಕು.



ವ್ಯಂಗ್ಯಚಿತ್ರ: ನೈನನ್, ಟೈಮ್ಸ್ ಆಫ್ ಇಂಡಿಯಾ

ಅಕ್ಟೋಬರ್ ಕ್ರಾಂತಿ ಮತ್ತು ಭೂಸಂಬಂಧಗಳು

ನಿತ್ಯಾನಂದಸ್ವಾಮಿ



ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ವರ್ಷದ ಆಚರಣೆ–ಯ ಭಾಗವಾಗಿ, ಕ್ರಾಂತಿಯ ವಿವಿಧ ಆಯಾಮಗಳ ಬಗ್ಗೆ ಹಾಗೂ ಜಾಗತಿಕವಾಗಿ ಮಾನವ ಸಮಾಜದ ವಿವಿಧ ಕ್ಷೇತ್ರಗಳ ಮೇಲೆ ಅಕ್ಟೋಬರ್ ಕ್ರಾಂತಿಯ ಪರಿಣಾಮಗಳ ಬಗ್ಗೆ ಇಡೀ ವರ್ಷ 'ಜನಶಕ್ತಿ' ಆಗಾಗ ವಿವಿಧ ಲೇಖನ–ಬರಹಗಳನ್ನು ಪ್ರಕಟಿಸಿದೆ ಮತ್ತು ಪ್ರಕಟಿಸಲಿದೆ. ಈ ಸಂಚಿಕೆಯಲ್ಲಿ ಅಕ್ಟೋಬರ್ ಕ್ರಾಂತಿಯ ಭಾಗವಾಗಿ ರಶ್ಯಾದ ಭೂ ಸಂಬಂಧಗಳಲ್ಲಿ ಆದ ಕ್ರಾಂತಿಕಾರಿ ಬದಲಾವಣೆಗಳ ಬಗ್ಗೆ ಕಾ. ನಿತ್ಯಾನಂದಸ್ವಾಮಿ ಅವರ ಲೇಖನ ಪ್ರಕಟಿಸುತ್ತಿದ್ದೇವೆ. ಇದು ಫೆಬ್ರುವರಿ 5ರಂದು ನಡೆದ 'ಸಮಾಜವಾದಿ ಕ್ರಾಂತಿ: ಕೃಷಿ ಮತ್ತು ಭೂಸಂಬಂಧಗಳು' ಎಂಬ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣದ ಪರಿಷ್ಕರಿತ ರೂಪ. ಇದರ ಜತೆಗೆ ಪೂರಕವಾಗಿ ಅದೇ ವಿಚಾರ ಸಂಕಿರಣದಲ್ಲಿ ಕ್ರಿಯಾ ಪುಸ್ತಕ 'ರಶ್ಯಾ ಕ್ರಾಂತಿ ಮತ್ತು ಕೃಷಿ' ಎಂಬ ನಾಲ್ಕು ಪೋಸ್ಟರು/ಕಾರ್ಡುಗಳಲ್ಲಿನ ಮಾಹಿತಿಯನ್ನು ಕೊಡಲಾಗಿದೆ.

ಮಾನವ ಚರಿತ್ರೆಯಲ್ಲಿ ಅನೇಕ ಸಾಮಾಜಿಕ ಕ್ರಾಂತಿಗಳಾಗಿವೆ. ಆದರೆ ಅದರಲ್ಲಿನ ಯಾವ ಕ್ರಾಂತಿಯನ್ನೂ ಅಕ್ಟೋಬರ್ ಮಹಾಕ್ರಾಂತಿಗೆ ಹೋಲಿಸಲಾಗದು. ವಿಶ್ವದ ಇದುವರೆಗಿನ ಎಲ್ಲಾ ಕ್ರಾಂತಿಗಳಿಂದ ಅಕ್ಟೋಬರ್ ಕ್ರಾಂತಿ ಭಿನ್ನವಾದದ್ದು.

1789 ರಲ್ಲಿ ನಡೆದ ಫ್ರೆಂಚ್ ಕ್ರಾಂತಿಯಿಂದ ಹಿಡಿದು ಇಲ್ಲಿಯ ವರೆಗಿನ ವಿವಿಧ ಕ್ರಾಂತಿಗಳಲ್ಲಿ ಪಾಳೆಗಾರಿ ವರ್ಗಗಳ ವಶದಲ್ಲಿದ್ದ ಪ್ರಭುತ್ವಾಧಿಕಾರವನ್ನು ಬಂಡವಾಳಶಾಹಿ ವರ್ಗ ತನ್ನ ಕೈವಶ ಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ. ಅಂದರೆ ಒಂದು ಹೊಸ ಶೋಷಕ ವರ್ಗವು ಹಳೆಯ ಶೋಷಕ ವರ್ಗವನ್ನು ಪದಚ್ಯುತಗೊಳಿಸಿದ್ದನ್ನು ನಾವು ನೋಡಿದ್ದೇವೆ.

ಆದರೆ, ಅಕ್ಟೋಬರ್ ಕ್ರಾಂತಿಯಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ಶೋಷಿತ ವರ್ಗವು ಒಂದು ಶೋಷಕ ವರ್ಗವನ್ನು ಪದಚ್ಯುತಗೊಳಿಸಿತು. ರಶ್ಯಾದ ಕಾರ್ಮಿಕ ವರ್ಗವು ತನ್ನ ಮಿತ್ರ ವರ್ಗ – ಕೃಷಿ ಕೂಲಿಕಾರರು ಮತ್ತು ಬಡರೈತರೊಂದಿಗೆ ಕೂಡಿಕೊಂಡು ಬಂಡವಾಳಗಾರರು ಮತ್ತು ಇತರ ಶೋಷಕ ವರ್ಗಗಳ ಪ್ರಭುತ್ವವನ್ನು ಕೊನೆಗಾಣಿಸಿತು. ಶ್ರಮಿಕ ವರ್ಗದ ಪ್ರಭುತ್ವವನ್ನು ಸ್ಥಾಪಿಸಿತು.

ಅದೊಂದು ಸಮಾಜವಾದಿ ಕ್ರಾಂತಿ. ಮಾರ್ಕ್ಸ್ ಮತ್ತು ಏಂಗೆಲ್ಸ್ ಎಂಬ ಸಮಾಜ ವಿಜ್ಞಾನಿಗಳು ಲೆಕ್ಕಹಾಕಿದ ಕ್ರಾಂತಿ. ಸಮಾಜವಾದವೆಂದರೆ ಎಲ್ಲ ಉತ್ಪಾದನಾ ಸಾಧನಗಳ ಸಾಮಾಜೀಕರಣಗೊಂಡ ಸಾಮಾಜಿಕ ವ್ಯವಸ್ಥೆ. 1917 ರಲ್ಲಿ ಯಶಸ್ವಿಗೊಳಿಸಲಾದ ಅಕ್ಟೋಬರ್ ಕ್ರಾಂತಿಯೊಂದಿಗೆ ರಶ್ಯಾದಲ್ಲಿ ಮೊಟ್ಟ ಮೊದಲ ಬಾರಿಗೆ ಅದನ್ನು ಸಾಧಿಸಲಾಯಿತು. ಭೂಮಿ, ಕೃಷಿ, ಕೈಗಾರಿಕೆ ಮತ್ತು ಇತರ ಎಲ್ಲ ಉತ್ಪಾದನಾ ಸಾಧನಗಳನ್ನು ಹೊಚ್ಚ ಹೊಸ ಶ್ರಮಿಕ ವರ್ಗದ ಪ್ರಭುತ್ವವು ಸ್ವಾಧೀನಪಡಿಸಿಕೊಂಡು ಅವುಗಳನ್ನು ಸಾಮೂಹಿಕ ಒಡೆತನಕ್ಕೆ ಒಪ್ಪಿಸಿತು. ಹೀಗೆ ಮೊಟ್ಟ ಮೊದಲ ಬಾರಿಗೆ ವಿಶ್ವದಲ್ಲಿ ಸಮಾಜವಾದಿ ಉತ್ಪಾದನಾ ವಿಧಾನವನ್ನು ಅನುಷ್ಠಾನಕ್ಕೆ ತರಲಾಯಿತು. ಸಮಾಜವಾದ ಒಂದು ಕಲ್ಪನೆಯಾಗಿ ಉಳಿಯದೆ ವಾಸ್ತವವಾಯಿತು.

ಕ್ರಾಂತಿಯ ಸಾಧನೆಗಳು :

ಅಪಾರ ತ್ಯಾಗ ಬಲಿದಾನಗಳಿಂದ ಸಾಧಿಸಲಾದ ಈ ಕ್ರಾಂತಿಯ ನಂತರ ಸುಮಾರು 50 ವರ್ಷಗಳ ಕಾಲ ಸೋವಿಯೆತ್ ಯೂನಿಯನ್ ಅದ್ಭುತವಾದ ಆರ್ಥಿಕ ಪ್ರಗತಿಯನ್ನು ಸಾಧಿಸಿತು. ಇದನ್ನು ಅದರ ಟೀಕಾಕಾರರು ಸಹ ಒಪ್ಪಿಕೊಳ್ಳುತ್ತಾರೆ.

ಕ್ರಾಂತಿಯ ನಂತರದ ಕೆಲವು ಪ್ರಮುಖ ಸಾಧನೆಗಳನ್ನು ಹೀಗೆ ಪಟ್ಟಿಮಾಡಬಹುದು.

- ಅಂತರ್ಯುದ್ಧ ಕೊನೆಗೊಂಡ ಒಂದು ದಶಕದಲ್ಲಿ ಅನಕ್ಷರತೆಯನ್ನು ಕೊನೆಗಾಣಿಸಲಾಯಿತು.
- ಅಂದು ಯುರೋಪಿನ ಯಾವುದೇ ದೇಶಕ್ಕೆ ಸಾಧ್ಯವಾಗದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಕಾರಗೊಳಿಸಲಾಯಿತು.
- ಕ್ರಾಂತಿಯ ತಕ್ಷಣದಿಂದಲೇ, ಎಲ್ಲ ನಾಗರಿಕರಿಗೂ ಉಚಿತ ಆರೋಗ್ಯ ಸೇವೆಯನ್ನು ಖಚಿತಪಡಿಸಲಾಯಿತು.
- ಎಲ್ಲರಿಗೂ ಉದ್ಯೋಗದ ಹಕ್ಕು ನೀಡಿ ನಿರುದ್ಯೋಗವನ್ನು ಕೊನೆಗೊಣಿಸಲಾಯಿತು. ಎಲ್ಲರಿಗೂ ಉದ್ಯೋಗ ಒದಗಿಸಲು ಸಾಧ್ಯವಾದ ಪರಿಣಾಮವಾಗಿ ಎಲ್ಲ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚಲಾಯಿತು.
- ಹೊಸ ಸರ್ಕಾರದ ಕೆಲವು ಮೊಟ್ಟ ಮೊದಲ ತೀರ್ಮಾನಗಳಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳು, ಸಮಾನ ವೇತನ, ಹೆರಿಗೆ ಸೌಲಭ್ಯಗಳ ಹಕ್ಕು, ವಿವಾಹ ವಿಚ್ಛೇಧನದ ಹಕ್ಕು ಮತ್ತು ಮತದಾನದ ಹಕ್ಕು ಸೇರಿವೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ಬ್ರಿಟನ್‌ನಲ್ಲಿ 1928 ರಲ್ಲಷ್ಟೇ ನೀಡಲಾಯಿತು.
- ಜನತೆಗೆ ಒದಗಿಸಲಾಗುತ್ತಿದ್ದ ಸಾಂಸ್ಕೃತಿಕ ಸಂಪನ್ಮೂಲಗಳಲ್ಲಿ ಅಪಾರ ವಿಸ್ತರಣೆ ಮಾಡಲಾಯಿತು. ಸರ್ಕಾರದ ಅನುದಾನದೊಂದಿಗೆ

ರಶ್ಯಾ ಕ್ರಾಂತಿ ಮತ್ತು ಕೃಷಿ – 1

ಉಳುವವನೇ ಹೊಲದೊಡೆಯ



ಕರ್ನಾಟಕದಲ್ಲಿ 1950ರ ದಶಕದಿಂದಲೇ ಮಾರ್ದನಿಗೊಳ್ಳುತ್ತಿರುವ, ಆದರೆ ಇನ್ನೂ ಪೂರ್ಣ ಜಾರಿಯಾಗದಿರುವ ರೈತರ ಈ ಘೋಷಣೆ ದೂರದ ರಶ್ಯದಲ್ಲಿ ನೂರು ವರ್ಷಗಳ ಹಿಂದೆ ಹುಟ್ಟಿದ್ದು ಎಂದು ನಿಮಗೆ ಗೊತ್ತೇ?

"ಶಾಂತಿ, ಅನ್ನ ಮತ್ತು ಭೂಮಿ ಬೇಕು' ಎಂಬ ಘೋಷಣೆಯಲ್ಲಿ 1917ರಲ್ಲಿ ನಡೆದ ಮಹಾನ್ ಅಕ್ಟೋಬರ್ ಕ್ರಾಂತಿಯಲ್ಲಿ ದೇಶದಾದ್ಯಂತ ಹುಟ್ಟಿಕೊಂಡು ಬೆಳೆದ ಕಾರ್ಮಿಕರ, ಸೈನಿಕರ 'ಸೋವಿಯೆಟ್'ಗಳೊಂದಿಗೆ, ರೈತರ 'ಸೋವಿಯೆಟ್' (ಸ್ಥಳೀಯ ಸ್ವಯುವಾಡಳಿತ ಪ್ರಜಾಸತ್ತಾತ್ಮಕ ಸಂಸ್ಥೆ)ಗಳದ್ದೂ ಸಮನಾದ ಪಾತ್ರವಿತ್ತು. ಆದ್ದ–ರಿಂದ ಅಕ್ಟೋಬರ್ ಕ್ರಾಂತಿ ಘೋಷಣೆಯೊಂದಿಗೆ ಸೋವಿಯೆಟ್ ಸರ್ಕಾರದ ಪರವಾಗಿ ಲೆನಿನ್ ಹೊರಡಿಸಿದ ಮೊದಲ ಮೂರು ಡಿಕ್ರಿ(ಸರಕಾರದ ಆದೇಶ)ಗಳಲ್ಲಿ ಭೂಮಿ ಕುರಿತ ಆದೇಶವೂ ಒಂದು. ಇದರ ಆಶಯ ಉಳುವವನನ್ನು ಹೊಲದೊಡೆಯನಾಗಿ ಮಾಡುವುದೇ ಆಗಿತ್ತು.

ಈ ಚಾರಿತ್ರಿಕ 'ಭೂಮಿಯ ಸುಗ್ರೀವಾಜ್ಞೆ', ಝಾರ್, ಎಸ್ಟೇಟ್ ಒಡೆಯರು, ಚರ್ಚ್ ಮತ್ತಿತರ ಧಾರ್ಮಿಕ ಸಂಸ್ಥೆಗಳ ಭಾರಿ ಭೂಮಾಲಿಕತ್ವ ಹೊಂದಿದವರಿಂದ ಯಾವುದೇ ಪರಿಹಾರವಿಲ್ಲದೆ ಕಸಿದುಕೊಂಡು ಒಡೆತನವನ್ನು ರೈತರ ಸೋವಿಯೆಟ್‌ಗಳಿಗೆ ಹಸ್ತಾಂತರಿಸಿತು. ಭೂಮಿಯ ಜತೆಗೆ ಕೃಷಿಗೆ ಅಗತ್ಯವಾದ ಪಶುಸಂಪತ್ತು, ಉಪಕರಣಗಳು ಇತ್ಯಾದಿ ಆಸ್ತಿಗಳನ್ನು ಹಸ್ತಾಂತರಿಸಿತು. ಹೀಗೆ ಲಭ್ಯವಾದ ಭೂಮಿಯನ್ನು ಉಳುಮೆ ಮಾಡುವವರಿಗೆ ಕೊಡುವ ಅಧಿಕಾರವನ್ನು ರೈತರ ಸೋವಿಯೆಟ್ ಗಳಿಗೆ ಕೊಟ್ಟಿತು. ಕಲ್ಲಿದ್ದಲು ಮುಂತಾದ ಗಣಿಗಳು ಮತ್ತು ಭೂಮಿ ಆಧಾರಿತ ಉದ್ಯಮಗಳನ್ನು ರಾಷ್ಟ್ರೀಕರಿಸಲಾಯಿತು.

ಇದು ಮಾನವ ಚರಿತ್ರೆಯಲ್ಲೇ ಅತ್ಯಂತ ಕ್ರಾಂತಿಕಾರಿ, ಸಮಗ್ರ ಮತ್ತು ಮಾದರಿ ಭೂಸುಧಾರಣೆ. ಇಡೀ ಜಗತ್ತಿನಲ್ಲಿ ದೊಡ್ಡ ಭೂಮಾಲಕರ ಪಾಳೆಯಗಾರಿ ಶೋಷಣೆಯನ್ನು ಅಂತ್ಯಗೊಳಿಸುವ 'ಉಳುವವನೇ ಹೊಲದೊಡೆಯ' ಘೋಷಣೆಗೆ ನಾಂದಿ ಹಾಡಿತು. ಆ ಮೇಲೆ ಸಮಾಜವಾದಿ ಕ್ರಾಂತಿ ನಡೆದ ಪೂರ್ವ ಯುರೋಪಿನ ದೇಶಗಳಲ್ಲಿಯೂ ಚೀನಾ, ಕೊರಿಯಾ, ವಿಯೇಟ್ನಾವ್, ಕ್ಯೂಬಾಗಳಲ್ಲಿ ಈ ಘೋಷಣೆ ಜಾರಿಗೆ ಬಂತು. ಮಾತ್ರವಲ್ಲ, ಭಾರತದಂತಹ ಮೂರನೇ ಜಗತ್ತಿನ ದೇಶಗಳ ವಸಾಹತುಶಾಹಿ–ವಿರೋಧಿ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ರೈತರ ಭಾಗವಹಿಸುವಂತೆ ಮಾಡಲು ಈ ಘೋಷಣೆ ಕೊಡಬೇಕಾಯಿತು. ಭೂಸುಧಾರಣೆ ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದು ಅಂಗೀಕರಿಸಲ್ಪಟ್ಟು ಭಾಗಶಃವಾದರೂ ಜಾರಿಯಾಯಿತು.

ರಶ್ಯಾ ಕ್ರಾಂತಿಯ ಶತಮಾನೋತ್ಸವದ ಈ ವರ್ಷ ನಮ್ಮ ದೇಶದಲ್ಲಿ ಈ ಘೋಷಣೆ ಜಾರಿ ಮಾಡಲು ನಾವು ದುಡಿಯುತ್ತೇವೆ ಎಂದು ಪ್ರತಿಜ್ಞೆ ಮಾಡೋಣ!

ರಶ್ಯಾ ಕ್ರಾಂತಿ ಮತ್ತು ಕೃಷಿ – 2

ಕೃಷಿ ಸಾಮೂಹಿಕೀಕರಣ

1920ರ ದಶಕದ ಮಧ್ಯಭಾಗದಲ್ಲಿ ಸೋವಿಯೆಟ್ ಒಕ್ಕೂಟದಲ್ಲಿ ರೈತ ಕೃಷಿ ಅಲ್ಲದೆ, ಸಹಕಾರಿ ಪದ್ಧತಿ, ಸಾಮೂಹಿಕ ಕೃಷಿ ಫಾರ್ಮ್, ಸರ್ಕಾರಿ ಫಾರ್ಮ್– ಹೀಗೆ ಮೂರು ಕೃಷಿ ಸಂಘಟನಾ ಪದ್ಧತಿಗಳು ಜಾರಿಯಲ್ಲಿದ್ದವು. ಹೊಸ ಆರ್ಥಿಕ ನೀತಿಯ ಪ್ರಕಾರ ರೈತ ಕೃಷಿಯಿಂದ, ಸಹಕಾರಿ ಪದ್ಧತಿಯ ಹಂತದ ಮೂಲಕ ಸಾಮೂಹಿಕ ಅಥವಾ ಸರ್ಕಾರಿ ಫಾರ್ಮ್ ಪದ್ಧತಿಗೆ ಒಯ್ಯುವ ಕೆಲಸ ರೈತರ ಸಮ್ಮತಿ ಹಾಗೂ ಪ್ರಜ್ಞಾ ಮಟ್ಟವನ್ನು ಏರಿಸುವ ಮೂಲಕ ಆಗಬೇಕಾಗಿತ್ತು. ಇದು ದಶಕಗಳ ಕಾಲ ತೆಗೆದುಕೊಳ್ಳಬಹುದು ಎಂದು ಅಂದಾಜು ಮಾಡಲಾಗಿತ್ತು. ಆದರೆ ತೀವ್ರ ಕೈಗಾರಿಕೀಕರಣ ಯೋಜನೆ ಮತ್ತು 1926–27ರ ತೀವ್ರ ಆರ್ಥಿಕ ಬಿಕ್ಕಟ್ಟು ಈ ಬಗ್ಗೆ ಪುನರಾಲೋಚನೆಗೆ ಒತ್ತಾಯ ಹೇರಿತು.

1920ರ ದಶಕದ ಮಧ್ಯ ಭಾಗದ ಹೊತ್ತಿಗೆ ಕೃಷಿಯ ದೊಡ್ಡಭಾಗ(ಶೇಕಡಾ 92.4) ರೈತ ಕೃಷಿ ಆಗಿದ್ದು ಮಧ್ಯಯುಗದ ವಿಧಾನಗಳನ್ನೇ ಅವಲಂಬಿಸಿತ್ತು.




ಉತ್ಪಾದಕತೆ, ಯಂತ್ರಗಳ ಬಳಕೆ, ವೈಜ್ಞಾನಿಕ ವಿಧಾನಗಳ ಬಳಕೆ ತೀವ್ರ ಕೈಗಾರಿಕೀಕರಣಕ್ಕೆ ಅನುಗುಣವಾಗಿ ಹೆಚ್ಚುವ ಅಗತ್ಯ ಇತ್ತು. ಕುಲಕ್(ಅಥವಾ ಶ್ರೀಮಂತ ರೈತರ)ವರ್ಗ ಕೃಷಿ ಮನೆತನಗಳಲ್ಲಿ ಕೇವಲ ಶೇಕಡಾ 5 ಆಗಿದ್ದರೂ ಅವರ ಪ್ರಭಾವ ದೊಡ್ಡ ಸಂಖ್ಯೆಯಲ್ಲಿದ್ದ ಮಧ್ಯಮ(77%) ಮತ್ತು ಬಡ ರೈತರ (22.4) ಮೇಲೆ ಬಹಳವಿತ್ತು. ಮಾರುಕಟ್ಟೆಗೆ ಮಾಡುವ ಹೆಚ್ಚುವರಿ ಕೃಷಿ ಉತ್ಪನ್ನ (ಆಹಾರಧಾನ್ಯ ಸೇರಿದಂತೆ)ದ ದೊಡ್ಡ ಭಾಗ ಈ "ಕುಲಕ್"ಗಳಿಗೆ ಸೇರಿತ್ತು. ಅವರ ಕುಮ್ಮಕ್ಕಿನಿಂದ ನಡೆದ 'ಆಹಾರ ಧಾನ್ಯ ಮುಷ್ಕರ' ಮುಂತಾದವುಗಳ ಹಿನ್ನೆಲೆಯಲ್ಲಿ ತ್ವರಿತವಾಗಿ ಕೃಷಿ ಸಾಮೂಹಿಕೀಕರಣ, ಯಾಂತ್ರೀಕರಣ ಹಾಗೂ ಆಧುನಿಕೀಕರಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಈ ನಿರ್ಧಾರ ಗ್ರಾಮೀಣ ಪ್ರದೇಶದಲ್ಲಿ ತೀವ್ರ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತು. ಕುಲಕ್ ವರ್ಗ ಸಾಮೂಹಿಕೀಕರಣವನ್ನು ಸಕ್ರಿಯವಾಗಿ ವಿರೋಧಿಸಿ, ಸಹಕಾರಿ ಮತ್ತು ಸಾಮೂಹಿಕ ಫಾರ್ಮ್‌ಗಳ ವಿರುದ್ಧ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿತು.

'ಉಳುವವನನ್ನು ಹೊಲದೊಡೆಯ' ಮಾಡುವ ಸಮಗ್ರ ಭೂಸುಧಾರಣೆಗಳ ನಂತರ, ಹಂತ ಹಂತವಾಗಿ ಸಾಮಾಜಿಕೀಕರಣ ಮಾಡದೆ ಹೋದರೆ ಸಮಾಜವಾದದತ್ತ ಹೋಗಲು ಸಾಧ್ಯವಿಲ್ಲ.

ಅದರ ವಿಶಿಷ್ಟ ಪರಿಸ್ಥಿತಿಗಳಿಂದಾಗಿ, ಸೋವಿಯೆಟ್ ಒಕ್ಕೂಟದಲ್ಲಿ ನಡೆದದ್ದು ಕೃಷಿಯ ಸಾಮೂಹಿಕೀಕರಣಕ್ಕೆ ಮಾದರಿ ಅಲ್ಲದಿದ್ದರೂ, ಮೊದಲ ಬಾರಿಗೆ ಇದರಲ್ಲಿ ಅಡಕವಾಗಿರುವ ಹಲವು ಆಯಾಮಗಳನ್ನು ಅನಾವರಣಗೊಳಿಸಿತು. ದೇಶ–ಕಾಲಕ್ಕೆ ಅನುಗುಣವಾದ ವೇಗ, ವಿಧಾನಗಳೊಂದಿಗೆ ಕೃಷಿ ಸಾಮೂಹಿಕೀಕರಣ ಈಗಲೂ ಅನಿವಾರ್ಯವಾದದ್ದು. ಆಳವಾದ ಚಿಂತನೆ–ಪ್ರಯೋಗಗಳನ್ನು ಬೇಡುವಂತಹವು. ಇದರಲ್ಲಿ ಸೋವಿಯೆಟ್ ಒಕ್ಕೂಟ, ಚೀನಾ ಮುಂತಾದ ಸಮಾಜವಾದಿ ದೇಶಗಳ ಅನುಭವದ ಅಧ್ಯಯನ ಅಗತ್ಯ.

ರಶ್ಯಾ ಕ್ರಾಂತಿ ಮತ್ತು ಕೃಷಿ – 3

ಕೃಷಿ ಯಾಂತ್ರೀಕರಣ ಮತ್ತು ಆಧುನಿಕೀಕರಣ



1930ರ ದಶಕದ ಕೃಷಿಯ ವ್ಯಾಪಕ ಸಾಮೂಹಿಕೀಕರಣ, ಯಾಂತ್ರೀಕರಣ ಮತ್ತು ಆಧುನಿಕೀಕರಣ ಸೋವಿಯೆಟ್ ಒಕ್ಕೂಟದ ಕೈಗಾರಿಕೀರಣ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧ್ಯ ಮಾಡಿತು. ಈ ಬಲದಿಂದಾಗಿಯೇ ಅದು ಕೈಗಾರಿಕಾ–ಮಿಲಿಟರಿ ಶಕ್ತಿಯಾಗಿದ್ದ ಜರ್ಮನ್ ಆಕ್ರಮಣಕ್ಕೆ ಪ್ರಬಲ ಪ್ರತಿ–ರೋದ ಒಡ್ಡಿ, ಎರಡು ಕೋಟಿ ಜನರನ್ನು ಬಲಿ ಕೊಟ್ಟು ಇಡೀ ಜಗತ್ತನ್ನು ಫ್ಯಾಸಿಸ್ಟರಿಂದ ರಕ್ಷಿಸಿತು. ಎರಡನೇ ಮಹಾಯುದ್ಧದಲ್ಲಿ ಅಪಾರ ನಷ್ಟ ಅನುಭವಿಸಿದ ನಂತರ ಯುದ್ಧಾನಂತರದ ಪುನರ್‌ರಚನೆ ಗಂಭೀರ ಸವಾಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಇದು ಇನ್ನೂ ಗಂಭೀರವಾಗಿತ್ತು. ಯುದ್ಧದ ಮೊದಲಿನ ಸರಾಸರಿ ವಾರ್ಷಿಕ ಆಹಾರ ಧಾನ್ಯಗಳ ಉತ್ಪಾದನೆ 7.79 ಕೋಟಿ ಟನ್ ಆಗಿದ್ದು, 1943 ರಲ್ಲಿ 3.6 ಕೋಟಿ ಟನ್‌ಗೆ ಕುಸಿದಿತ್ತು. ಇದಕ್ಕೆ ಕಾರಣ ಜರ್ಮನ್ ನಾಜೀ ಸೈನ್ಯ ಫಲವತ್ತಾದ ಕೃಷಿ ಜಮೀನಿನ ದೊಡ್ಡ ಭಾಗವನ್ನು ವಶಪಡಿಸಿಕೊಂಡು, ವ್ಯವಸ್ಥಿತವಾಗಿ ಕೃಷಿ ಉತ್ಪನ್ನಗಳನ್ನು ಕೃಷಿ ಉಪಕರಣಗಳನ್ನೂ ವ್ಯಾಪಕವಾಗಿ ನಾಶಮಾಡಿದ್ದು ಆಗಿತ್ತು. ಯುದ್ಧದಲ್ಲಿ ಭಾರಿ ಸಾವು–ನೋವು, ನಗರಕ್ಕೆ ವಲಸೆ, ಇವುಗಳಿಂದ ಕೃಷಿ ಕ್ಷೇತ್ರ ತೀವ್ರ ಕಾರ್ಮಿಕರ ಕೊರತೆ ಸಹ ಎದುರಿಸುತ್ತಿತ್ತು. ಆದರೂ 1950ರ ಹೊತ್ತಿಗೆ ಯುದ್ಧದ ಮೊದಲಿನ ಕೃಷಿ ಉತ್ಪಾದನೆಯ ಮಟ್ಟ ಮುಟ್ಟಿತು.

ಇದು ಭಾರಿ (ಜಲ ವಿದ್ಯುತ್, ಕಾಲುವೆಗಳು, ನೀರಾವರಿ) ಯೋಜನೆಗಳ ಅವಧಿಯಾಗಿತ್ತು. ಕೃಷಿ ಕ್ಷೇತ್ರದಲ್ಲಿ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಯಿತು. ಕೃಷಿಯಲ್ಲಿ ಯಾಂತ್ರೀಕರಣ ಮತ್ತು ಉತ್ಪಾದಕತೆ ಹೆಚ್ಚಿದ್ದು 1927ರಲ್ಲಿ ಒಟ್ಟು ಕೆಲಸಗಾರರ ಶೇಕಡಾ 75 ಕೃಷಿಯಲ್ಲಿ ತೊಡಗಿದ್ದ–ರೆ, 1959ರ ಹೊತ್ತಿಗೆ ಶೇಕಡಾ 40ಕ್ಕೆ ಇಳಿದಿತ್ತು. ಕಾಲುವೆ ನೀರಾವರಿ ಯೋಜನೆಗಳ ನಿರ್ಮಾಣ ಮೂಲಕ ಕೃಷಿಗೆ ಅಳವಡಿಸಿದ ಭೂಮಿಯನ್ನು ವಿಸ್ತರಿಸಲಾಯಿತು. ಈ ಅವಧಿಯ ಕೊನೆಯ ಹೊತ್ತಿಗೆ ಆರನೇ ಒಂದು ಭಾಗ ಕೃಷಿ ಮೊದಲ ಬಾರಿಗೆ ಕೃಷಿಗೆ ಒಳಪಟ್ಟಿದ್ದಾಗಿತ್ತು. ಹಿಂದೆ ಕೃಷಿ ಫಾರ್ಮುಗಳು ತಮ್ಮದೇ ವಿದ್ಯುತ್ ಜನರೇಟರ್‌ಗಳನ್ನು ಹೊಂದಿದ್ದು, ಅವುಗಳು ದುಬಾರಿ ಮತ್ತು ಸೀಮಿತ ಸಾಮರ್ಥ್ಯದವು ಆಗಿದ್ದವು. ಈ ಅವಧಿಯಲ್ಲಿ ರಾಷ್ಟ್ರೀಯ ವಿದ್ಯುತ್ ಜಾಲದಿಂದ ಪೂರೈಕೆ ಎಲ್ಲಾ ಕೃಷಿ ಫಾರ್ಮುಗಳಿಗೆ ಲಭಿಸಿತು. ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚುತ್ತಾ ಹೋಯಿತು. ಆಹಾರಧಾನ್ಯಗಳ ಉತ್ಪಾದನೆ 1955ರಲ್ಲಿ 12.15 ಕೋಟಿ ಟನ್ ಇದ್ದಿದ್ದು 1970ರ ಹೊತ್ತಿಗೆ 16.76 ಕೋಟಿ ಟನ್ ಗೆ ಏರಿತ್ತು.

1965ರಿಂದ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವ ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಇದರ ಫಲವಾಗಿ ಕೃಷಿ ಉತ್ಪಾದನೆ 1980ರ ವರೆಗೆ ಏರುತ್ತಾ ಹೋಯಿತು. ಜೋಳ ಉತ್ಪಾದನೆಗೆ ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. 1965ರಲ್ಲಿ 13 ಕೋಟಿ ಟನ್ ಇದ್ದ ಆಹಾರ ಧಾನ್ಯಗಳ ಉತ್ಪಾದನೆ 1980ರ ಹೊತ್ತಿಗೆ 20.5 ಕೋಟಿ ಟನ್ ಮುಟ್ಟಿತು. ಈ ಅವಧಿಯಲ್ಲಿ ಕೃಷಿ ಕ್ಷೇತ್ರದ ಸಂರಚನೆಯನ್ನು ಬದಲಾಯಿಸಿ "ಕೃಷಿ–ಕೈಗಾರಿಕಾ ಸಂಕೀರ್ಣ"ಗಳನ್ನು ಸ್ಥಾಪಿಸಲಾಯಿತು. ಹಲವು ಸಾಮೂಹಿಕ ಮತ್ತು ಸರಕಾರಿ ಫಾರ್ಮುಗಳು, ಕೃಷಿ ಉಪಕರಣಗಳು ಇತರ ಲಾಗುವಾಡುಗಳನ್ನು ಉತ್ಪಾದಿಸುವ ಕೈಗಾರಿಕೆಗಳು, ಕೃಷಿ ಆಧಾರಿತ ಉತ್ಪನ್ನಗಳನ್ನು (ಜ್ಯೂಸ್, ಜಾಮ್ ಇತ್ಯಾದಿ) ತಯಾರಿಸುವ ಕಾರ್ಖಾನೆಗಳು, ಕೃಷಿ ಸೇವೆಗಳನ್ನು ಒದಗಿಸುವ ಸಂಸ್ಥೆಗಳು, ಕೃಷಿ ಉತ್ಪನ್ನಗಳನ್ನು ನೇರವಾಗಿ ಬಳಕೆದಾರನಿಗೆ ಮಾರುವ ಮಳಿಗೆಗಳು, ರಫ್ತು ವ್ಯಾಪಾರ – ಇವೆಲ್ಲವನ್ನು ಸಮಗ್ರವಾಗಿ ಯೋಜಿಸಿ, ನಿರ್ವಹಿಸುವ ಈ "ಕೃಷಿ–ಕೈಗಾರಿಕಾ



ರಶ್ಯಾ ಕ್ರಾಂತಿ ಮತ್ತು ಕೃಷಿ – 4

ಕೃಷಿ–ಕೈಗಾರಿಕಾ ಸಂಕೀರ್ಣಗಳು

ಸಂಕೀರ್ಣ"ಗಳು ಸೋವಿಯೆಟ್ ಒಕ್ಕೂಟದಲ್ಲಿ ಆಹಾರದ ಸಮೃದ್ಧಿಯನ್ನು ಸ್ಥಾಪಿಸಿ ಜಗತ್ತಿನ ಆಹಾರ ಕಣಜವಾಗುವ ಕನಸು ಹೊಂದಿದ್ದವು. 1980ರ ದಶಕದ ಆರಂಭದ ಹೊತ್ತಿಗೆ, ಶೇ. 91 ಸಾಮೂಹಿಕ ಮತ್ತು ಶೇ. 82 ಸರಕಾರಿ ಫಾರ್ಮುಗಳು ಲಾಭದಾಯಕವಾಗಿ ಕಾರ್ಯ ನಿರ್ವಹಿಸುತ್ತಿದ್ದವು.

1980ರ ದಶಕದಲ್ಲಿ ಸೋವಿಯೆಟ್ ಒಕ್ಕೂಟದಲ್ಲಿ ಇತರ ಕ್ಷೇತ್ರಗಳಂತೆ ಕೃಷಿ ಕ್ಷೇತ್ರದಲ್ಲಿಯೂ ಉತ್ಪಾದನೆಯ ಸ್ಥಗಿತತೆ, ಇಳಿಕೆಯೂ ಕಂಡು ಬರಲಾರಂಭಿಸಿತು. ಆಹಾರ ಧಾನ್ಯಗಳ ಉತ್ಪಾದನೆ 1980ರ ಅತ್ಯಂತ ಹೆಚ್ಚು 20.5 ಕೋಟಿ ಟನ್‌ನಿಂದ ಕಡಿಮೆಯಾಗಿ 1985ರ ಹೊತ್ತಿಗೆ 18.0 ಕೋಟಿ ಟನ್ ಗೆ ತಲುಪಿತು. 1985ರ ನಂತರದ ಗೋರ್ಬಚೇವ್ ನಾಯಕತ್ವದ 'ಪುನರ್‌ರಚನೆ'ಯ ಸುಧಾರಣೆಗಳ ಭಾಗವಾಗಿ, ಕೃಷಿಯಲ್ಲಿ 'ಉತ್ಪಾದನೆಗೆ ಉತ್ತೇಜನ' ಕೊಡಲು ಸಾಮೂಹಿಕ ಫಾರ್ಮುಗಳ ಕಾರ್ಮಿಕರಿಗೆ ಮತ್ತು ಖಾಸಗಿ ಉತ್ಪಾದಕರಿಗೆ ಭೂಮಿಯನ್ನು ದೂರಗಾಮಿ–ಲೀಸ್ ಕೊಟ್ಟು ಏನು ಎಷ್ಟು ಬೆಳೆಯಬೇಕು ಮತ್ತು ಎಷ್ಟು ಬೆಲೆಗೆ ಮಾರಬೇಕು ಎನ್ನುವ ಸ್ವಾತಂತ್ರ್ಯ ಕೊಡುವ ವ್ಯವಸ್ಥೆ ಜಾರಿಗೆ ತರಲಾಯಿತು. ಆದರೆ ಅದಕ್ಕೆ ಭಾರಿ ಸ್ಪಂದನೆ ಬಾರದೆ ವಿಫಲವಾಯಿತು. ಇತರ ಕ್ಷೇತ್ರಗಳಂತೆ ಆಗಾಗ ಸುಧಾರಣೆಗಳ ಹೆಸರಲ್ಲಿ ವಿವಿಧ ಬದಲಾವಣೆಗಳು ಯಾವುದು ಸಫಲವಾಗದೆ ಬಿಕ್ಕಟ್ಟು ತೀವ್ರವಾಯಿತು

ಆದರೆ ಕೃಷಿ–ಕೈಗಾರಿಕಾ ಸಂಕೀರ್ಣಗಳು ಸಮಾಜವಾದಿ ವ್ಯವಸ್ಥೆ ಸ್ಥಾಪಿಸುವುದರಲ್ಲಿ ಕೃಷಿ ಸಾಮೂಹಿಕೀಕರಣದ ಮುಂದಿನ ಹೆಜ್ಜೆಯಾಗಿರುವ ಮಹತ್ವ ಹೊಂದಿವೆ.

ಪುಸ್ತಕಗಳ ಪ್ರಕಟಣೆ, ಚಲನಚಿತ್ರಗಳು, ಸಂಗೀತ, ಕಲೆಗಳಿಗೆ ಪ್ರೋತ್ಸಾಹ ನೀಡಲಾಯಿತು.

ಭೂ ಸಂಬಂಧಗಳ ಕ್ರಾಂತಿಕಾರಿ ಬದಲಾವಣೆ

ಕೃಷಿಯಲ್ಲಿ ಮತ್ತು ಭೂ ಸಂಬಂಧಗಳಲ್ಲಿ ತರಲಾದ ಕ್ರಾಂತಿಕಾರಿ ಬದಲಾವಣೆಗಳು ರಶ್ಯಾ ಸಮಾಜವಾದಿ ಕ್ರಾಂತಿಯ ಇನ್ನೊಂದು ಬಹುಮುಖ್ಯ ಸಾಧನೆಯಾಗಿದೆ.

ರಶ್ಯಾ ಅಂದು ಝಾರ್ ಎಂದು ಕರೆಯಲ್ಪಡುತ್ತಿದ್ದ ಅರಸೊತ್ತಿಗೆಗೆ ಒಳಪಟ್ಟ ಬೃಹತ್ ಸಾಮ್ರಾಜ್ಯವಾಗಿತ್ತು. ಝಾರ್ ನಿರಂಕುಶ ಆಳ್ವಿಕೆಯಲ್ಲಿ ದೊಡ್ಡ ದೊಡ್ಡ ಭೂಮಾಲಿಕರಿದ್ದರು. ಶ್ರೀಮಂತ ರೈತರು, ಮಧ್ಯಮ ರೈತರು ಕೆಳಸ್ತರದಲ್ಲಿದ್ದರು. ಝಾರ್ ಚಕ್ರವರ್ತಿ ಅತ್ಯುತ್ತಮವಾದ 80 ಲಕ್ಷ ಹೆಕ್ಟೇರ್ ಭೂಮಿಯ ಒಡೆಯನಾಗಿದ್ದನ್ನು. ಸುಮಾರು 28,000 ದೊಡ್ಡ ಭೂಮಾಲಿಕರು ಒಟ್ಟು 16.74 ಕೋಟಿ ಎಕ–ರೆ ಭೂಮಿಯ ಒಡೆಯರಾಗಿದ್ದರು (ಸರಾಸರಿ ಸುಮಾರು 6000 ಎಕರೆ) ಸುಮಾರು ಒಂದು ಕೋಟಿಯಷ್ಟಿದ್ದ ರೈತಾಪಿ ಕುಟುಂಬಗಳು 19.71 ಕೋಟಿ ಎಕರೆ ಭೂಮಿಯನ್ನು ಹೊಂದಿದ್ದರು. (ಸರಾಸರಿ 20 ಎಕರೆ ಮಾತ್ರ) ಅಸಂಖ್ಯಾತ ಭೂರಹಿತರು ಕೃಷಿ ಕೂಲಿಕಾರರಾಗಿ ಅಥವ ಜೀತದಾಳುಗಳಾಗಿ ದುಡಿಯುತ್ತಿದ್ದರು. ಬಡರೈತರು ಮತ್ತು ಕೃಷಿ ಕೂಲಿಕಾರರು ಭೂಮಿಯ ಹಕ್ಕನ್ನು ಪಡೆದು ಭೂಮಾಲಿಕರ ದಾಸ್ಯದಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಿದ್ದರು. ಆದ್ದರಿಂದಲೇ ರಶ್ಯಾದ ಕಾರ್ಮಿಕರು ಮತ್ತು ಸೈನಿಕರು ನಡೆಸಿದ ಸಶಸ್ತ್ರ ಹೋರಾಟಕ್ಕೆ ಗ್ರಾಮೀಣ ಪ್ರದೇಶದಲ್ಲಿ ಬಡ ರೈತರು ಮತ್ತು ಕೃಷಿ ಕೂಲಿಕಾರರು ದೃಢವಾದ ಬೆಂಬಲ ನೀಡಿದರು. ಭೂ ಮಾಲಕರ ಮಹಲುಗಳಿಗೆ ಬೆಂಕಿ ಹಚ್ಚಿದರು. ಅವರ ಉಗ್ರಾಣಗಳಲ್ಲಿ ಕೂಡಿ–ಟ್ಟ ಧಾನ್ಯಗಳನ್ನು ಹಾಗೂ ಕೃಷಿ ಸಲಕರಣೆಗಳನ್ನು ವಶಪಡಿಸಿಕೊಂಡರು. ಅವರ ಭೂಮಿಯನ್ನು ಆಕ್ರಮಣಮಾಡಿಕೊಂಡರು.

ಸೋವಿಯತ್ ಕ್ರಾಂತಿ ಮತ್ತು ಪ್ಯಾರಿಸ್ ಕಮ್ಯೂನ್ ನಡುವೆ ಹೋಲಿಕೆ ಮಾಡುತ್ತಾ ಲೆನಿನ್ ಹೀಗೆ ಹೇಳುತ್ತಾರೆ – ಪ್ಯಾರಿಸ್ ಕಾರ್ಮಿಕರು ಕ್ರಾಂತಿಯ ನಂತರ 2 ತಿಂಗಳು 10 ದಿನಗಳ ಕಾಲ ಮಾತ್ರ ಅಧಿಕಾರವನ್ನು ಉಳಿಸಿಕೊಂಡರು. ರೈತರ ಬಹುದೊಡ್ಡ ವಿಭಾಗ ಕಾರ್ಮಿಕರಿಗೆ ಬೆಂಬಲ ನೀಡದಿರುವುದು ಪ್ಯಾರಿಸ್ ಕಮ್ಯೂನ್ ಸೋಲಿಗೆ ಕಾರಣವಾಯಿತು. ಆದರೆ ರಶ್ಯಾದಲ್ಲಿ ಕಾರ್ಮಿಕ ವರ್ಗಕ್ಕೆ ಬಹುಸಂಖ್ಯಾತ ದುಡಿಯುವ ರೈತರ ಗಾಢವಾದ ಬೆಂಬಲ ದೊರೆಯಿತು. ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ನಡುವಿನ ಸಖ್ಯತೆ ಸಮಾಜವಾದಿ ಕ್ರಾಂತಿಯ ಬಹುದೊಡ್ಡ ಚಾಲನಾ ಶಕ್ತಿಯಾಗಿದೆ.

ರಶ್ಯಾದಲ್ಲಿ ಕಾರ್ಮಿಕ ವರ್ಗದ ಸಮರಶೀಲ ನೇತೃತ್ವದಲ್ಲಿ ರೈತಾಪಿ ವರ್ಗಗಳ ದೃಢವಾದ ಸಖ್ಯತೆಯೊಂದಿಗೆ ಸಮಾಜವಾದಿ ಕ್ರಾಂತಿ ಯಶಸ್ವಿಯಾದ ಪರಿಣಾಮವಾಗಿ ಮಧ್ಯಯುಗದಿಂದ ಜಾರಿಯಲ್ಲಿದ್ದ ಪ್ರತಿಗಾಮಿ ಭೂಮಾಲಕ ಪದ್ಧತಿ ಕೊನೆಗೊಳ್ಳುವಂತಾಯಿತು. ಭೂಮಾಲಕರ ಭೂಮಿಯನ್ನು ಭೂರಹಿತ ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ವಿತರಣೆ ಮಾಡಲಾಯಿತು.



ಭೂಮಿಯ ಘೋಷಣೆ :

1917 ರ ನವೆಂಬರ್ 7 ರಂದು (ರಶ್ಯನ್ ಕ್ಯಾಲೆಂಡರ್ ಪ್ರಕಾರ ಅಕ್ಟೋಬರ್ 25) ರಶ್ಯಾ ಕ್ರಾಂತಿ ಯಶಸ್ವಿಯಾಗಿತ್ತು. ಲೆನಿನ್ ಅಂದು ರಾತ್ರಿ ನಾಗರಿಕರನ್ನು ಉದ್ದೇಶಿಸಿ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ 'ತಾತ್ಕಾಲಿಕ ಸರ್ಕಾರ ಪದಚ್ಯುತಗೊಂಡಿದೆ' ಎಂದು ಘೋಷಿಸಿದರು. ಮರುದಿನ ನವಂಬರ್ 8 ರಂದು ನಡೆದ ಅಖಿಲ ರಶ್ಯಾ ಸೋವಿಯತ್‌ಗಳ 2ನೇ ಅಧಿವೇಶನದಲ್ಲಿ ಲೆನಿನ್ ನೇತೃತ್ವದ ಸೋವಿಯತ್ ಸರ್ಕಾರ ಹಾಗೂ ಇತರ ಅಂಗಸಂಸ್ಥೆಗಳು ಸ್ಥಾಪಿಸಲ್ಪಟ್ಟವು.

ಅಧಿವೇಶನವು 2 ಮಹತ್ವದ ಘೋಷಣೆಗಳಿಗೆ ಸಹಿ ಹಾಕಿತು. 1) ಶಾಂತಿಯ ಘೋಷಣೆ 2) ಭೂಮಿಯ ಘೋಷಣೆ. ಶಾಂತಿಯ ಘೋಷಣೆಯಲ್ಲಿ ಯುದ್ಧದಲ್ಲಿ ತೊಡಗಿರುವ ಎಲ್ಲ ದೇಶಗಳು ತಕ್ಷಣವೇ ಯುದ್ಧವನ್ನು ನಿಲ್ಲಿಸಿ ಶಾಂತಿ ಮಾತುಕತೆಗೆ ಮುಂದಾಗಬೇಕೆಂದು ಮನವಿ ಮಾಡಿಕೊಳ್ಳಲಾಯಿತು. ಭೂಮಿಯ ಘೋಷಣೆಯಲ್ಲಿ ಎಲ್ಲ ಭೂಮಿ, ಎಸ್ಟೇಟುಗಳು, ಚರ್ಚುಗಳ ಮತ್ತು ಆಶ್ರಮಗಳ ಭೂಮಿಗಳನ್ನು, ಅವುಗಳ ಜಾನುವಾರುಗಳನ್ನು, ಕೃಷಿ ಸಲಕರಣೆಗಳನ್ನು ಮತ್ತು ಕಟ್ಟಡಗಳನ್ನು ಸರ್ಕಾರ ವಹಿಸಿಕೊಂಡು ಅವುಗಳನ್ನು ಸ್ಥಳೀಯ ಭೂ ಸಮಿತಿಗಳಿಗೆ ಮತ್ತು ರೈತರ ಸೋವಿಯತ್‌ಗಳಿಗೆ ವಹಿಸಿಕೊಡಲಾಗಿದೆ ಎಂದು ಘೋಷಿಸಲಾಯಿತು. ಇದರೊಂದಿಗೆ ಹಿಂದಿನ ಬಂಡವಾಳಶಾಹಿ ಪ್ರಜಾಪ್ರಭುತ್ವ ಕ್ರಾಂತಿಯ ಪೂರ್ಣಗೊಳ್ಳದ ಕರ್ತವ್ಯವನ್ನು ಪೂರ್ಣಗೊಳಿಸಿದಂತಾಯಿತು.

ಭೂಮಿಯ ಘೋಷಣೆ, ಯಾವುದೇ ಪರಿಹಾರ ನೀಡದೆ ಖಾಸಗಿ ಭೂ ಒಡೆತನವನ್ನು ಅಂತ್ಯಗೊಳಿಸಿತು. ಭೂಮಾಲಕರ ಎಲ್ಲ ಭೂಮಿ ಈಗ ಜನರ ಭೂಮಿಯಾಯಿತು. ವಶಪಡಿಸಲಾದ ಜಾನುವಾರುಗಳನ್ನು ಮತ್ತು ಕೃಷಿ ಸಲಕರಣೆಗಳನ್ನು ಬಡರೈತರಿಗೆ ವಿತರಿಸಲಾಯಿತು. ಭೂಮಿ ವಿತರಣೆಯಲ್ಲಿ ಕ್ರಾಂತಿಗಾಗಿ ಮಡಿದ ಸೈನಿಕರ ಕುಟುಂಬಗಳಿಗೆ ಆಧ್ಯತೆ ನೀಡಲಾಯಿತು. 1918 ರ ಫೆಬ್ರವರಿ ಒಳಗಾಗಿ ಎಲ್ಲ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕ್ರಿಯೆ ನಡೆದಾಗ ಲೂಟಿ ಮಾಡಲು ಯತ್ನಿಸಿದವರ ವಿರುದ್ಧ ಕಠಿಣ ಕ್ರಮ ಜರಗಿಸಲಾಯಿತು. ಸಾಮೂಹಿಕ ಬೇಸಾಯ, ಕಮ್ಯೂನ್ಸ್, ಸಹಕಾರಿ ಸಂಘಗಳಿಗೆ ಹೆಚ್ಚಿನ ಆ ಧ್ಯತೆ ನೀಡಲಾಯಿತು. ಆದರೂ ಲೆನಿನ್ ಸಾಮೂಹಿಕ ಬೇಸಾಯದಂತಹ ಕ್ರಮಗಳನ್ನು ರೈತರ ಮೇಲೆ ಹೇರಬಾರದು ಎಂದು ಸೂಚಿಸಿದ್ದರು. ರೈತರು ಕಾಲಕ್ರಮೇಣ, ಸ್ವಂತ ಅನುಭವದ ಆಧಾರದಲ್ಲಿ ಸಾಮೂಹಿಕ ಬೇಸಾಯದಂತಹ ಪದ್ಧತಿಗಳನ್ನು ಅನುಸರಿಸುವಂತಾಗಬೇಕೆಂದು ಬಯಸಿದ್ದರು.

ಅಂತರ್ಯುದ್ಧ :

ಕೋಟಿಗಟ್ಟಲೆ ಭೂರಹಿತ ರೈತಾಪಿ ಜನಗಳಿಗೆ ಭೂಮಿಯನ್ನು ಒದಗಿಸಿದ ಸಮಾಜವಾದಿ ಕ್ರಾಂತಿಯನ್ನು ಮತ್ತು ಅದರ ಸಾಧನೆಗಳನ್ನು

ಪುಟ 10 ಕ್ಕೆ

ಬಂಡಾಯ ಕವಿ ಜಂಬಣ್ಣ ಅಮರಚಿಂತ ಇನ್ನಿಲ್ಲ

ಅಮರಚಿಂತ ಕವಿಯಾಗಿ ಅವರ ಸಮಕಾಲೀನರಿಗಿಂತ ಭಿನ್ನರು. ವ್ಯಕ್ತಿಯಾಗಿ ಕೂಡ ಭಿನ್ನರು. ಕವಿತ್ವ ಮತ್ತು ವ್ಯಕ್ತಿತ್ವ ಅವರ ವಿಷಯದಲ್ಲಿ ಅಭಿನ್ನ.

ಅಮರಚಿಂತರು ರಾಯಚೂರಿನಲ್ಲಿ ಹುಟ್ಟಿ ಬೆಳೆದವರು. ಎಪ್ಪತ್ತರ ದಶಕದಲ್ಲಿ ಬಂಡಾಯ–ದಲಿತ ಸಾಹಿತ್ಯ ಚಳವಳಿ ಆರಂಭವಾಯಿತಷ್ಟೆ. ಈ ಬಂಡಾಯ–ದಲಿತ ಚಳವಳಿಯೇ ಕವಿ ಅಮರಚಿಂತರ ಸೃಷ್ಟಿಸಿಕೊಂಡು ಹೆಮ್ಮೆಪಟ್ಟಿತು. ರಾಯಚೂರು ಸೀಮೆಯ ಬದುಕು ಕಾವ್ಯಕ್ಕೆ ಕನ್ನೆನೆಲ ಅಂತಾರಲ್ಲ ಅದು ನಿಜವಾದ ಅರ್ಥದಲ್ಲಿ ಸತ್ಯ. ಪ್ರಭುತ್ವಗಳಿಂದ, ಭೂಮಾಲೀಕರಿಂದ ಕೆಳವರ್ಗದ ಸಮುದಾಯಗಳು ನಿತ್ಯ ಬೆವರಿಳಿಸಿ ನಿಟ್ಟುಸಿರು ಬಿಡುತ್ತಿದ್ದವು. ಇವರ ಬದುಕನ್ನು ಕಾವ್ಯದ ಮೂಲಕ ನೋಡುವುದಕ್ಕೆ ಎಪ್ಪತ್ತರ ದಶಕ ಸಿದ್ಧಗೊಳ್ಳುತ್ತಿತ್ತು. ಈ ಸಂದರ್ಭವೇ ಜಂಬಣ್ಣ ಅಮರಚಿಂತ ಎಂಬ ಕವಿಯನ್ನು ಸೃಷ್ಟಿಸಿತು.

ಬಹುತೇಕ ಸಾಹಿತಿಗಳಂತೆ ಅವರು ಕಾಲೇಜು ಪ್ರಾಧ್ಯಾಪಕರಲ್ಲ. ಆರೋಗ್ಯ ಇಲಾಖೆಯಲ್ಲಿ ಚಿಕ್ಕ ಹುದ್ದೆಯಲ್ಲಿ ದುಡಿದವರು. ಅಲ್ಲಿ ಅಮರಚಿಂತರು ವಚನಕಾರ ಮರಳುಶಂಕರನಂತೆ ಬದುಕಿ ಇದ್ದವರು. ದಲಿತ ಪರವಾದ ಚಳವಳಿಯಲ್ಲಿ ಸದ್ದಿಲ್ಲದೇ ಪಾಲ್ಗೊಂಡವರು. ವಚನಕಾರರಂತೆ ಚಳವಳಿಯ ಭಾಗವಾಗಿ ಕಾವ್ಯವನ್ನು ಕಟ್ಟಿದವರು. ಅವರ ಕಾವ್ಯ ಎಂದೂ ಧ್ವನಿಯನ್ನು ತಗ್ಗಿಸಿಕೊಳ್ಳಲಿಲ್ಲ. ತಮ್ಮ ಕಾವ್ಯ ಮೊನಚನ್ನು ಕಳೆದು ಕೊಳ್ಳದಂತೆ ಅದಕ್ಕೆ ಬೇಕಾದ ಸತ್ವವನ್ನು ತುಂಬಿಕೊಳ್ಳಲು ಅನೇಕ ಹೊಸದಾರಿಗಳನ್ನು ಕಂಡುಕೊಳ್ಳುತ್ತಲೆ ಇದ್ದರು.

ತೆಲುಗಿನ ಪ್ರತಿಭಟನಾ ಕಾವ್ಯವನ್ನು ಓದಿಕೊಂಡರು. ತಮ್ಮ ಕಾವ್ಯದ ರೂಪಗಳನ್ನು ಬದಲಿಸಿಕೊಳ್ಳುತ್ತ ಭಿನ್ನವಾಗುತ್ತ ಸಾಗಿಬಂದರು.



ಉರ್ದು ಕಾವ್ಯದ ಪ್ರೇರಣೆಯಿಂದ ಗಜಲ್ಗಳನ್ನು ರಚಿಸಿದರು. ಮಧುರ ರಮ್ಯ ಕೇಂದ್ರಿತವಾಗಿದ್ದ ಗಜಲ್ ರೂಪವನ್ನು ಬಳಸಿ ಪ್ರತಿಭಟನಾ ಕಾವ್ಯವನ್ನೇ ಅಭಿವ್ಯಕ್ತಿಸಿದರು. ಈಚೆಗೆ ಅವರ ಕಾವ್ಯ ಹಲವು ಪ್ರಯೋಗಗಳಲ್ಲಿ ಮುನ್ನಡೆಯಿತು. ನಾಲ್ಕು ಸಾಲುಗಳ ಪದ್ಯ, ಎರಡು ಸಾಲುಗಳ ಪದ್ಯಗಳನ್ನು ಬರೆದರು. ಈ ಎಲ್ಲಾ ಕಾವ್ಯದಲ್ಲಿ ಬದುಕಿನ ತತ್ವವನ್ನು ಸಾತ್ವಿಕ ಧ್ವನಿಯಲ್ಲಿ ಹೇಳತೊಡಗಿದರು. ಇಲ್ಲಿಯೂ ಅವರ ಕಾವ್ಯದ ಕೇಂದ್ರದ ವಸ್ತು ಶೋಷಿತ ಮನುಷ್ಯ. ಮೃಗತ್ವವನ್ನು ಮನುಷ್ಯ ಮರೆತು ಮಾನವೀಯತೆಯನ್ನು ಮೈಗೂಡಿಸಿಕೊಳ್ಳುವ ನೆಲೆಯಲ್ಲಿ ಕಾವ್ಯವನ್ನು ರಚಿಸಿದರು. ಕಾವ್ಯ ಹಿಡಿಯಲಾರದ ಬದುಕನ್ನು ಚಿತ್ರಿಸಲು ಕಾದಂಬರಿ ಪ್ರಕಾರಕ್ಕೆ ಕೈಯಾಕಿದರು 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಮತ್ತು 'ಬೂಟುಗಾಲಿನ ಸದ್ದು' ಎಂಬ ಎರಡು ಕಾದಂಬರಿಗಳನ್ನು ಬರೆದರು.

ಗಜಲ್, ರುಬಾಯಿ, ಖಿತಾ ಮುಂತಾದ ಕಾವ್ಯ ಪ್ರಕಾರಗಳಲ್ಲಿ ತಮ್ಮ ಚಿಂತನೆಗಳನ್ನು ಅಭಿವ್ಯಕ್ತಿಸಿದರು. ಈ ಕಾವ್ಯ ಪ್ರಕಾರಗಳು ಮೂಲದಲ್ಲಿ ಯಾವ ವಸ್ತುವಿನ ಅಭಿವ್ಯಕ್ತಿಗಾಗಿ ಹುಟ್ಟಿದವು, ಯಾವ ಕಾರಣಗಳಿಗೆ ರಚನೆಗೊಂಡವು ಎಂಬುದನ್ನು ತಿಳಿದೂ, ಅದನ್ನು ಬದಿಗಿಟ್ಟು ತಮ್ಮ ಸಂವೇದನೆಗೆ ಅದನ್ನು ಬಳಸಿದರು. ಅದಕ್ಕೆ ಬೇಕಾದ ವ್ಯಾಕರಣ ಅಧ್ಯಯನ ಮಾಡಿದರು. ಓದುವ ಕಾವ್ಯವನ್ನೇ ಬರೆದರು. ನಿಶ್ಯಬ್ದದೊಳಗೇ ಸದ್ದು ಕೇಳಿಸುವಂತೆ ಬರೆಯುತ್ತಿದ್ದ ಅಮರಚಿಂತರು ಈ ಹೊಸ ಕಾವ್ಯ ಪ್ರಕಾರಗಳಲ್ಲಿ ಕಲ್ಯಾಣದ ಕಾರುಣ್ಯವನ್ನೇ ಅಭಿವ್ಯಕ್ತಿಸಿದರು.

– ಅಮರೇಶ ನುಗಡೋಣಿ

ಅಮರಚಿಂತರು ಕೇವಲ ಬರಹಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡ ಪ್ರತಿಭೆಯಲ್ಲ. ಶೋಷಣೆಯ ವಿರುದ್ಧ ಎಲ್ಲೇ ದನಿಯೆದ್ದರೂ ಅಲ್ಲಿ ಅವರು ಹಾಜರಾಗುತ್ತಿದ್ದರು. ದಲಿತರ ಮೇಲಿನ, ದಮನಿತರ ಮೇಲಿನ, ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ನಿರಂತರವಾಗಿ ಹೋರಾಡಿದರು. ಊಳಿಗಮಾನ್ಯ ಭೂಮಾಲಿಕರ ಶೋಷಣೆ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ಮುಂತಾದ ಅನಿಷ್ಟ ಪದ್ಧತಿಗಳ ವಿರುದ್ಧ ಅವರದ್ದು ನಿರಂತರ ಸಮರವಾಗಿತ್ತು.

ಅಮರಚಿಂತರು ತಮ್ಮ ಬರವಣಿಗೆಯಲ್ಲಿ ದಮನಿತರ ದನಿಯಾದ ಸಾರ ಮತ್ತು ಓದುಗಸ್ನೇಹಿಯಾದ ರೂಪಗಳಿಂದ ಜನಮಾನಸದಲ್ಲಿ ಅಚ್ಚಳಿಯದಂತೆ ಉಳಿದಿದ್ದಾರೆ. ಕನ್ನಡದಲ್ಲಿ ಘಜಲ್ ಬರವಣಿಗೆಗಳಿಗೆ ಹೊಸ ಮಜಲನ್ನು ಸೃಷ್ಟಿಸಿದ ಕೆಲವೇ ಬರಹಗಾರರಲ್ಲಿ ಅಮರಚಿಂತರು ಪ್ರಮುಖರು.

ಅವರು ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ತೊಂಬತ್ತರ ದಶಕದ ಕೊನೆಯಲ್ಲಿ ಬರೆದ "ಕುರುಮಯ್ಯ ಮತ್ತು ಅಂಕುಶದೊಡ್ಡಿ" ಕಾದಂಬರಿಯು ಕೊರವ ಸಮುದಾಯದ ದಾರುಣ ಬದುಕನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡುತ್ತದೆ. ಕಷ್ಟಬಂದಾಗ ಸ್ವಂತ ಹೆಂಡತಿಯನ್ನೇ ಮಾರುವ ಅನಿಷ್ಟ ಪದ್ಧತಿಯ ಮೇಲೆ ಅಮರಚಿಂತರು ಈ ಕಾದಂಬರಿಯಲ್ಲಿ ಬೆಳಕು ಚೆಲ್ಲಿದ್ದಾರೆ. ಇತ್ತೀಚಿಗೆ ಪ್ರಕಟಗೊಂಡ ಅವರ "ಬೂಟುಗಾಲಿನ ಸದ್ದು" ಕಾದಂಬರಿಯು ದೇಶವು ಸ್ವಾತಂತ್ರ್ಯ ಪಡೆಯುತ್ತಿದ್ದ ಸಂದರ್ಭದಲ್ಲಿ ಹೈದರಾಬಾದಿನ ನಿಜಾಮನ ರಜಾಕಾರರು (ನಿಜಾಮನ ಖಾಸಗಿ ಮಿಲಿಷಿಯ) ಹೈದರಾಬಾದ್ ಕರ್ನಾಟಕದ ಜನರ ಮೇಲೆ ಹರಿಬಿಟ್ಟಿದ್ದ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ.

– ಕುಮಾರ್ ಬುರಡಿಕಟ್ಟಿ

ಅಮರಚಿಂತರ ಬರಹಗಳು

ಕಾವ್ಯ

ಮುಂಜಾವಿನ ಕೊರಳು
ಅಧೋಜಗತ್ತಿನ ಅಕಾವ್ಯ
ಮಣ್ಣಲ್ಲಿ ಬೀರಿದ ಅಕ್ಷರ
ಅಮರಚಿಂತ ಕಾವ್ಯ
ಪದಗಳು ನಡೆದಾಡುತ್ತಿವೆ ಪಾದಗಳಾಗಿ ಗಜಲ್
ಮುಳ್ಳಿನ ಬಾಯಲ್ಲಿ ಹೂ ನಾಲಿಗೆ
ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ

ಕಾದಂಬರಿ

ಕುರುಮಯ್ಯ ಮತ್ತು ಅಂಕುಶದೊಡ್ಡಿ
ಬೂಟುಗಾಲಿನ ಸದ್ದು

ಕಾವ್ಯದ ಸ್ಯಾಂಪಲುಗಳು

ರಕ್ತಸಿಕ್ತ ಖಡ್ಗ ನಿಮ್ಮ ಒರೆಯಲ್ಲಿ
ಹಂತಕರು ಯಾರೆಂದು ಮತ್ತೆ ಕೇಳುವಿರಿ
ಬಿತ್ತುವ ಬೀಜ ನಿಮ್ಮ ಉಗ್ರಾಣದಲ್ಲಿ
ಬೆಳೆ ಯಾಕೆ ಬರಲಿಲ್ಲವೆಂದು ಮತ್ತೆ ಕೇಳುವಿರಿ

*****

"ಹುಟ್ಟು ಕುರುಡರ ಓಣಿಯಲ್ಲಿ ..
ಚಾಳೀಸು ಮಾರಿದಾತ.. ಗಾಂಧಿ ತಾತ..!"

*****

ರೊಟ್ಟಿ ಭೂಮಿಗಿಂತ ಮಿಗಿಲು,
ಅದರ ಎತ್ತರ ಎವರೆಸ್ಟಿಗೂ ದಿಗಿಲು

*****

ಬೆಂಕಿಗೆ ಸುಡದ ಮನೆಗಳು ಹಿಮದಲ್ಲಿ ಸುಟ್ಟವು
ಎಣ್ಣೆಯಲ್ಲಿ ಸುಡದ ಮನೆಗಳು ರಕ್ತದಲ್ಲಿ ಸುಟ್ಟವು

*****

ನಾನು ಸದಾ ಬೇಟೆಯ ಜೊತೆಗಿದ್ದೇನೆ.
ಬೇಟೆಗಾರನ ಜೊತೆಯಲ್ಲ

*****

ಪ್ರತಿ ಗತಿ ಪ್ರಗತಿಯಲ್ಲ
ಪ್ರತಿ ಕೆಂಪು ಕ್ರಾಂತಿಯಲ್ಲ
ಹೂದೋಟದಲ್ಲೆಂದು ಹುಲಿ ಹುಟ್ಟುವುದಿಲ್ಲ
ಕಾಗದದ ಹುಲಿಗಳೆಂದೂ ಘರ್ಜಿಸುವುದಿಲ್ಲ

*****

ಮಸೀದಿಯಲ್ಲಿ ಅಲ್ಲಾಹುವಿಗೆ ಪ್ರಾರ್ಥನೆ
ಮಂದಿರದಲಿ ರಾಮನಿಗೆ ಕೀರ್ತನೆ
ಒಂದೇ ಗಂಧದ ಕಡ್ಡಿ ಎರಡರಲಿ ಉರಿದರೆ
ಅಳಿದು ಅಂತರ ಉಳಿಯಲಿ ಸದ್ಭವನೆ

ಪೆಟ್ರೋಮ್ಯಾಕ್ಸ್ ಹೊತ್ತ ಕೊರವರು

ಯಾರಿವರು? ಯಾರಿವರು?
ಯಾವ ಕಡೆಗೆ ನಡೆದಿರುವರು?
ತಲ ತಲಾಂತರ ತಲೆಯ ಮೇಲೆ
ಬೆಳಕು ಹೊತ್ತು ಸಾಗಿದವರು
ಅವರಿವರು, ಯಾರಿಗ್ಯಾಕೆ–
ತಮ್ಮ ನೆರಳಿಗೇ ಅಪರಿಚಿತರು
ಪಂಡಿತ ಕವಿಗಳು ಮರೆತ
ಜಾನಪದ ಛಂದಗಳು ॥ಯಾರಿವರು॥

ತಲೆಯ ಮೇಲೆ ಬಿಜಲಿನ ಕಾವು
ಹೊಟ್ಟೆಯೊಳಗೆ ಹಸಿವಿನ ಗಾವು
ಜೀವನವೆಲ್ಲ ಕುದ್ದು ಕುದ್ದು
ಆವಿಯಾಗಿ ಹೋದವರು
ನಿತ್ಯ ನಿತ್ಯ ಹೊಟ್ಟೆಯಿಂದ
ಹಸಿವನ್ನು ಹೆತ್ತವರು ॥ಯಾರಿವರು॥

ಇದ್ದವರು, ಕದ್ದವರು
ಚುನಾವಣೆ ಗೆದ್ದವರು,
ಇವರು ಹೊತ್ತ ಬೆಳಕಿನಲ್ಲಿ
ಲಕಲಕ ಹೊಳೆದರು !
ಕಣ್ಣಿಗಂತೂ ಕಾಣರು
ಪೆಟ್ರೋಮ್ಯಾಕ್ಸ್ ಹೊತ್ತವರು
ಬೆಳಕಿನಡಿಯ ಕತ್ತಲಲ್ಲೆ
ಕತ್ತಲಾಗಿ ನಿಂತವರು
ಕತ್ತಲೆಯ ಹುದಲಲ್ಲಿ
ಹೂತು ಹೋಗುತ್ತಿರುವವರು ॥ಯಾರಿವರು॥

ಅಕ್ಟೋಬರ್ ಕ್ರಾಂತಿ ಮತ್ತು ಭೂಸಂಬಂಧಗಳು..... ಪುಟ 9 ರಿಂದ

ರಕ್ಷಿಸಲು ರಷ್ಯಾದ ಕಾರ್ಮಿಕರು, ರೈತರು ಅಪಾರ ಬೆಲೆ ತೆರಬೇಕಾಯಿತು. ದುಡಿಯುವ ಜನರ ಮೊದಲ ಪ್ರಭುತ್ವವನ್ನು ನಾಶಮಾಡಲು ಎಲ್ಲ ಬಂಡವಾಳಶಾಹಿ ದೇಶಗಳು ಒಂದಾದವು. ರಶ್ಯಾದೊಳಗಿನ ಬಂಡವಾಳಗಾರರು, ಮಾಜಿ ಭೂಮಾಲಕರು, ಶ್ರೀಮಂತ ರೈತರು ಸೋವಿಯತ್ ಪ್ರಭುತ್ವದ ವಿರುದ್ಧ ದಂಗೆಯೆದ್ದರು. ಹಲವೆಡೆ ಸೋವಿಯತ್ ಸರ್ಕಾರವನ್ನು ಉರುಳಿಸಿ 'ರಾಷ್ಟ್ರೀಯ' ಸರ್ಕಾರಗಳನ್ನು ರಚಿಸಿದರು. ಭೂಮಾಲಿಕರು ಭೂಮಿಯನ್ನು ಮರಳಿ ವಶಪಡಿಸಿಕೊಂಡರು. ಆದರೆ ಕ್ರಾಂತಿಕಾರಿ ಪ್ರಜ್ಞೆಯನ್ನು ಹೊಂದಿದ್ದ ರೈತರು, ಕಾರ್ಮಿಕರು ಅಪಾರ ಸಂಖ್ಯೆಯಲ್ಲಿ ಕೆಂಪು ಸೈನ್ಯದಲ್ಲಿ ಭರ್ತಿಯಾದರು.

ಕ್ರಾಂತಿಯ ನಂತರ ಭೂಮಾಲಿಕರ ಭೂ ಒಡೆತನವನ್ನು ರದ್ದುಗೊಳಿಸಲಾಗಿದ್ದರೂ ಗ್ರಾಮೀಣ ಶ್ರೀಮಂತರ (ಖುಕ್ಸ್) ಅವರ ಭೂಮಿಯನ್ನು ಮುಟ್ಟಿರಲಿಲ್ಲ. ಇದೇ ಸಮಯದಲ್ಲಿ ರಶ್ಯಾದಲ್ಲಿ ತೀವ್ರವಾದ ಬರ ಆವರಿಸಿತು. ಗ್ರಾಮೀಣ ಶ್ರೀಮಂತರು ಪ್ರತಿಕ್ರಾಂತಿಕಾರಿ ಶಕ್ತಿಗಳೊಂದಿಗೆ ಕೈಜೋಡಿಸಿಕೊಂಡರು. ತಮ್ಮ ಉಗ್ರಾಣಗಳಲ್ಲಿ ಕೂಡಿಟ್ಟ ದವಸದಾನ್ಯಗಳನ್ನು ಮಾರಾಟ ಮಾಡಲು ನಿರಾಕರಿಸಿದರು. ಅಧಿಕಾರಿಗಳು ಒತ್ತಾಯಿಸಿದಾಗ ಅವರ ಮೇಲೆ ದಾಳಿ ಮಾಡಿ ಅವರನ್ನು ಸಾಯಿಸಿದರು. ಆಹಾರದ ತೀವ್ರ ಅಭಾವ ಉಂಟಾಯಿತು. ಸೈನಿಕರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಲು ಕಾರ್ಖಾನೆಗಳಲ್ಲಿ ಕಾರ್ಮಿಕರು ಹಾಗೂ ಆಹಾರ ಒದಗಿಸಲು ರೈತರು ಹೊಲಗದ್ದೆಗಳಲ್ಲಿ ಹೆಚ್ಚುವರಿ ಕೆಲಸ ಮಾಡಿದರು. ಕೃಷಿ ಉತ್ಪಾದನೆಯನ್ನು ತುರ್ತಾಗಿ ಹೆಚ್ಚಿಸಲು ಕೃಷಿಯಲ್ಲಿ ಯಾಂತ್ರೀಕರಣ, ಸಾಮೂಹಿಕ ಬೇಸಾಯ, ಸಹಕಾರಿ ಬೇಸಾಯಕ್ಕೆ ಪ್ರೋತ್ಸಾಹ ನೀಡಲಾಯಿತು. ಕೆಂಪು ಸೈನ್ಯ ಬೆಳೆಯುತ್ತಾ, ಬಲಗೊಳ್ಳುತ್ತಾ ಹೋಯಿತು. ಪ್ರತಿದಾಳಿ ನಡೆಸಿತು. 55 ಲಕ್ಷ ಕೆಂಪು ಸೈನಿಕರು ಕ್ರಾಂತಿಯ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡಿದರು. ಸುಮಾರು 5 ವರ್ಷಗಳ ಭೀಕರ ಅಂತರ್ಯುದ್ಧದ ಬಳಿಕ ಪ್ರತಿಕ್ರಾಂತಿಕಾರಿ ಶಕ್ತಿಗಳು ಪತನಗೊಂಡವು. ಸುಮಾರು 50 ಸಾವಿರ ಕಮ್ಯೂನಿಸ್ಟರು ಅಂತರ್ಯುದ್ಧದ ರಣರಂಗದಲ್ಲಿ ಹುತಾತ್ಮರಾದರು. ಶ್ರೀಮಂತ ರೈತರ ಭೂಮಿಯನ್ನೂ ವಶಪಡಿಸಿಕೊಳ್ಳಲಾಗಿ ಅದನ್ನು ಬಡರೈತರಿಗೆ ವಿತರಿಸಲಾಯಿತು. ಇದರ ಪರಿಣಾಮವಾಗಿ ಬಡ ರೈತರ ಸಂಖ್ಯೆ 65% ರಿಂದ 35% ಕ್ಕೆ ಇಳಿಯಿತು. ಉಳುವವರೇ ಭೂಮಿಯ ಒಡೆಯರಾಗುವುದರೊಂದಿಗೆ ರಶ್ಯಾದ ಭೂಮಿಯ ಪ್ರಶ್ನೆ ಇತ್ಯರ್ಥವಾಯಿತು. ■

ರಾಜಕೀಯ ದೇಣಿಗೆಯ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವುದೆಂದರೆ
ರಾಜಕೀಯದಲ್ಲಿ ದೊಡ್ಡ ಕುಳಗಳ ಹಣಕ್ಕೆ ಸಹಾಯ!

ಪ್ರಕಾಶ ಕಾರಟ್

ರಾಜಕೀಯ ದೇಣಿಗೆ ಹಣಕಾಸನ್ನು ಶುದ್ಧಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎಂಬ ಸರಕಾರದ ದಾವೆ ಅನುಮಾನಕ್ಕೆಡೆ ಮಾಡುವಂಥದ್ದೂ, ಗೋಸುಂಬೆತನದ್ದೂ ಆಗಿದೆ. ಕಳೆದ ವರ್ಷ ಕೇಂದ್ರ ಬಜೆಟ್‌ನಲ್ಲಿ ಹಣಕಾಸು ಮಸೂದೆ ಮೂಲಕ ವಿದೇಶಿ ದೇಣಿಗೆ ನಿಯಂತ್ರಣ ಕಾನೂನಿಗೆ ತಂದ ತಿದ್ದುಪಡಿಯ ತರದ್ದು. ವಾಸ್ತವವಾಗಿ ಮೋದಿ ಸರಕಾರ ರಾಜಕೀಯ ಪಕ್ಷಗಳಲ್ಲಿ ವಿದೇಶಿ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸುತ್ತಿದೆ.

ದೇಶದಲ್ಲಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ವಿಚಾರದಲ್ಲಿ ಯಾವುದೇ ಪಾರದರ್ಶಕ ವಿಧಾನ ಇಲ್ಲ ಎಂದು ಹಣಕಾಸು ಸಚಿವರು ಕೇಂದ್ರ ಬಜೆಟ್‌ನಲ್ಲಿ ಒಪ್ಪಿಕೊಂಡಿದ್ದಾರೆ. ಇದನ್ನು ಸರಿಪಡಿಸಲೆಂದು, 'ಭಾರತದಲ್ಲಿ ರಾಜಕೀಯ ದೇಣಿಗೆ ವ್ಯವಸ್ಥೆಯನ್ನು ಸ್ವಚ್ಛಗೊಳಿಸಲಿಕ್ಕಾಗಿ' ಅವರು ಕೆಲವು ಕ್ರಮಗಳನ್ನು ಪ್ರಸ್ತಾವಿಸಿದ್ದಾರೆ:

1) ರಾಜಕೀಯ ಪಕ್ಷವೊಂದು ಒಬ್ಬ ವ್ಯಕ್ತಿಯಿಂದ 2000 ರೂಪಾಯಿ ನಗದು ಮಾತ್ರವೇ ದೇಣಿಗೆ ಪಡೆಯಬಹುದು.
2) ಇದಕ್ಕಿಂತ ಹೆಚ್ಚು ಮೊತ್ತದ ದೇಣಿಗೆಯನ್ನು ಚೆಕ್ ಅಥವಾ ಡಿಜಿಟಲ್ ಮಾರ್ಗದಲ್ಲಿ ನೀಡಬಹುದು.
3) ಚುನಾವಣಾ ಬಾಂಡ್‌ಗಳ ನೀಡಿಕೆ– ದೇಣಿಗೆದಾರರು ಅಧಿಕೃತ ಬ್ಯಾಂಕ್‌ಗಳಿಂದ ಚೆಕ್ ಅಥವಾ ಡಿಜಿಟಲ್ ಪಾವತಿ ಮೂಲಕ ಮಾತ್ರವೇ ಈ ಬಾಂಡ್‌ಗಳನ್ನು ಖರೀದಿಸಬಹುದು. ನಿಗದಿತ ಸಮಯ ಮಿತಿಯೊಳಗೆ ನೊಂದಾಯಿತ ರಾಜಕೀಯ ಪಕ್ಷದ ನಿಯೋಜಿತ ಖಾತೆಯಲ್ಲಿ ಮಾತ್ರವೇ ಇಂಥ ಬಾಂಡ್‌ಗಳನ್ನು ನಗದಾಗಿ ಪಡೆಯಬಹುದು.

ಈ ಎಲ್ಲ ಕ್ರಮಗಳು ಒಟ್ಟಾಗಿ ರಾಜಕೀಯ ದೇಣಿಗೆಯ ಪ್ರಮುಖ ಸಮಸ್ಯೆಯನ್ನು, ಅಂದರೆ ಪ್ರಮುಖ ರಾಜಕೀಯ ಪಕ್ಷಗಳಿಗೆ ನೀಡಲಾಗುವ, ವಿಶೇಷವಾಗಿ ಚುನಾವಣೆಗಳಲ್ಲಿ ಬಳಸಲು ನೀಡಲಾಗುವ ಅಗಾಧ ಪ್ರಮಾಣದ ಅಕ್ರಮ ಅಥವಾ ಕಪ್ಪುಹಣದ ಸಮಸ್ಯೆಯನ್ನು ಮಟ್ಟ ಹಾಕಲು ನೆರವಾಗಲಾರವು.

ವಾಸ್ತವವಾಗಿ ಇವು ಪ್ರತಿಗಾಮಿಕ್ರಮಗಳು, ಇವು ರಾಜಕೀಯದಲ್ಲಿ ಮತ್ತು ಚುನಾವಣೆಗಳಲ್ಲಿ ಕಪ್ಪು ಹಣದ ಬಳಕೆಯನ್ನು ಯಾವುದೇ ರೀತಿಯಲ್ಲಿ ತಡೆಯಲಾರವು.

ಈಗಿರುವ ಕಾನೂನಿನ ಪ್ರಕಾರ 20000 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ ಪಡೆಯುವ ರಾಜಕೀಯ ಪಕ್ಷವು ದೇಣಿಗೆದಾರರ ಹೆಸರು, ವಿಳಾಸ ಮತ್ತು ಪಾನ್ ಸಂಖ್ಯೆಯನ್ನು ಒದಗಿಸಬೇಕು. ನಗದು ದೇಣಿಗೆಯನ್ನು 2000 ರೂಪಾಯಿಗಳಿಗೆ ಸೀಮಿತಗೊಳಿಸುವುದು ಪ್ರಸ್ತಾವಿತ ಬದಲಾವಣೆಯಾಗಿದೆ. ಲೆಕ್ಕಕ್ಕೆ ಬಾರದ ಹಣ ಪಡೆಯುವುದನ್ನು ತಡೆಯಲು ಇದರಿಂದ ಯಾವ ರೀತಿಯಲ್ಲೂ ಉಪಯೋಗವಾಗುವುದಿಲ್ಲ. ಬದಲಿಗೆ, 2000 ರೂಪಾಯಿಗಿಂತ ಕಡಿಮೆ ಮೊತ್ತದ ನಗದು ದೇಣಿಗೆಯ ಪ್ರಮಾಣ ಹೆಚ್ಚಾಗುತ್ತದೆ ಅಷ್ಟೆ.

ಇದರ ಬದಲು, 2000 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ–ಅದು ನಗದು, ಚೆಕ್ ಅಥವಾ ಡಿಜಿಟಲ್ ರೂಪದಲ್ಲೇ ಇರಲಿ– ನೀಡುವವರ ವಿವರಗಳನ್ನು (ಈಗಿರುವಂತೆ 20000 ರೂಪಾಯಿಗೆ ಅನ್ವಯವಾಗುವ ರೀತಿಯಲ್ಲಿ) ಘೋಷಿಸುವಂತಿದ್ದರೆ ಚೆನ್ನಾಗಿತ್ತು.

ಬಜೆಟ್ ಭಾಷಣದಲ್ಲಿ ಹೇಳಿರುವಂತ ಚುನಾವಣಾ ಬಾಂಡ್‌ಗಳ ಪರಿಕಲ್ಪನೆ ಪಕ್ಷಗಳಿಗೆ ಹಣ ನೀಡುವ ವಿಧಾನದಲ್ಲಿ ಪಾರದರ್ಶಕತೆ ತರುವ ಉದ್ದೇಶಕ್ಕೇ ವ್ಯತಿರಿಕ್ತವಾಗಿದೆ. "ಚೆಕ್ ಅಥವಾ ಇತರೆ ಪಾರದರ್ಶಕ ವಿಧಾನಗಳ ಮೂಲಕ ಕೊಡುಗೆ ನೀಡುವುದರ ಬಗ್ಗೆಯೂ ದಾನಿಗಳು ತಮ್ಮ ಹಿಂಜರಿಕೆಯನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ ಅದರಿಂದ ಅವರ ಗುರುತನ್ನು ಬಹಿರಂಗ ಪಡಿಸುತ್ತದೆ ಹಾಗೂ ಅದರಿಂದ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ" ಎಂದು ಹಣಕಾಸು ಸಚಿವರು ಹೇಳಿದ್ದಾರೆ.

ಇದು ಕಾರ್ಪೊರೇಟ್ ಕಂಪೆನಿಗಳು ಮತ್ತು ಉದ್ಯಮಿಗಳು ಲೆಕ್ಕಕ್ಕೆ ಸಿಗದ ಅಥವಾ ಕಪ್ಪು ಹಣವನ್ನು ದೇಣಿಗೆಯಾಗಿ ನೀಡುವುದಕ್ಕೆ ಕೊಟ್ಟಿರುವ ತರ್ಕ. ಚುನಾವಣಾ ಬಾಂಡ್ ಯೋಜನೆಯಲ್ಲಿ ದೇಣಿಗೆದಾರರ ಹೆಸರು ಬಹಿರಂಗವಾಗುವುದಿಲ್ಲ. ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆದ ರಾಜಕೀಯ ಪಕ್ಷಗಳು ದೇಣಿಗೆಯ ಮೂಲವನ್ನು ಬಹಿರಂಗಪಡಿಸುವ ಅಗತ್ಯವಿಲ್ಲ ಎಂದು ಆದಾಯ ತೆರಿಗೆ ಕಾನೂನಿಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರಕಾರದ ಮುಂದಿದೆ.

ಅಂದರೆ, ರೂ. 20000 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ನೀಡಿದರೆ, ಸಂಬಂಧಪಟ್ಟ ರಾಜಕೀಯ ಪಕ್ಷ ಆದಾಯ ತೆರಿಗೆ ಇಲಾಖೆಗೆ ಆದಾಯ ವಿವರಗಳನ್ನು (ಐಟಿ ರಿಟರ್ನ್ಸ್) ಸಲ್ಲಿಸುವಾಗ ಈ ರೀತಿಯ ಬಾಂಡ್ ನೀಡಿದವರ ಮಾಹಿತಿಯನ್ನು ಬಹಿರಂಗಗೊಳಿಸಬೇಕಿಲ್ಲ ಎನ್ನುವುದು ಇದರ ಅರ್ಥವಾಗುತ್ತದೆ.

ಈ ರೀತಿಯಾಗಿ, ರಾಜಕೀಯ ದೇಣಿಗೆಯಲ್ಲಿ ಪಾರದರ್ಶಕತೆಯನ್ನು ಖಾತರಿಪಡಿಸುವ ಬದಲು, ಮೋದಿ ಸರಕಾರ ಚುನಾವಣಾ ಬಾಂಡ್‌ಗಳ ಮೂಲಕ ದೊಡ್ಡ ಪ್ರಮಾಣದ ದೇಣಿಗೆಗಳನ್ನು ಅನಾಮಿಕವಾಗಿ ಮುಚ್ಚಿಡುವ ಮಾರ್ಗವನ್ನು ಒದಗಿಸುತ್ತಿದೆ. ನಿಜ, ಅಪವಾದವಿದೆ, ಚುನಾವಣಾ ಬಾಂಡ್ ಖರೀದಿಸಿದವರು ಯಾರು ಎಂಬುದನ್ನು ಅಧಿಕಾರದಲ್ಲಿರುವ ಸರಕಾರ ಬ್ಯಾಂಕ್‌ಗಳ ಮೂಲಕ ತಿಳಿಯಬಹುದಾಗಿದೆ.

ಬಾಂಡ್‌ಗಳು ಯಾವ ರೀತಿ ಇರುತ್ತವೆ ಎನ್ನುವುದರ ಬಗ್ಗೆ ಇನ್ನೂ ಸ್ಪಷ್ಟ ಚಿತ್ರಣ ಇಲ್ಲವಾದರೂ ಅವು ಬೇರರ್ ಬಾಂಡ್ ರೂಪದಲ್ಲಿದ್ದರೆ ಅದರ ದುರುಪಯೋಗವಾಗುವ ಎಲ್ಲಾ ಸಾಧ್ಯತೆಗಳಿವೆ. ಇಂಥ ಬಾಂಡ್‌ಗಳ ಮೂಲಕ ಹಣವನ್ನು ವರ್ಗಾಯಿಸಿ ತೆರಿಗೆಯನ್ನು ತಪ್ಪಿಸಿಕೊಳ್ಳಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಲಾಗುತ್ತದೆ. ರಾಜಕೀಯ ಪಕ್ಷಕ್ಕೂ ಆಗಬಹುದಾದ ವ್ಯಾಪಾರೋದ್ಯಮ ಕ್ರಿಯೆಗಳಿಗೆ ಬಾಂಡ್‌ಗಳನ್ನು ಬಳಸಿಕೊಳ್ಳಲು ಸಾಕಷ್ಟು ಉದ್ಯಮಶೀಲ ದಾರಿಗಳು ಸಾಧ್ಯ.

ಪ್ರಸ್ತಾವಿತ ಬದಲಾವಣೆಗಳನ್ನು ಹಣಕಾಸು ಮಸೂದೆಯ ಮೂಲಕ ಸಂಬಂಧಪಟ್ಟ ಕಾನೂನುಗಳಲ್ಲಿ ತಿದ್ದುಪಡಿ ರೂಪದಲ್ಲಿ ಸೇರಿಸಲು ಸರಕಾರ ಪ್ರಯತ್ನಿಸುತ್ತಿದೆ. ಅಂದರೆ ರಾಜಕೀಯ ದೇಣಿಗೆ ಮತ್ತು ರಾಜಕೀಯ ಪಕ್ಷಗಳ ಚುನಾವಣೆ ವೆಚ್ಚಗಳ ವಿಚಾರದಲ್ಲಿ ರಾಜ್ಯಸಭೆ ಏನೂ ಹೇಳುವಂತಿಲ್ಲ.

ಆದಾಯ ತೆರಿಗೆ ಕಾನೂನು ಮತ್ತು ಜನತಾ ಪ್ರಾತಿನಿಧ್ಯ ಕಾನೂನುಗಳಿಗೆ ಪ್ರಸ್ತಾವಿಸಿರುವ ತಿದ್ದುಪಡಿಗಳು ಭಾರತದ ಸಂಚಿತ ನಿಧಿ (ಕನ್ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾ) ಅಥವಾ ತೆರಿಗೆಗಳನ್ನು ಹೇರುವ ವಿಚಾರಗಳಿಗೆ ಸಂಬಂಧಿಸಿ ಯಾವುದೇ ವಿಷಯಗಳನ್ನು ಕುರಿತಾದ್ದಲ್ಲ. ಆದ್ದರಿಂದ ಅವುಗಳನ್ನು 'ಹಣಕಾಸು ಮಸೂದೆ' ಮಾನದಂಡದಡಿ ತರಲಾಗುವುದಿಲ್ಲ. ಹೀಗಾಗಿ ಇದು ರಾಜ್ಯಸಭೆಯನ್ನು ಬದಿಗೊತ್ತಲಿಕ್ಕಾಗಿ ಹಣಕಾಸು ಮಸೂದೆಯ ಪರಿಕಲ್ಪನೆಯ ದುರುಪಯೋಗವೇ ಸರಿ.

ರಾಜಕೀಯ ದೇಣಿಗೆ ಹಣಕಾಸನ್ನು ಶುದ್ಧಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎಂಬ ಸರಕಾರದ ದಾವೆ ಅನುಮಾನಕ್ಕೆಡೆ ಮಾಡುವಂಥದ್ದೂ, ಗೋಸುಂಬೆತನದ್ದೂ ಆಗಿದೆ. ಕಳೆದ ವರ್ಷ 2016–17ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಹಣಕಾಸು ಮಸೂದೆ ಮೂಲಕ ವಿದೇಶಿ ದೇಣಿಗೆ ನಿಯಂತ್ರಣ ಕಾನೂನಿಗೆ ಒಂದು ತಿದ್ದುಪಡಿಯನ್ನು ತರಲಾಗಿತ್ತು. ವಿದೇಶಿ ಕಂಪೆನಿಗಳ ಭಾರತೀಯ ಸಹವರ್ತಿ ಕಂಪೆನಿಗಳು ನೀಡುವ ದೇಣಿಗೆಗಳನ್ನು ಭಾರತೀಯ ಮೂಲದ ದೇಣಿಗೆಗಳೆಂದು ಪರಿಗಣಿಸುವುದು ಅದರ ಉದ್ದೇಶವಾಗಿತ್ತು.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕಾನೂನಿಗೆ ವಿರುದ್ಧವಾಗಿ ವಿದೇಶಿ ದೇಣಿಗೆಗಳನ್ನು ಸಂಗ್ರಹಿಸಿ ಅಪರಾಧವೆಸಗಿವೆ ಎಂದು ದೆಹಲಿ ಹೈಕೋರ್ಟ್ ನೀಡಿದ್ದ ತೀರ್ಪೊಂದನ್ನು ನಿಷ್ಕ್ರಿಯಗೊಳಿಸುವುದು ಪೂರ್ವಾನ್ವಯವಾಗುವಂತೆ ಮಾಡಲಾದ ಈ ತಿದ್ದುಪಡಿಯ ಉದ್ದೇಶವಾಗಿತ್ತು. ಲಂಡನ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ವೇದಾಂತ ಎಂಬ ವಿದೇಶಿ ಕಂಪೆನಿಯಿಂದ ಈ ಎರಡು ಪಕ್ಷಗಳು ದೇಣಿಗೆ ಪಡೆದಿದ್ದವು.

ಈ ತಿದ್ದುಪಡಿಯನ್ನು ಅಂಗೀಕರಿಸುವ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳ ಭಾರತೀಯ ಸಹವರ್ತಿ ಕಂಪೆನಿಗಳಿಂದ ರಾಜಕೀಯ ಪಕ್ಷಗಳು ದೇಣಿಗೆ ಪಡೆಯುವುದು ಈಗ ಕಾನೂನುಬದ್ಧವಾಗಿ ಬಿಟ್ಟಿದೆ. ಇದನ್ನು ಮಾಡಿದ್ದು ಅದೇ ಹಣಕಾಸು ಮಸೂದೆಯೆಂಬ ಮಾರ್ಗದಲ್ಲಿ.

ಇತ್ತೀಚಿನ ಚುನಾವಣಾ ಬಾಂಡಿನ ಕ್ರಮದಿಂದಾಗಿ ಈಗ ಬಹುರಾಷ್ಟ್ರೀಯ ಕಂಪೆನಿಗಳು ರಾಜಕೀಯ ಪಕ್ಷಗಳಿಗೆ ಅವುಗಳ ಮೂಲಕ ಹಣಕಾಸನ್ನು ಒದಗಿಸಬಹುದಾಗಿದೆ. ಅದನ್ನು ಯಾರೂ ಪ್ರಶ್ನಿಸುವಂತಿಲ್ಲ. ವಾಸ್ತವವಾಗಿ ಮೋದಿ ಸರಕಾರ ರಾಜಕೀಯ ಪಕ್ಷಗಳಲ್ಲಿ ವಿದೇಶಿ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸುತ್ತಿದೆ.

ರಾಜಕೀಯ ದೇಣಿಗೆ ಮತ್ತು ಚುನಾವಣಾ ವೆಚ್ಚದ ಇಡೀ ಪ್ರಶ್ನೆಗೆ ಒಂದು ವರ್ಗ ಆಯಾಮವಿದೆ. ರಾಜಕೀಯ ಪಕ್ಷಗಳಿಗೆ ಮತ್ತು ಚುನಾವಣೆ ವ್ಯವಸ್ಥೆಗೆ ದೊಡ್ಡ ಪ್ರಮಾಣದಲ್ಲಿ ಹಣ ಹರಿದು ಬರುವುದಕ್ಕೆ ಸರಕಾರವಾಗಲೀ ಚುನಾವಣೆ ಆಯೋಗವಾಗಲೀ ವಿರುದ್ಧವಾಗಿಲ್ಲ. ಅದು ನ್ಯಾಯಸಮ್ಮತ ವಾಗಿರಬೇಕೆನ್ನುವುದಷ್ಟೇ ಅವುಗಳ ಏಕೈಕ ಕಾಳಜಿ.

ರಾಜಕೀಯ ದೇಣಿಗೆ ಮತ್ತು ಚುನಾವಣಾ ವೆಚ್ಚದ ಇಡೀ ಪ್ರಶ್ನೆಗೆ ಒಂದು ವರ್ಗ ಆಯಾಮವಿದೆ. ರಾಜಕೀಯ ಪಕ್ಷಗಳಿಗೆ ಮತ್ತು ಚುನಾವಣೆ ವ್ಯವಸ್ಥೆಗೆ ದೊಡ್ಡ ಪ್ರಮಾಣದಲ್ಲಿ ಹಣ ಹರಿದು ಬರುವುದಕ್ಕೆ ಸರಕಾರವಾಗಲೀ ಚುನಾವಣೆ ಆಯೋಗವಾಗಲೀ ವಿರುದ್ಧವಾಗಿಲ್ಲ. ಅದು ನ್ಯಾಯ ಸಮ್ಮತವಾಗಿರಬೇಕೆನ್ನುವುದಷ್ಟೇ ಅವುಗಳ ಏಕೈಕ ಕಾಳಜಿ.

ಬಿಜೆಪಿ ಮತ್ತು ಕಾಂಗ್ರೆಸ್ ಎರಡಕ್ಕೂ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳು ಸಿಗಬೇಕೆಂದಿದೆ. ಚುನಾವಣೆ ವೇಳೆ ಮಾಡುವ ವೆಚ್ಚಕ್ಕೆ ಯಾವುದೇ ಮಿತಿ ಇರಬಾರದು ಎನ್ನುವುದೂ ಅವುಗಳ ಆಶಯ. ಉದಾಹರಣೆಗೆ, 2014ರ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಜಾಹಿರಾತಿಗಾಗಿ ನೂರಾರು ಕೋಟಿ ರೂಪಾಯಿಗಳನ್ನು ವ್ಯಯಿಸಿತು. ಅದೇ ರೀತಿ ಖಾಸಗಿ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲು ಅಪಾರ ಪ್ರಮಾಣದ ಹಣವನ್ನು ಖರ್ಚು ಮಾಡಿತು.

ಆದರೆ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್‌ಗಳು ಹಣಕಾಸು ನೀಡುವುದಕ್ಕೆ ಸಿಪಿಐ(ಎಂ)ನ ವಿರೋಧವಿದೆ. ಅಗತ್ಯ ಬಿದ್ದರೆ ಕಂಪೆನಿಗಳು ಚುನಾವಣಾ ಆಯೋಗದ ಉಸ್ತುವಾರಿಯಲ್ಲಿ ನಿಧಿಯೊಂದಕ್ಕೆ ದೇಣಿಗೆ ನೀಡಬಹುದು. ಆ ಹಣವನ್ನು ಚುನಾವಣೆಗಳ ವೇಳೆ ಸರಕಾರವೇ ಪಕ್ಷಗಳಿಗೆ ಒದಗಿಸಬಹುದು.

ಪ್ರಸ್ತುತ ಚಾಲ್ತಿಯಲ್ಲಿರುವ ನವ–ಉದಾರವಾದಿ ನೈತಿಕತೆಯಲ್ಲಿ, ಎಲ್ಲಾ ಬಂಡವಾಳಶಾಹಿ ಪಕ್ಷಗಳೂ ಚುನಾವಣೆಗಳಲ್ಲಿ ಹೋರಾಡಲು ಹಣಬಲವನ್ನೇ ನೆಚ್ಚಿಕೊಳ್ಳಬಯಸುತ್ತವೆ. ದುರದೃಷ್ಟವಶಾತ್, ಚುನಾವಣಾ ಆಯೋಗಕ್ಕೂ ಹಣಬಲವನ್ನು ಪ್ರೋತ್ಸಾಹಿಸಬಾರದು ಎಂದೇನಿಲ್ಲ. ಅದರ ಬದಲು ಜನಸಾಮಾನ್ಯರು ನಗದು ರೂಪದಲ್ಲಿ ಸಣ್ಣಪುಟ್ಟ ದೇಣಿಗೆ ನೀಡುವುದರ ಮೇಲೆಯೇ ಅದರ ಕೆಂಗಣ್ಣು ಬಿದ್ದಿದೆ. ಚುನಾವಣಾ ಪ್ರಚಾರಕ್ಕೆ ಪೋಸ್ಟರ್‌ಗಳು, ಬ್ಯಾನರ್‌ಗಳನ್ನು ಬಳಸುವುದರ ಮೇಲೆ ಚುನಾವಣೆ ಆಯೋಗ ನಿರ್ಬಂಧ ವಿಧಿಸುತ್ತದೆ. ಇದು ಸೀಮಿತ ಆರ್ಥಿಕ ಸಂಪನ್ಮೂಲಗಳ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರಕ್ಕೆ ತೊಡಕಾಗುತ್ತದೆ. ಆದರೆ ಅದೇ ಆಯೋಗ ಟಿವಿ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಜಾಹಿರಾತು ನೀಡಲು ಹಾಗೂ ದುಬಾರಿ ಪ್ರಚಾರ ಫಲಕಗಳನ್ನು ಹಾಕಲು ಪ್ರೋತ್ಸಾಹ ನೀಡುತ್ತದೆ.


ಪ್ರಜಾಸತ್ತಾತ್ಮಕ ಸುಧಾರಣೆಗಾಗಿನ ಸಂಘ (ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್–ಎಡಿಆರ್) ಮುಂತಾದ ಎನ್‌ಜಿಒ ಗಳು ಕೂಡ ಇದೇ ವರ್ಗ ಧೋರಣೆಯನ್ನು ಪ್ರದರ್ಶಿಸುತ್ತವೆ. ಹುಂಡಿಗಳು, ಬಾಕ್ಸ್‌ಗಳು ಅಥವಾ ಬಕೆಟ್‌ಗಳ ಮೂಲಕ ಮಾಡುವ ಸಾಮೂಹಿಕ ನಿಧಿ ಸಂಗ್ರಹವನ್ನು ಅವು 'ಗೊತ್ತಿಲ್ಲದ' ಮೂಲಗಳಿಂದ ಎಂಬುದಾಗಿ ವರ್ಗೀಕರಿಸುತ್ತವೆ. ಆದರೆ ರಾಜಕೀಯ ಪಕ್ಷಗಳು 'ಟೇಬಲ್ ಕೆಳಗಿನಿಂದ' ಮತ್ತು ಔಪಚಾರಿಕ ಲೆಕ್ಕಪತ್ರಗಳ ಹೊರಗಿರುವ ಅಪಾರ ಮೊತ್ತಗಳಬಗ್ಗೆ ಯಾವುದೇ ವಿಚಾರಣೆ ನಡೆಸುವುದಿಲ್ಲ.

ರಾಜಕೀಯ ಪಕ್ಷಗಳಿಗೆ ಹಣಕಾಸು ದೇಣಿಗೆ ವಿಚಾರದಲ್ಲಿನ ಸುಧಾರಣೆಯೊ ಸೇರಿದಂತೆ ಆಮೂಲಾಗ್ರ ಚುನಾವಣಾ ಸುಧಾರಣೆಗಳು ತುರ್ತಾಗಿ ಆಗಬೇಕಿದೆ. ಅದರ ಆರಂಭಿಕ ಭಾಗವಾಗಿ ಈ ಕೆಳಗಿನ ಹೆಜ್ಜೆಗಳು ಅಗತ್ಯ:

1. ಚುನಾವಣೆ ವೇಳೆ ವಿವಿಧ ಬಾಬ್ತುಗಳ ಮೇಲೆ ರಾಜಕೀಯ ಪಕ್ಷಗಳು ಮಾಡುವ ಒಟ್ಟಾರೆ ವೆಚ್ಚದ ಮೇಲೆ ಒಂದು ಮಿತಿಯನ್ನು ಹೇರಬೇಕು. ಉದಾಹರಣೆಗೆ, ಒಂದು ಸಾರ್ವತ್ರಿಕ ಚುನಾವಣೆಯಲ್ಲಿ ರಾಜಕೀಯ ಪಕ್ಷವೊಂದು ಜಾಹೀರಾತುಗಳಿಗೆ 500 ಕೋಟಿ ರೂಪಾಯಿಗಳನ್ನು ವ್ಯಯಿಸಬಹುದು, ಅದು ಕಾನೂನುಸಮ್ಮತ ಎಂದು ಪರಿಗಣಿಸಲಾಗುತ್ತದೆ, ಅದನ್ನು ಯಾರೂ ಪ್ರಶ್ನಿಸುವುದಿಲ್ಲ. ಚುನಾವಣೆಗಳಲ್ಲಿ ಕಪ್ಪು ಹಣದ ಪಾತ್ರವನ್ನು ನಿಜವಾಗಿಯೂ ನಿಲ್ಲಿಸಬೇಕಾದರೆ ಚುನಾವಣೆ ವೆಚ್ಚದ ಮೇಲೆ ಮಿತಿ ವಿಧಿಸಲೇಬೇಕು.
2. ಪಕ್ಷವೊಂದು ತನ್ನ ಅಭ್ಯರ್ಥಿಯ ಪರವಾಗಿ ಮಾಡುವ ವೆಚ್ಚಗಳನ್ನು ಅಭ್ಯರ್ಥಿಯ ವೆಚ್ಚದಲ್ಲಿ ಸೇರಿಸುವ ದಿಸೆಯಲ್ಲಿ ಜನತಾ ಪ್ರಾತಿನಿಧ್ಯ ಕಾಯಿದೆಯ ಸಂಬಂಧಿತ ನಿಯಮಗಳಿಗೆ ಒಂದು ತಿದ್ದುಪಡಿ ತರಬೇಕು.
3. ರಾಜಕೀಯ ಪಕ್ಷಗಳಿಗೆ 2000 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆ ನೀಡುವವರ ಹೆಸರು ಮತ್ತಿತರ ವಿವರಗಳನ್ನು ಘೋಷಿಸಬೇಕು.
4. ಚುನಾವಣಾ ಬಾಂಡ್‌ಗಳನ್ನು ನೀಡುವುದಾದರೆ ಅದನ್ನು ಪಡೆಯುವ ರಾಜಕೀಯ ಪಕ್ಷವು ಅದರ ಎಲ್ಲಾ ವಿವರಗಳನ್ನು ಘೋಷಿಸಬೇಕು.
5. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಪ್ರಚಾರ ಸಾಮಾಗ್ರಿ, ಪ್ರಣಾಳಿಕೆಗಳು, ಸಾರಿಗೆಗೆ ಇಂಧನ ಮುಂತಾದವುಗಳಿಗೆ ಸರಕಾರವೇ ಹಣಕಾಸು ಒದಗಿಸುವುದು.
6. ರಾಜಕೀಯ ಪಕ್ಷಗಳಿಗೆ ಕಾಳಧನ ನೀಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಮತ್ತು ಅಂಥ ಹಣವನ್ನು ಸ್ವೀಕರಿಸುವ ರಾಜಕೀಯ ಪಕ್ಷಗಳಿಗೆ ದಂಡ ವಿಧಿಸಬೇಕು.

ಅನು: ವಿಶ್ವ

'ಒಳ್ಳೆಯ ದಿನ'ಗಳ 'ಆರ್ಥಿಕ ಸರ್ವೇಕ್ಷಣೆ'ಯನ್ನು ತಟ್ಟಿರುವುದು ಅವಿಶ್ವಸನೀಯತೆಯೇ, ಅಥವ ಅಸಮರ್ಥತೆಯೇ?



ಪ್ರತಿವರ್ಷ ಬಜೆಟ್ ಮೊದಲು ಸಂಸತ್ತಿನಲ್ಲಿ ಮಂಡಿಸುವ 'ಆರ್ಥಿಕ ಸರ್ವೇಕ್ಷಣೆ' ಕೇಂದ್ರ ಹಣಕಾಸು ಮಂತ್ರಾಲಯದ ಒಂದು ಪ್ರತಿಷ್ಠಿತ ದಸ್ತಾವೇಜು ಎನಿಸಿಕೊಳ್ಳುತ್ತದೆ. ಇದನ್ನು ಹಣಕಾಸು ಮಂತ್ರಿಗಳೇ ಮಂಡಿಸುತ್ತಾರಾದರೂ ಅದನ್ನು ತಯಾರಿಸುವವರು ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು. ಇವರು ಆರ್ಥಿಕ ತಜ್ಞರಾಗಿರುವುದರಿಂದಲೇ ಈ ದಸ್ತಾವೇಜಿಗೆ ಅಕಡೆಮಿಕ್ ವಲಯದಲ್ಲಿ ಬಹಳ ಮಹತ್ವ ಇರುವುದು.ಇದಕ್ಕೆ ಮುಖ್ಯ ಕಾರಣ ಇದು ಸರಕಾರದ ನಿಲುವುಗಳಿಗೆ ಅನುಗುಣವಾಗಿ ಇದ್ದರೂ, ಅದರಲ್ಲಿ ಅಪಾರ ಪ್ರಮಾಣದ ಮೂಲ, ಅಧಿಕೃತ ಮಾಹಿತಿಗಳಿರುತ್ತವೆ.

ಆದರೆ ಒಳ್ಳೆಯ ದಿನಗಳಲ್ಲಿ ಇದನ್ನೂ ಕೆಳ ದರ್ಜೆಗೆ ಇಳಿಸಿದಂತೆ ಕಾಣುತ್ತದೆ ಎನ್ನುತ್ತಾರೆ ಕೆಲವು ವಿಶ್ಲೇಷಕರು.

ಈ ಸರ್ವೆ ನೋಟು ರದ್ಧತಿ ಅನೌಪಚಾರಿಕ, ನಗದು ಹೆಚ್ಚಾಗಿ ಬೇಕಾಗುವ ವಲಯದಲ್ಲಿ 'ಅಷ್ಟೇನೂ ಸಂಪತ್ತಿಲ್ಲದವರನ್ನು' ಬಹಳವಾಗಿ ತಟ್ಟಿದೆ ಎಂದು ಒಪ್ಪಿಕೊಂಡಿದೆ. ಆದರೆ ಇದೇ ಜನವಿಭಾಗ ಇದನ್ನು ಬೆಂಬಲಿಸಿದೆ ಎನ್ನುತ್ತ ಇದಕ್ಕೆ ಸಮರ್ಥನೆಯಾಗಿ 'ಐದು ರಾಜ್ಯಗಳಲ್ಲಿ ನಡೆಸಿದಇತ್ತೀಚಿನ ಫೋನ್ ಸರ್ವೆಯೊಂದರ ಪ್ರಕಾರ 75ಶೇ. ಮಂದಿ ಇದನ್ನು ಬೆಂಬಲಿಸಿದ್ದಾರೆ' ಎಂದಿದೆ. ಈ ಸರ್ವೆ ನಡೆಸಿದವರು ಯಾರು, ಯಾವ ರಾಜ್ಯಗಳಲ್ಲಿ, ಯಾವ ಸ್ಥಳಗಳಲ್ಲಿ ನಡೆಸಿದ್ದಾರೆ, ಎಷ್ಟು ಮಂದಿಯನ್ನು ಕೇಳಿದ್ದಾರೆ, ಯಾವ ಪ್ರಶ್ನೆಗಳನ್ನು ಕೇಳಿದ್ದಾರೆ ಎಂಬ ವಿವರಗಳೇನನ್ನೂ ಕೊಟ್ಟಿಲ್ಲ. ಸಾಮಾನ್ಯವಾಗಿ ಆರ್ಥಿಕ ತಜ್ಞರು ಸಿದ್ಧಪಡಿಸುವ ಈ ದಸ್ತಾವೇಜು ಇಂತಹ ಎಲ್ಲ ವಿವರಗಳನ್ನು ಒಳಗೊಂಡಿರಬೇಕು, ಯಾವುದೋ ಒಂದು ಅನಾಮಧೇಯ ಸರ್ವೆ ಅಧ್ಯಯನಕ್ಕೆ ವಿಶ್ವಸನೀಯ ಆಧಾರವಾಗಲು ಸಾಧ್ಯವಿಲ್ಲ ತಾನೇ?

ಎರಡನೆಯದಾಗಿ, ಈ ದಸ್ತಾವೇಜು ನೋಟುರದ್ಧತಿಯ 50 ದಿನಗಳಲ್ಲಿ 'ಜನಧನ' ಖಾತೆಗಳಲ್ಲಿ ಸುಮಾರು 42,000 ಕೋಟಿ ರೂ. ಗಳ ಸಂಗ್ರಹವಾಗಿದೆ ಎಂಬ ಪತ್ರಿಕಾ ವರದಿಗಳನ್ನು ಉದ್ಧರಿಸುತ್ತದೆ. ವಾಸ್ತವವಾಗಿ ಈ ಸುದ್ದಿಯನ್ನು ಕೊಟ್ಟವರು ಹಣಕಾಸು ಮಂತ್ರಾಲಯದ ಒಬ್ಬ ಹಿರಿಯ ವಕ್ತಾರರು ಎನ್ನಲಾಗಿದೆ. ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ಈ ರೀತಿ ಮಾಹಿತಿಗಾಗಿ ಪತ್ರಿಕಾ ವರದಿಗಳನ್ನು ಅವಲಂಬಿಸಬೇಕೇ, ಅಧಿಕೃತ ವಿಶ್ವಾಸಾರ್ಹ ಮಾಹಿತಿಯನ್ನು ನೇರವಾಗಿ ಪಡೆಯಲು ಅವರಿಗೆ ಸಾಧ್ಯವಾಗಿಲ್ಲವೇ? ರಿಝರ್ವ್ ಬ್ಯಾಂಕ್ ಈ ಮಾಹಿತಿಯನ್ನು ಆರ್ಥಿಕ ಸಲಹಾಗಾರರಿಗೆ ಕೊಟ್ಟಿಲ್ಲವೇ, ಅಥವ ಅಂತಹ ಮಾಹಿತಿಯನ್ನು ಸಂಗ್ರಹಿಸಲಾರದಷ್ಟು ಅದು ಅಸಮರ್ಥವಾಗಿ ಬಿಟ್ಟಿದೆ-ಯೇ ಎಂದು ವಿಶ್ಲೇಷಕರು ಸಹಜವಾಗಿಯೇ ಪ್ರಶ್ನಿಸುತ್ತಿದ್ದಾರೆ.

ಮೂರನೆಯದಾಗಿ, ಸರ್ವೆಯಲ್ಲಿ ಭಾರತೀಯ ಬ್ಯಾಂಕುಗಳ ಅಪಾರ ಪ್ರಮಾಣದ ಸುಸ್ತಿ ಸಾಲಗಳ ಬಗ್ಗೆಯಂತೂ ಪ್ರಸ್ತಾಪ ಇಲ್ಲದಿರಲು ಸಾಧ್ಯವಿಲ್ಲ. ಆದರೆ ಇಲ್ಲಿಯೂ ಮೋದಿ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ತಮ್ಮದೇ ಸರಕಾರದ ಸಂಸ್ಥೆಗಳಿಂದ ಅಧಿಕೃತ ಪ್ರಮಾಣಿತ ಮಾಹಿತಿಯನ್ನು ಅವಲಂಬಿಸುವ ಬದಲು ವಿದೇಶದ ಹೂಡಿಕೆ ಬ್ಯಾಂಕ್ 'ಕ್ರೆಡಿಟ್ ಸ್ಯುಸ್ಸೆ'ಯ 'ಅಂದಾಜು'ಗಳನ್ನೇ ಅವಲಂಬಿಸಿರುವುದು ವಿಚಿತ್ರವಾಗಿ ಕಾಣುತ್ತದೆ ಎನ್ನುತ್ತಾರೆ ವಿಶ್ಲೇಷಕರು. ಭಾರತೀಯ ರಿಝರ್ವ್ ಬ್ಯಾಂಕ್ ಇವೆಲ್ಲದರ ಮೇಲುಸ್ತುವಾರಿ ಮಾಡುವುದರಿಂದಾಗಿ ಅದರ ಬಳಿ ಪ್ರಮಾಣಿತ ಮಾಹಿತಿಗಳ ಭಂಡಾರವೇ ಇರಬೇಕು. ಆದರೆ ಮುಖ್ಯ ಆರ್ಥಿಕ ಸಲಹೆಗಾರರು ಅದನ್ನು ಅವಲಂಬಿಸದೆ 'ಕ್ರೆಡಿಟ್ ಸ್ಯುಸ್ಸೆ'ಯ 'ಅಂದಾಜು'ಗಳನ್ನು ಆಧರಿಸಿರುವುದು ನಮ್ಮ ರಿಝರ್ವ್ ಬ್ಯಾಂಕ್ ಬಳಿ ಈ ಮಾಹಿತಿ ಇಲ್ಲವೆಂದೇ ಅಥವ ಅದರ ಮಾಹಿತಿಗಿಂತ ವಿದೇಶೀ 'ಕ್ರೆಡಿಟ್ ಸ್ಯುಸ್ಸೆ'ಯ ಅಂದಾಜು ಹೆಚ್ಚು ವಿಶ್ವಾಸಾರ್ಹವೆಂದೇ? ಇದು ವಿಶ್ಲೇಷಕರ ಮುಂದಿರುವ ಸವಾಲು.

ಪ್ರಧಾನ ಮಂತ್ರಿಗಳು 'ಮೇಕ್ ಇನ್‌ಇಂಡಿಯಾ' ಎಂದು ಗಂಟಲು ಹರಿದುಕೊಳ್ಳುತ್ತಿರುವಾಗ ಅವರ ಮುಖ್ಯ ಆರ್ಥಿಕ ಸಲಹಾಗಾರರಿಗೆ ವಿದೇಶಿ ಅಂದಾಜುಗಳೇ ಹೆಚ್ಚು ಅಪ್ಯಾಯಮಾನವಾಗಿರುವುದು ಒಂದು ವಿರೋಧಾಭಾಸವಲ್ಲವೇ ಎಂದು ಯಾರಾದರೂ ಕೇಳಬಹುದಾದ ಸ್ವಾಭಾವಿಕ ಪ್ರಶ್ನೆ ತಾನೇ?

ಏಕೆ ಹೀಗೆ ಈ ಸರಕಾರದ ಆರ್ಥಿಕ ಸರ್ವೇಕ್ಷಣೆ ಕೂಡ ಇಂತಹ ವಿಲಕ್ಷಣ ಉದ್ಧರಣೆಗಳನ್ನು ಆಧರಿಸಿ ಈ ಮಟ್ಟಕ್ಕೆ ಇಳಿದಿದೆ? ಬಹುಶಃ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಹಣಕಾಸು ಮಂತ್ರಾಲಯದ ಹಸ್ತಕ್ಷೇಪಗಳೇ ಕಾರಣವಿರಬೇಕು ಎಂಬ ಅನುಮಾನ ಹಲವರಿಗೆ. ನೋಟು ರದ್ಧತಿಯ ಬಗ್ಗೆ ನಿಜ ಮಾಹಿತಿಗಳನ್ನು ಕೊಡುವಂತಿಲ್ಲ, ಅದರ ಪ್ರಸ್ತಾಪ ಮಾಡದಿರುವಂತೆಯೂ ಇಲ್ಲ. 'ಒಳ್ಳೆಯ ದಿನಗಳ' ಇಂತಹ ಪೀಕಲಾಟಗಳು ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರನ್ನೂ ತಟ್ಟದೆ ಇರಲು ಹೇಗೆ ತಾನೆ ಸಾಧ್ಯ?

ನೋಟು ರದ್ಧತಿಗೆ ನೂರು ದಿನಗಳು

50 ದಿನಗಳ ಗಡುವು ಕೇಳಿದ್ದ ನೋಟುರದ್ಧತಿ 100ದಿನಗಳನ್ನು ದಾಟಿದೆ. ಇದರ ಬಗ್ಗೆ ಬೆನ್ನು ತಟ್ಟಿಕೊಂಡಿದ್ದವರು ಈಗ ಅದನ್ನು 'ಆಚರಿಸುವ ಬಗ್ಗೆ ಯೋಚಿಸುತ್ತಲೂ ಇಲ್ಲ. ಅದರ ಆರಂಭದ ಉದ್ದೇಶಗಳ ಬಗ್ಗೆ ಈಗ ಚಕಾರವಿಲ್ಲ .ಎಷ್ಟು ಕಪ್ಪು ಹಣ ಪತ್ತೆಯಾ ಯ್ತು ಎಂದು ರಿಝರ್ವ್ ಬ್ಯಾಂಕ್‌ಗೂ ಗೊತ್ತಿಲ್ಲವಂತೆ. ಕಾಶ್ಮೀರ ಕಣಿವೆಯಲ್ಲಿ ಉಗ್ರರ ದಾಳಿಗಳು ನಿಂತಿಲ್ಲ. ಕಳೆದ ಒಂದು ವಾರದಲ್ಲೇ ಆರು ಮಂದಿ ಭಾರತದ ಭದ್ರತಾ ಸಿಬ್ಬಂದಿ ಬಲಿಯಾಗಿದ್ದಾರೆ. 2000 ರೂ.ಗಳ ಖೋಟಾ ನೋಟುಗಳು ಆಗಲೇ ಪಾಕಿಸ್ತಾನದಿಂದ ಬರುತ್ತಿವೆಯಂತೆ. ನಗದು ರಹಿತತೆಯ ಮಾತುಗಳಷ್ಟೇ ಅಲ್ಲಿ-ಇಲ್ಲಿ ಕೇಳಬರುತ್ತಿವೆ. ಸೀತಾರಾಮ್ ಯೆಚೂರಿಯವರು ಹೇಳಿರುವಂತೆ 'ಸೆಲ್ಫ್ ಗೋಲ್' ಹೊಡೆದುಕೊಂಡು ಗೋಲು ಹೊಡೆದೆವು ಎಂದು ಬೊಬ್ಬಿಡುತ್ತಿರುವುದು ಕೇಳಬರುತ್ತಿದೆಯಷ್ಟೇ.

ಹಿಂದಿನ ರಿಝರ್ವ್ ಬ್ಯಾಂಕ್ ಗವರ್ನರ್ ರಘುರಾಮರಾಜನ್ ಅಡಿಯಲ್ಲಿ ರಿಝರ್ವ್ ಬ್ಯಾಂಕ್ ನೋಟುರದ್ಧತಿಯ ಸರಕಾರದ ಯೋಜನೆಯ ಬಗ್ಗೆ ಐದು ಪುಟಗಳ ಟಿಪ್ಪಣಿಯನ್ನು ಕಳುಹಿಸಿತ್ತು, ಅದರಲ್ಲಿ ಈ ಕ್ರಮದ ಬಗ್ಗೆ ಎಚರಿಕೆ ಕೊಡುತ್ತ ಅದನ್ನು ವಿರೋಧಿಸಿತ್ತು ಎಂದು ಮಾಜಿ ಹಣಕಾಸು ಮಂತ್ರಿಗಳು ಹೇಳಿದ್ದಾರೆ.

ಈ ನಡುವೆ ಫ್ಯಾಕ್ಟರಿ ಉತ್ಪಾದನೆ ಡಿಸೆಂಬರ್‌ನಲ್ಲಿ 0.4% ಇಳಿದಿದೆ. ರಫ್ತು ಪ್ರಮಾಣ ಕಳೆದ ತಿಂಗಳಿಗಿಂತ 15ಶೇ. ಇಳಿದಿದೆ. ಉದ್ಯಮಿಗಳ ಸಂಘಟನೆ 'ಫಿಕಿ'ಯ ವ್ಯಾಪಾರೋದ್ಯಮ ವಿಶ್ವಾಸದ ಸೂಚ್ಯಂಕ ಅಕ್ಟೊಬರ್-ಡಿಸೆಂಬರ್‌ನಲ್ಲಿ 58.2ಶೇ.ಕ್ಕೆ ಇಳಿದಿದೆ ಎಂದು ವರದಿಯಾಗಿದೆ. ಹಿಂದಿನ ತ್ರೈಮಾಸಿಕದಲ್ಲಿ ಇದು 67.3 ಇತ್ತು. ಮೋದಿಯವರು ಪ್ರಧಾನ ಮಂತ್ರಿ ಪಟ್ಟಕ್ಕೇರಿದಾಗ ಅದು 72.7 ಇತ್ತು ಎಂಬ ಸಂಗತಿಯತ್ತ ಯೆಚೂರಿಯವರು ಗಮನ ಸೆಳೆದಿದ್ದಾರೆ.

ಸಗಟು ಬೆಲೆ ಹಣದುಬ್ಬರ ಡಿಸೆಂಬರ್‌ನಲ್ಲಿ 3.39ಶೇ. ಇದ್ದದ್ದು ಜನವರಿಯಲ್ಲಿ 5.25ಶೇ.ಕ್ಕೇರಿದೆ. 'ಒಳ್ಳೆಯ ದಿನಗಳು' ಆರಂಭವಾದಾಗ ಜುಲೈ 2014ರಲ್ಲಿ ಇದ್ದ 5.41ಶೇ, ದ ಹತ್ತಿರ ಮತ್ತೆ ಬರುತ್ತಿದೆ. ಈ ಬಾರಿಯ ಸಗಟು ಹಣದುಬ್ಬರಕ್ಕೆ ಅತಿ ದೊಡ್ಡ ಕೊಡುಗೆ ಪೆಟ್ರೋಲ್-ಡೀಸೆಲ್ ಬೆಲೆಯೇರಿಕೆಯದ್ದು. ಆದರೂ ಅಂತರ್ರಾಷ್ಟ್ರೀಯ ಕಚ್ಚಾ ತೈಲ ಬೆಲಗಳು ಇಳಿದಾಗ ಹೆಚ್ಚಿಸಿದ ಇವುಗಳ ಮೇಲಿನ ಸುಂಕವನ್ನು ತಗ್ಗಿಸಿ ಜನಸಾಮಾನ್ಯರ ಭಾರ ತಗ್ಗಿಸುವ ಯೋಚನೆಯೂ ಇದ್ದಂತಿಲ್ಲ.

ಬಿಜೆಪಿ-ಐಎಸ್‌ಐ ನಂಟು?

ಇರಬಹುದು, ಬಿಜೆಪಿ ಸರಕಾರ ಇರುವ ಮಧ್ಯಪ್ರದೇಶದ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಫೆ.10ರಂದು ಪಾಕಿಸ್ತಾನದ ಐಎಸ್‌ಐಗೆ ಮಾಹಿತಿ ಪೂರೈಸುತ್ತಿದ್ದ ಆಪಾದನೆಯ ಮೇಲೆ 11 ಜನರನ್ನು ಬಂಧಿಸಿದೆ. ಅದರಲ್ಲಿ ಇಬ್ಬರು ಬಿಜೆಪಿಯೊಂದಿಗೆ ನಿಕಟ ಸಂಬಂಧ ಇರುವವರು ಎಂದು ವರದಿಯಾಗಿದೆ. ಇವರಲ್ಲೊಬ್ಬ ಒಂದು ವರ್ಷದ ಹಿಂದೆ ಬಿಜೆಪಿಯ ಐಟಿ ಸೆಲ್ ಸೇರಿದದ ವ್ಯಕ್ತಿಯಂತೆ.

ಈ ಗುಂಪಿನ ಬಳಿ ಅವರದ್ದೇ ಟೆಲಿಫೋನ್ ಎಕ್ಸ್‌ಚೇಂಜ್ ಇತ್ತು, ಪಾಕಿಸ್ತಾನದ ಗುಪ್ತಚರರು ಈ ಗುಂಪಿನ ಮುಖಂಡ ಬಲರಾಂನ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುತ್ತಿದ್ದರು ಎಂದು ಹೇಳಲಾಗಿದೆ.



ಅಚ್ಛೇ ದಿನ್‌ಗಳ ಭವಿಷ್ಯ ಕೇಳಬಾರದು–ವ್ಯಂಗ್ಯಚಿತ್ರ: ಕೀರ್ತೀಶ್, ಬಾಮುಲಾಹಿಜಾ.ಕಾಂ

ಉತ್ತರ ಪ್ರದೇಶದ ಒಳ್ಳೆಯ ದಿನಗಳಿಗಾಗಿ ಮತ್ತೆ ಅದೇ ಹಳೆಯ ಅಜೆಂಡಾ, ಜತೆಗೆ 'ಪೇಡ್ ನ್ಯೂಸ್'!

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳ ಪ್ರಚಾರ ಕಾವೇರುತ್ತಿರುವಂತೆ ಹೆಚ್ಚೆಚ್ಚು ಪರದೆಗಳು ಕಳಚುತ್ತಿವೆ. ನೋಟು ರದ್ಧತಿಯ ಭೋಪರಾಕು ಸದ್ದಡಗಿದೆ. ಅದರ ಜಾಗದಲ್ಲಿ ಅದೇ ರಾಮದೇವಸ್ಥಾನ, ಹಿಂದೂ ಜನಸಂಖ್ಯೆ ಇಳಿಕೆಯ ಗುಲ್ಲು, ಯೋಗಿ ಆದಿತ್ಯನಾಥ್ ಹಿಂದುತ್ವ ಗುಡುಗು-ಮಿಂಚು. ಇತ್ಯಾದಿ.

ಮೊದಲ ಹಂತದ ಚುನಾವಣೆ ಮುಗಿಯುತ್ತಿದ್ದಂತೆ ಬಹಿರಂಗವಾಗಿಯೇ ಮೋದಿ-ಬಿಜೆಪಿ ಪರವಾಗಿರುವ ವ್ಯಾಪಕ ಪ್ರಸಾರದ ಹಿಂದಿ ದೈನಿಕದ ವೆಬ್ ಆವೃತ್ತಿಯಲ್ಲಿ ಚುನಾವಣಾ ಆಯೋಗದ ಆದೇಶವನ್ನು ಸಾರಾಸಗಟು ಉಲ್ಲಂಘಿಸಿ ಬಿಜೆಪಿಗೆ ಮುನ್ನಡೆ ಎಂದು ಬಿಂಬಿಸುವ 'ಎಕ್ಸಿಟ್‌ಪೋಲ್' ಪ್ರಕಟಣೆ ಚುನಾವಣಾ ಪ್ರಚಾರಕ್ಕೆ ನಿರ್ದಿಷ್ಟ 'ರಂಗು' ನೀಡಿದೆ. ಈ ದೈನಿಕದ ವಿರುದ್ಧ 15 ಎಫ್‌ಐಆರ್‌ಗಳನ್ನು ಹಾಕಲಾಗಿದೆ. ವೆಬ್ ಆವೃತ್ತಿಯ ಸಂಪಾದಕರನ್ನು ಬಂಧಿಸಲಾಗಿದೆ. ಇನ್ನಷ್ಟು ಬಂಧನಗಳು ನಡೆಯಬಹುದು ಎನ್ನಲಾಗಿದೆ. ಆದರೆ ಮುಖ್ಯವಾದ ಪ್ರಶ್ನೆಯೆಂದರೆ ಇದು ಜೈಲುಶಿಕ್ಷೆಗೆ ಗುರಿಪಡಿಸುವ ಸ್ಪಷ್ಟ ಉಲ್ಲಂಘನೆ ಎಂಬುದು ಈ ಪತ್ರಿಕೆಯ ಮಾಲಕನಿಗೆ ತಿಳಿಯದ ಸಂಗತಿಯೇನಲ್ಲ. ಆದರೂ ಇಂತಹ ಹುಚ್ಚು ಧೈರ್ಯ ಮಾಡಿದ್ದೇಕೆ, ಯಾರ 'ಅಭಯ ಹಸ್ತ' ಇದರ ಹಿಂದೆ ಇದೆ ಎಂಬ ಪ್ರಶ್ನೆಯನ್ನು ಇದು ಹುಟ್ಟು ಹಾಕಿದೆ.

ಅತ್ತ ಮೊದಲ ಸುತ್ತಿನ ಪ್ರಚಾರದಲ್ಲಿ ಬಿಜೆಪಿಯ ಬೆಂಕಿಯುಗುಳುವ ಎಂಪಿ ಯೋಗಿ ಆದಿತ್ಯನಾಥ್‌ಗೆ ಚುನಾವಣಾ ಪ್ರಚಾರದಲ್ಲಿ 'ತಕ್ಕ' ಸ್ಥಾನಮಾನ ನೀಡಿಲ್ಲ ಎಂದು ಅವರ ಹಿಂಬಾಲಕರಲ್ಲಿ ಬಹಳ ಅಸಮಾಧಾನ ಉಂಟಾಗಿತ್ತು ಎಂದು ವರದಿಯಾಗಿತ್ತು. ಈಗ ಎರಡನೇ ಹಂತದ ಚುನಾವಣಾ ಪ್ರಚಾರದಲ್ಲಿ ಆತನಿಗೆ ಮೊದಲ ಬಾರಿಗೆ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಪ್ರಚಾರದ ಸಾರಥ್ಯವನ್ನು ವಹಿಸಲಾಗಿದೆಯಂತೆ. ವಿಶೇಷವಾಗಿ ಪಕ್ಷದ ಪತ್ರಿಕಾಸಮ್ಮೇಳನಕ್ಕೆ ಆತನನ್ನು ಕಾನ್ಪುರಕ್ಕೆ ಕರೆಸಿಕೊಳ್ಳಲಾಯಿತು ಎಂದು ವರದಿಯಾಗಿದೆ.


ನೋಟುರದ್ಧತಿ ಚಲಾವಣೆಯಾಗದ ನಾಣ್ಯ ಎಂದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದ್ದಂತೆ, ಮತ್ತು ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ತೀವ್ರ ಅಸಮಾಧಾನ ಹರಡಿದ್ದ ಹಿನ್ನೆಲೆಯಲ್ಲಿ ಈ ಸಂಸದನಿಗೆ ಎಂದಿನಂತೆ ಹಿಂದುತ್ವದ ಬೆಂಕಿಯುಗುಳಲು ಅವಕಾಶ ನೀಡಲಾಗಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಈಗ ಈತನ ರಾಗ ಪಶ್ಚಿಮ ಯುಪಿ ಮತ್ತೊಂದು ಕಾಶ್ಮೀರ ಆಗಲು ಬಿಡುವುದಿಲ್ಲ ಎಂಬುದು. ಮುಝಫ್ಫರ್‌ನಗರದ ಖೈರಾನಾದಲ್ಲಿ ಮುಸ್ಲಿಮರ ಭಯದಿಂದ ಹಿಂದುಗಳು ಊರು ಬಿಟ್ಟು ಹೋಗುತ್ತಿದ್ದಾರೆ ಎಂಬ ಒಮ್ಮೆ ಠುಸ್ಸಾದ ವಿವಾದಕ್ಕೆ ಮತ್ತೆ ಜೀವ ತುಂಬುವ ಪ್ರಯತ್ನ ನಡೆದಿದೆ.

ಈ ನಡುವೆ ಈ ಬೊಬ್ಬೆಯನ್ನು ಮೊದಲು ಎಬ್ಬಿಸಿದ ಖೈರಾನಾದ ಬಿಜೆಪಿ ಎಂಪಿಯ ಜೊತೆಗೆ ಆಗ ಈ 'ಹೋರಾಟ'ದಲ್ಲಿ ಇದ್ದ ಆತನ ಸೋದರಳಿಯನೇ ಇದು ತನ್ನ ಮಾವ ಮಗಳಿಗೆ ಎಂಎಲ್‌ಎ ಟಿಕೇಟು ಕೊಡಿಸಲಿಕ್ಕಾಗಿ ಹೂಡಿದ ತಂತ್ರ ಎಂದಿದ್ದಾರೆ. ಆತ ಈಗ ಅಧಿಕೃತ ಬಿಜೆಪಿ ಅಭ್ಯರ್ಥಿಗೆ (ಈ ಎಂಪಿಯ ಮಗಳು ಎಂದು ಬೇರೆ ಹೇಳಬೇಕಾಗಿಲ್ಲ) ಎದುರಾಗಿ ಆರ್‌ಎಲ್‌ಡಿ ಯಿಂದ ಸ್ಪರ್ಧಿಸುತ್ತಿದ್ದಾರೆ.

ಈ ನಡುವೆ ಸ್ವತಃ ಕೇಂದ್ರ ಗೃಹ ರಾಜ್ಯಮಂತ್ರಿಗಳೇ ಹಿಂದು ಜನಸಂಖ್ಯೆ ಇಳಿಮುಖವಾಗುತ್ತಿದೆ ಎಂಬ ಮತ್ತೊಂದು ಹಳಸಲು ರಾಗವನ್ನು ಎತ್ತಿದ್ದಾರೆ.

ಪ್ರಧಾನಿಗಳ ಚುನಾವಣಾ ಭಾಷಣಗಳಲ್ಲಿ ನೋಟು ರದ್ಧತಿಗಿಂತ ರಾಹುಲ್ ಗಾಂಧಿ ಕುರಿತಾದ ಜೋಕುಗಳೇ ಹೆಚ್ಚಿರುತ್ತವೆ –ಸುದ್ದಿ



ಇಲ್ಲ ಸ್ವಾಮಿ! ಇನ್ನು ತಾಳಲಾರೆ!

–ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು
ಕೃಪೆ: ಟೈಂಸ್ ಆಫ್ ಇಂಡಿಯಾ

ನೋಟು ರದ್ದತಿ: ಜನ ಏಕೆ ಮೌನವಾಗಿದ್ದಾರೆ?



ಕೆ.ಎಂ.ನಾಗರಾಜ್

ಪ್ರಜಾಪ್ರಭುತ್ವದಲ್ಲಿನ 'ಪ್ರಜೆ' ಅಂದರೆ ಜನತೆಯನ್ನು ಬದಿಗೆ ತಳ್ಳಿ ಒಬ್ಬ "ನಾಯಕ" ಅವರ ಸ್ಥಾನ ಆಕ್ರಮಿಸುವುದು ನವ-ಉದಾರವಾದಿ ಆಳ್ವಿಕೆಯಲ್ಲಿ ಬಹಳ ಸಮಯದಿಂದ ಕಾಣಸಿಕೊಂಡಿರುವ ಪ್ರವೃತ್ತಿ. ಆದರೆ ಇದರ ಅರ್ಥ ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಇದು ಅನಿವಾರ್ಯ ಎಂದೋ,. ಸರಕಾರದ ವಕ್ತಾರರು ನಮ್ಮನ್ನು ನಂಬಿಸುತ್ತಿರುವಂತೆ ಜನರು ಸಿಕ್ಕಿದಷ್ಟರಲ್ಲೇ ತೃಪ್ತರಾಗಿದ್ದಾರೆ ಎಂದು ಭಾವಿಸಿಕೊಂಡೋ ಕೂರುವುದಲ್ಲ.

ಜನತೆ ತನ್ನ ಕರ್ತೃತ್ವದ ಪಾತ್ರವನ್ನು ಕ್ರಮೇಣ ಕಳಕೊಳ್ಳುವಂತೆ ಮಾಡಿರುವ ಈ ಪ್ರವೃತ್ತಿ ಮತ್ತಷ್ಟು ಗಟ್ಟಿಗೊಂಡು ಜನತೆಯ ಕರ್ತೃತ್ವ ಪಾತ್ರವನ್ನು ಬುಡಮೇಲು ಮಾಡುವ ಫ್ಯಾಸಿಸ್ಟ್ ಪ್ರವೃತ್ತಿಯಾಗುವುದನ್ನು ತಡೆಯಲು ಜನರಲ್ಲಿ ನೆಲೆಸಿರುವ ನಿಷ್ಕರ್ಮದ, ನಿಷ್ಕ್ರಿಯೆಯ ಈ ಶಾಂತತೆಯನ್ನು ಅಲುಗಾಡಿಸಿ, ಅವರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಪ್ರಗತಿಪರ ಶಕ್ತಿಗಳು ಮಾಡಲೇಬೇಕಾಗಿದೆ ಎನ್ನುತ್ತಾರೆ ಆರ್ಥಿಕ ತಜ್ಞ **ಪ್ರೊ.ಪ್ರಭಾತ್ ಪಟ್ನಾಯಕ್**.

'The Citizen' ಪತ್ರಿಕೆ ಪ್ರಕಟಿಸಿರುವ ಅವರ Why The People Are Silent ಲೇಖನದ ಭಾವಾನುವಾದ ನಮ್ಮ ಓದುಗರಿಗಾಗಿ.

ನೋಟು ರದ್ದತಿಯಿಂದಾಗಿ ಜನರಿಗೆ ತೊಂದರೆಯಾಗಿದೆ ಎಂದಾದರೆ, ಅವರು ಸುಮ್ಮನಿರುವುದಾದರೂ ಏಕೆ? ಈ ಪ್ರಶ್ನೆಯನ್ನು ಆಳುವ ಪಕ್ಷದ ಮತ್ತು ಸರ್ಕಾರದ ವಕ್ತಾರರು ಬೇಜಾರು ಹುಟ್ಟಿಸುವ ರೀತಿಯಲ್ಲಿ ಪದೇ ಪದೇ ಪ್ರಸ್ತಾಪಿಸುತ್ತಾರೆ. ಎರಡು ಸ್ತರಗಳಲ್ಲಿ ಈ ಪ್ರಶ್ನೆಗೆ ಉತ್ತರ ಕೊಡಬಹುದು.

ಮೊದಲನೆಯ ಸ್ತರದಲ್ಲಿ, 'ಆಘಾತ ಮತ್ತು ಭಯ ಭಕ್ತಿ' ಉಂಟುಮಾಡುವ ಮೋದಿಯವರ ಉದ್ದೇಶ ಯಶಸ್ವಿಯಾಗಿದೆ ಎಂಬ ಅಂಶವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆಘಾತಕ್ಕೊಳಗಾದ ಜನರ ಮನಸ್ಸಿನಲ್ಲಿ ಭಯ ಭಕ್ತಿಯ ಭಾವ ತುಂಬಿಕೊಂಡಾಗ ಅವರು ನೋಟು ರದ್ದತಿಯಂತಹ ಕ್ರಮ ಸರಿಯೋ ತಪ್ಪೋ ಎಂದು ಯೋಚಿಸುವ ಗೋಜಿಗೆ ಹೋಗುವುದೇ ಇಲ್ಲ, ಆಗ, ಅವರಿಗೆ ಕೋಪ ಬರುವುದಿಲ್ಲ. ಮೋದಿಯವರು ಕೈ-ಕೊಂಡ ನೋಟು ರದ್ದತಿಯ ಕ್ರಮವನ್ನು ಒಂದು ವೇಳೆ ಜನರು ತಪ್ಪು ಎಂದು ತೀರ್ಮಾನಿಸಿದ್ದರೆ, ಆಗ ಅದರಿಂದ ಉಂಟಾದ ತೊಂದರೆಗಳ ಬಗ್ಗೆ ಅವರಿಗೆ ಕೋಪ ಉಕ್ಕಿ ಬರುತ್ತಿತ್ತು. ನಿಷ್ಕಾರಣವಾಗಿ ತಮ್ಮನ್ನು ತೊಂದರೆಗೀಡು ಮಾಡ'ಲಾಗಿದೆ ಎಂದು ಭಾವಿಸುತ್ತಿದ್ದರು.

ಇದೇ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನೋಟು ರದ್ದತಿಯು ಒಂದು ಅಸಾಧಾರಣ ಕ್ರಮವಾಗಿತ್ತು ಮತ್ತು ಅದರ ಅಗಾಡ-'ತೆಗೆ ಹಾಗೂ ಅದರ ಬಗ್ಗೆ ನಡೆದ ಪ್ರಚಾರಗಳಿಗೆ ಜನ ಬಲಿ ಬಿದ್ದರು. ಅದರಿಂದ ತಮಗೂ ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆ ಎಂದು ನಂಬಿದರು. ಹಾಗಾಗಿ, ತಮಗೆ ಎರಗಿದ ಕಷ್ಟ ನಷ್ಟಗಳನ್ನು ಸಹಿಸಿಕೊಂಡರು. ಯಾವ ಸರ್ಕಾರ ಕೈಗೊಂಡ ಕ್ರಮವು ಜನರನ್ನು ಅತೀವ ಸಂಕಷ್ಟಕ್ಕೆ ಈಡು ಮಾಡಿತೋ ಅದೇ ಸರ್ಕಾರವನ್ನು ಹಾಡಿ ಹೊಗಳುವುದೂ ನೆಡೆಯಿತು. ವಿಚಾರಗಳನ್ನು ತಲೆ ಕೆಳಗು ಮಾಡಿ ಅದೇ ಸರಿ ಎನ್ನುವ ರೀತಿಯ ಸಂವಾದಗಳು ನ'ಡೆದವು. ಪರಿಸ್ಥಿತಿಯ ಲಾಭ ಪಡೆದ ಸರ್ಕಾರವು ತಾನು ಕೈಕೊಂಡ ನೋಟು ರದ್ದತಿಯ ಕ್ರಮವನ್ನು ತಮಗೆ ತೊಂದರೆಯಾದರೂ ಜನ ಬೆಂಬಲಿಸುತ್ತಿದ್ದಾರೆ ಎಂದು ಸಮರ್ಥಿಸಿಕೊಂಡಿತು.

ಜನರು ಮೌನವಾಗಿರುವ ಪ್ರಶ್ನೆಗೆ ಮತ್ತೊಂದು ಸ್ತರದಲ್ಲೂ ಉತ್ತರ ಹುಡುಕಬಹುದು. ಈ ಉತ್ತರ, ನವ-ಉದಾರವಾದಿ ಕಾಲಮಾನದಲ್ಲಿ, ಜನಸಾಮಾನ್ಯರ ಜೀವನಮಟ್ಟದ ಉನ್ನತಿಗಾಗಿ ನಡೆಯುವ ಸಾಮೂಹಿಕ ಹೋರಾಟಗಳು ಬಲಹೀನವಾಗಿರುವ ಅಂಶಕ್ಕೆ ಸಂಬಂಧಿಸುತ್ತದೆ. ನವ-ಉದಾರವಾದಿ ಆರ್ಥಿಕ ನೀತಿಗಳು ಜಾ-ರಿಯಾದ ಸಮಯದಿಂದ ಯಾವುದೇ ಯಶಸ್ವಿ ಹೋರಾಟಗಳು ಅಥವಾ ಶಕ್ತಿಶಾಲಿ ಮುಷ್ಕರಗಳು ನಡೆದಿಲ್ಲ. ಬೃಹತ್ ಪ್ರಮಾಣದ ಅನೇಕ ಒಂದು ದಿನದ ಮುಷ್ಕರಗಳು ನಡೆದಿವೆಯಷ್ಟೆ. ನವ-ಉದಾರವಾದಿ ಆರ್ಥಿಕ ನೀತಿಗಳಿಂದಾಗಿ ಕೃಷಿ ವಲಯ ಬಿಕ್ಕಟ್ಟಿಗೆ ಒಳಗಾಗಿದೆ. ಪರಿಣಾಮವಾಗಿ, ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಮೂರು ಲಕ್ಷಕ್ಕಿಂತಲೂ ಅಧಿಕ ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ, ರೈತರ ಪ್ರತಿಭಟನೆ ಬೃಹತ್ ಪ್ರಮಾಣದಲ್ಲಿ ಪ್ರಕಟಗೊಳ್ಳಲಿಲ್ಲ. ಈ ವಿದ್ಯಮಾನಗಳು ಸಾಮೂಹಿಕ ಹೋರಾಟಗಳು ನಶಿಸುತ್ತಿರುವುದಕ್ಕೆ ಸಾಕ್ಷಿಯಾಗಿವೆ.

ಇಂತಹ ಪರಿಸ್ಥಿತಿ ಉಂಟಾಗಲು ಹಲವಾರು ಕಾರಣಗಳಿವೆ. ಮೊದಲನೆಯದಾಗಿ, ನವ-ಉದಾರವಾದಿ ಆಳ್ವಿಕೆಯು ಕಾರ್ಮಿಕ ವರ್ಗದ ಚಳುವಳಿಯ ಬಲ ಕುಸಿಯುವಂತೆ ನೋಡಿ-ಕೊಂಡಿದೆ. ಹೇಗೆಂದರೆ, ಈ ಆಳ್ವಿಕೆಯಲ್ಲಿ, ಬಲಾಢ್ಯ ಬಂಡವಾಳಶಾಹಿಗಳು ಪಾರಂಪರಿಕ ಕಿರು ಉತ್ಪಾದನೆಗಳನ್ನು ನುಂಗಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿದ್ದವರು ನಿರುದ್ಯೋಗಿಗಳಾದರು. ಈ ನಮೂನೆಯ ಆರ್ಥಿಕ ಬೆಳವಣಿಗೆಯಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಲೇ ಇಲ್ಲ. ಪರಿಣಾಮವಾಗಿ, ನಿರುದ್ಯೋಗಿಗಳ ಸಂಖ್ಯೆ ಬೃಹದಾಕಾರವಾಗಿ ಬೆಳೆಯಿತು. ನಿರುದ್ಯೋಗಿಗಳ ಒಂದು ಸೈನ್ಯವೇ ನಿರ್ಮಾಣವಾಯಿತು. ಅದರಿಂದಾಗಿ ಕಾರ್ಮಿಕರ ಹೋರಾಟದ ಕೆಚ್ಚು ಇಳಿಯಿತು.

ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ, ಅಂತಹ ಉದ್ದಿಮೆಗಳಲ್ಲಿ ನೆಡೆಯುವ ಕೆಲಸವನ್ನು ಖಾಸಗಿಯವರಿಗೆ ಹೊರ ಗುತ್ತಿಗೆ-ಯಾಗಿ ಕೊಡುವುದು, ಅಂತಹ ಉದ್ದಿಮೆಗಳಲ್ಲಿ ಅತಿ ಕಡಿಮೆ ಸಂಬಳದಲ್ಲಿ ದುಡಿಯಲು ದಿನಗೂಲಿ ಆಧಾರದ ಮೇಲೆ ನೇಮಿಸಿಕೊಳ್ಳುವ ಕೆಲಸ ನೆಡೆ-ಯುತ್ತಿದೆ. ಬೃಹತ್ ಸಂಖ್ಯೆಯ ನಿರುದ್ಯೋಗಿಗಳ ಸೈನ್ಯದ ಅಸ್ತಿತ್ವವೇ ಈ ಎಲ್ಲ ಪ್ರಕ್ರಿಯೆಗಳು ಸಲೀಸಾಗಿ ನೆಡೆಯಲು ಕಾರಣವಾಗಿದೆ. ಇದೇ ಕಾರಣದಿಂದಾಗಿಯೇ ಕಾರ್ಮಿಕ ಚಳುವಳಿ ದುರ್ಬಲವಾಗಿದೆ ಮತ್ತು ಕಾರ್ಮಿಕ ವರ್ಗದ ಹೋರಾಟದ ಶಕ್ತಿಯೇ ಕುಸಿದಿದೆ.

ಎರಡನೆಯದಾಗಿ, ನವ-ಉದಾರವಾದಿ ಆಳ್ವಿಕೆಯು ದೇಶದ ಅರ್ಥವ್ಯವಸ್ಥೆಯನ್ನು ಜಾಗತಿಕ ಹಣಕಾಸು ಬಂಡವಾಳದ ಹರಿವು ಸೃಷ್ಟಿಸಿರುವ ಸುಳಿಗೆ ತಳ್ಳಿದೆ. ಹಾಗಾಗಿ, ಯಾವ ಪಕ್ಷ ಚುನಾವಣೆಯಲ್ಲಿ ಗೆದ್ದುಬಂದರೂ, ಬಂಡವಾಳ ಹೊರ ಹೋಗುತ್ತದೆ ಎಂಬ ಭೀತಿಯಲ್ಲಿ ಆ ಪಕ್ಷವು ನವ-ಉದಾರವಾದಿ ಆರ್ಥಿಕ ನೀತಿಗಳನ್ನೇ ಅನುಸರಿಸಬೇಕಾಗುತ್ತದೆ. ಅರ್ಥವ್ಯವಸ್ಥೆಯನ್ನು ಈ ಸುಳಿಯಿಂದ ಬಿಡಿಸಿಕೊಂಡರೆ, ಪರ್ಯಾಯವೊಂದನ್ನು ನಿರ್ಮಿಸಲು ಅವಕಾಶವಿದೆ. ಆದರೆ, ಸೈದ್ಧಾಂತಿಕ ಕಾರಣಗಳು ಮತ್ತು ರಾಜಕೀಯ ಇಚ್ಛಾಶಕ್ತಿಗಳ ಹೊರತಾಗಿಯೂ, ಅರ್ಥವ್ಯವಸ್ಥೆಯನ್ನು ಜಾಗತೀಕರಣದ ಸುಳಿಯಿಂದ ಬಿಡಿಸಿಕೊಳ್ಳಲು ಒಂದು ಅಂಶವು ಅಡ್ಡ ಬರುತ್ತದೆ. ಅದೇನೆಂದರೆ, ಅಂತಹ ಸಂದರ್ಭದಲ್ಲಿ ಬಂಡವಾಳವು ಹಠಾತ್ತನೆ ಹೊರ ಹೋಗುತ್ತದೆ. ಆ ಸಂಕ್ರಮಣ ಕಾಲದಲ್ಲಿ ಅರ್ಥವ್ಯವಸ್ಥೆಗೆ ಕೆಲ ಮಟ್ಟಿನ ಹಾನಿ ತಟ್ಟುತ್ತದೆ.

ಒಂದು ಅರ್ಥವ್ಯವಸ್ಥೆಯು ಅಳವಡಿಸಿಕೊಳ್ಳಲು ಬಯಸುವ ಪರ್ಯಾಯ ಸಾಧ್ಯತೆಗಳಿಗೆ ನವ-ಉದಾರವಾದವು ಅಡ್ಡಿಯಾಗಿದೆ. ಏಕೆಂದರೆ, ಬಹುತೇಕ ರಾಜಕೀಯ ಪಕ್ಷಗಳು ಅರ್ಥವ್ಯವಸ್ಥೆಯನ್ನು ಜಾಗತೀಕರಣದ ಹಿಡಿತದಿಂದ ಬಿಡಿಸಿಕೊಳ್ಳಲು ಅಥವಾ ಬಂಡವಾಳದ ಮೇಲೆ ನಿಯಂತ್ರಣ ಹೇರಲು ಗಡ ಗಡ ನಡುಗುತ್ತವೆ. ಒಟ್ಟಾರೆಯಾಗಿ, ನವ-ಉದಾರವಾದಿ ಕಾಲಮಾನದಲ್ಲಿ ಒಂದು ನಿರಾಸೆಯ ವಾತಾವರಣ ನೆಲೆಸಿದೆ ಎಂದು ಹೇಳಬಹುದು.

ನವ-ಉದಾರವಾದಿ ನೀತಿಗಳನ್ನು ದೃಢವಾಗಿ ಮತ್ತು ಸತತವಾಗಿ ವಿರೋಧಿಸುತ್ತಿರುವ ಎಡ ಪಕ್ಷಗಳು ಪರ್ಯಾಯ ಸಾಧ್ಯತೆಗಳು ಹರಳುಗಟ್ಟುವಂತೆ ಮಾಡಲು ಶ್ರಮಿಸುತ್ತಿವೆ. ಆದರೆ, ಈ ಪಕ್ಷಗಳ ಬೆಂಗಾವಲಾಗಿರುವ ಕಾರ್ಮಿಕ ವರ್ಗದ ಹೋರಾಟದ ಕೆಚ್ಚು ಕುಸಿದಿರುವುದು ಎಡ ಪಕ್ಷಗಳಿಗೆ ಹಿನ್ನಡೆ-ಯಾಗಿದೆ. ಅಷ್ಟರಮಟ್ಟಿಗೆ ಪ್ರಗತಿಪರ' ಅಭಿಪ್ರಾಯವೂ ನವ-ಉದಾರವಾದಿ ಸಿದ್ಧಾಂತದ ಪ್ರಾಬಲ್ಯಕ್ಕೆ ಬಲಿ ಬಿದ್ದಿದೆ. ಈ ಪರಿಸ್ಥಿತಿಯಿಂದಾಗಿ ಎಡ ಪಕ್ಷಗಳ ಪ್ರಭಾವ ಮತ್ತಷ್ಟು ಕುಸಿದಿದೆ.

ನವ-ಉದಾರವಾದಿ ಕಾಲಮಾನದ ಈ ಪರಿಸ್ಥಿತಿಯಲ್ಲಿ, ದಿನ ನಿತ್ಯದ ಜನಜೀವನವನ್ನು ಉತ್ತಮಗೊಳಿಸುವ ಹೋರಾಟಗಳೂ ಹಿನ್ನೆಲೆಗೆ ಸರಿದಿವೆ. ಈ ಕಾಲಘಟ್ಟದಲ್ಲೂ ಕೆಲವು ನಿರ್ದಿಷ್ಟ ಹೋರಾಟಗಳು ನೆಡೆದಿವೆ, ನಿಜ. ಗುರುತಿನ (ಐಡೆ-ಂಟಿಟಿ) ರಾಜಕೀಯ ಮೂಲದ ಜಾತಿ, ಪಂಗಡಗಳ ಜನರ ಉನ್ನತಿಗಾಗಿ ಸೀಮಿತ ಹೋರಾಟಗಳು ನೆಡೆದಿವೆ. ಆದರೆ ಈ ಎಲ್ಲ ಹೋರಾಟಗಳೂ ಇಡೀ ಜನತೆಯ ಸ್ಥಿತಿ ಗತಿಗಳು ಬದಲಾಗಲು ನೆರವಾಗಿಲ್ಲ.

ಹೋರಾಟಗಳಿಗೆ ಜನತೆ ಬೆಂಬಲ ಕೊಡುತ್ತಾರೆ ಎನ್ನುವುದರಲ್ಲಿ ಅನುಮಾನವಿಲ್ಲ. ಭ್ರಷ್ಟಾಚಾರದ ವಿರುದ್ಧವಾಗಿ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ನೆಡೆದ ಹೋರಾಟವನ್ನು ಜನರು ಬೆಂಬಲಿಸಿದರು. ಆದರೆ, ಅಂತಹ ಬೃಹತ್ ಕೂಟಗಳಲ್ಲಿ ಅವರು ತಮ್ಮನ್ನು ತಾವೇ ತೊಡಗಿಸಿಕೊಳ್ಳಲಿಲ್ಲ. ತಮ್ಮದೇ ಸ್ಥಿತಿ ಗತಿಗಳು ಉತ್ತಮಗೊಳ್ಳಲು ನೆಡೆಯುವ ಹೋರಾಟಗಳಲ್ಲಿ ತೊಡಗಿಕೊಳ್ಳಲೂ ಹಿಂಜ-ರಿಯುತ್ತಾರೆ. ನವ-ಉದಾರವಾದಿ ನೀತಿಗಳಿಂದಾಗಿ ಹಿಂಡಿ ಹಿಪ್ಪೆಯಾಗಿರುವ ಕಿರು ಉತ್ಪಾದಕರು ಮತ್ತು ರೈತರನ್ನೂ ಇಂತಹ ಹಿಂಜರಿಕೆ ಬಾಧಿಸುತ್ತಿದೆ.

ನೋಟು ರದ್ದತಿಯಿಂದಾಗಿ ಕಷ್ಟ ಕಾರ್ಪಣ್ಯಗಳು ಎದುರಾದಾಗಲೂ ಜನ ಶಾಂತಸ್ಥಿತಿಯಲ್ಲಿದ್ದದ್ದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಎರಡು ದಶಕಗಳ ಹಿಂದೆ ನಡೆಯುತ್ತಿದ್ದ ರೀತಿಯಲ್ಲಿ ಬೃಹತ್ ಜನಾಂದೋಲನಗಳನ್ನು ಪ್ರಾರಂಬಿಸುವ ಉತ್ಸಾಹವನ್ನೇ ಕುಂದಿಸಿದೆ ನವ-ಉದಾರವಾದಿ ಆಳ್ವಿಕೆ. ಹಾಗಾಗಿ, ಜನತೆಯ ಮಧ್ಯದಲ್ಲಿ ಛಿದ್ರಕಾರಿ ಪ್ರವೃತ್ತಿಗಳು ಕಾಣಿಸಿಕೊಳ್ಳುತ್ತಿವೆ. ಹೆಚ್ಚೆಂದರೆ ಅಸ್ಮಿತೆಯ ಚಳುವಳಿಗಳು ನೆಡೆಯುತ್ತಿವೆ. ಜನರಲ್ಲಿ ಒಂದು ರೀತಿಯ ಪ್ರತ್ಯೇಕತಾ ಭಾವನೆ ಮೊಳೆಯುತ್ತಿದೆ. ಇದು ಅವರಲ್ಲಿ ಭಯ ಹುಟ್ಟಿಸಿದೆ. ಹಾಗಾಗಿ, ಸರ್ಕಾರದ ನಿಲುವನ್ನು ಬಹಿರಂಗವಾಗಿ ವಿರೋಧಿಸಲು ಹೆದರುತ್ತಾರೆ, ಸರ್ಕಾರದ ಬೆಂಬಲಿಗರ ಕೆಂಗಣ್ಣಿಗೆ ಗುರಿಯಾಗುವ ಕಾರಣದಿಂದ.

ಕೋಪೋದ್ರಿಕ್ತರ ಗುಂಪೊಂದು ಸರಿಯಾದ ಕಾರಣವಿಲ್ಲದೆಯೂ ಯಾವುದೊ ಕಾಡು ಮೂಲೆಯಲ್ಲಿ ಕಾರ್ಯನಿರತನಾಗಿರುವ ಅದೃಷ್ಟಹೀನ ಬ್ಯಾಂಕ್ ಉದ್ಯೋಗಿಯೊಬ್ಬನ ಮೇಲೆರಗಬಹುದು. ಇಂತಹ ದುಷ್ಕೃತ್ಯಗಳ ವಿರುದ್ಧವೂ ಜನಸ್ತೋಮ ಪ್ರತಿಭಟಿಸುವುದಾಗಲಿ ಅಥವಾ ಅವರ ಕೋಪವಾಗಲಿ ವ್ಯಕ್ತವಾಗುವುದಿಲ್ಲ.

ಇದೇ ಈ ಅಂಶವು, ನೋಟು ರದ್ದತಿಯನ್ನು ಜನತೆ ಒಪ್ಪಿಕೊಳ್ಳುವ ಸೂಚನೆಯ ಹೊರತಾಗಿಯೂ, ಪ್ರಜಾಪ್ರಭುತ್ವವು ದುರ್ಬಲಗೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ ಜನತೆ ಒಂದು ನಿರ್ಣಾಯಕ ಪಾತ್ರ ವಹಿಸುತ್ತಾರೆಂದು ನಿರೀಕ್ಷಿಸಲಾಗಿದೆ. ಸಾಮೂಹಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಜನತೆ ಪ್ರಜಾಪ್ರಭುತ್ವದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ಇದೇ ಕಾರಣದಿಂದ, ಪ್ರಜಾಪ್ರಭುತ್ವದಲ್ಲಿ ಟ್ರೇಡ್ ಯೂನಿಯನ್‌ಗಳು ವಹಿಸುವ ಪಾತ್ರ ಬಹಳ ಮಹತ್ವದ್ದು ಎಂಬ ಮಾತನ್ನು ಸಾಂದರ್ಭಿಕವಾಗಿ ಹೇಳಬಹುದು. ಅಭಿಪ್ರಾಯಗಳನ್ನು ಸಾಮೂಹಿಕವಾಗಿ ವ್ಯಕ್ತಪಡಿಸುವ ಅವಕಾಶಗಳನ್ನು ಈಗಿರುವ ನವ-ಉದಾರ ಆಳ್ವಿಕೆಯು ಹತ್ತಿಕ್ಕಿದರೆ ಮತ್ತು ಜನತೆ ಈ ಮಟ್ಟಿಗೆ ಛಿದ್ರಗೊಂಡರೆ, ಪ್ರತ್ಯೇಕಗೊಂಡರೆ ಮತ್ತು ತಮಗೆ ಅತೀವ ಸಂಕಷ್ಟಗಳನ್ನು ತಂದೊಡ್ಡಿದ ಸರ್ಕಾರದ ಎದುರು ಪ್ರತಿಭಟಿಸಲು ಹಿಂಜರಿದರೆ, ಆಗ, ಪ್ರಜಾಪ್ರಭುತ್ವವು ದುರ್ಬಲಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಬಹಳ ವರ್ಷಗಳಿಂದಲೂ ನೆಲೆಸಿರುವ ಕೃಷಿ ಬಿಕ್ಕಟ್ಟಿನಲ್ಲಿ ಒದ್ದಾಡುತ್ತಿರುವ ರೈತರು ತಮ್ಮ ಅಹವಾಲುಗಳನ್ನು ಸರ್ಕಾರದ ಮುಂದೆ ತೋಡಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಂಡ ರೀತಿಯಲ್ಲಿ, ನೋಟು ರದ್ದತಿ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ವಲಸಿಗ ಕಾರ್ಮಿಕರು, ಸರ್ಕಾರದ ಕ್ರಮವನ್ನು ಪ್ರತಿಭಟಿಸುವುದರ ಬದಲು ಇಡೀ ಗುಂಪಿಗೆ ಗುಂಪೇ ಅಸಹಾಯಕರಾಗಿ ತಮ್ಮ ತಮ್ಮ ಊರಿಗೆ ಮರಳುತ್ತಿದ್ದಾರೆ. ಬೇರೆ ಬೇರೆ ಸಾಮಾಜಿಕ ಗುಂಪುಗಳ ಪರಿಸ್ಥಿತಿಯೂ ಹೀಗೆಯೇ ಇದೆ.

ಈ ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಒಬ್ಬ "ನಾಯಕ" ಜನತೆಯನ್ನು ಪಲ್ಲಟಗೊಳಿಸಿ ಅವರ ಸ್ಥಾನ ಆಕ್ರಮಿಸುತ್ತಾನೆ. ನವ-ಉದಾರವಾದಿ ಆಳ್ವಿಕೆಯಲ್ಲಿ, ಬಹಳ ಸಮಯದಿಂದಲೂ ಇಂತಹ ಪ್ರವೃತ್ತಿ ಕಾಣಿಸಿಕೊಳ್ಳತೊಡಗಿದೆ. ಜನತೆ ತನ್ನ ಕರ್ತೃತ್ವದ ಪಾತ್ರವನ್ನು ಕ್ರಮೇಣ ಕಳಕೊಳ್ಳುವಂತೆ ಮಾಡಿರುವ ಪ್ರವೃತ್ತಿಯಿದು. ಇದರ ಹೆಚ್ಚು ಘನೀಕೃತವಾದ ಸ್ವರೂಪವೇ ಜನತೆಯ ಕರ್ತೃತ್ವ ಪಾತ್ರವನ್ನು ಬುಡಮೇಲು ಮಾಡುವ, ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದಮನ ಮಾಡುವ ಫ್ಯಾಸಿಸ್ಟ್ ಪ್ರವೃತ್ತಿ.

ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ಜನ ಸಾಮೂಹಿಕವಾಗಿ ಮಧ್ಯಪ್ರವೇಶ ಮಾಡದಂತೆ ತಡೆ ಹಿಡಿಯುವ ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯ ಈ ಪ್ರವೃತ್ತಿಯನ್ನು ಗುರುತಿಸುವ ಉದ್ದೇಶವೆಂದರೆ, ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಪರಿಸ್ಥಿತಿ ಅನಿವಾರ್ಯವಾಗಿ ಹೀಗೆ-ಯೇ ಇರುತ್ತದೆ ಎಂದು ಸೂಚಿಸುವುದಲ್ಲ. ಅಥವ ಜನ ಶಾಂತವಾಗಿದ್ದಾರೆ ಎಂದರೆ ಅದರ ಅರ್ಥ ಸರಕಾರದ ವಕ್ತಾರರು ನಮ್ಮನ್ನು ನಂಬಿಸುತ್ತಿರುವಂತೆ ಅವರು ಸಿಕ್ಕಿದಷ್ಟರಲ್ಲೇ ತೃಪ್ತರಾಗಿದ್ದಾರೆ ಎಂದು ಭಾವಿಸುವುದೂ ಅಲ್ಲ.

ದೇಶದ ಪ್ರಗತಿಪರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲೇಬೇಕು ಮತ್ತು ನೋಟು ರದ್ದತಿಯ ಪ್ರಹಾರದ ಸನ್ನಿವೇಶದಲ್ಲಿ ಜನರಲ್ಲಿ ನೆಲೆಸಿರುವ ನಿಷ್ಕರ್ಮದ ಶಾಂತತೆಯನ್ನು ಅಲುಗಾಡಿಸಿ, ಅವರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಪ್ರಗತಿಪರ ಶಕ್ತಿಗಳು ಮಾಡಲೇಬೇಕು. ●

ಸಮತೆಗಾಗಿ ಸಹಪಯಣ – ಒಂದು ಅನಿಸಿಕೆ

ಕೆ.ಎಸ್.ವಿಮಲ



ಚಿಂತನೆ ಮತ್ತು ಚಳುವಳಿಗಳ ಸಹಪಯಣದ ಅಗತ್ಯ ಹಿಂದಿಗಿಂತಲೂ ಇಂದು ಹೆಚ್ಚು ಅಗತ್ಯವೆನಿಸುತ್ತಿದೆ. ಚಿಂತಕರ ಚಾವಣಿಯಿಂದ ಹರಿದು ಬಂದ ಹನಿಗಳು ಚಳುವಳಿಯ ಸಾಂಗತ್ಯವನ್ನು ಪಡೆಯಲಾಗಬೇಕು, ಚಳುವಳಿಯಿಂದ ಎದ್ದ ಧೂಳು ಚಿಂತಕರ ಲೇಖನಿಯ ಶಾಯಿಯಾಗಬೇಕು. ಚಿಂತನೆಯಿಲ್ಲದ ಚಳುವಳಿ, ಹಾಗೂ ಚಳುವಳಿಯಿಲ್ಲದ ಚಿಂತನೆಯಿಂದ ಒಟ್ಟು ಸಮಾಜಕ್ಕೆ ಹೆಚ್ಚಿನ ಉಪಯೋಗವಾಗದೆಂಬ ನೆಲೆಯಲ್ಲಿ ಹಲವು ಬಾರಿ ಚರ್ಚೆಗಳೂ ನಡೆದಿವೆ. ಸುತ್ತೆಲ್ಲ ಆವರಿಸುತ್ತಿರುವ ಕತ್ತಲ ಕೂಪಕ್ಕೆ ಬೆಳಕು ನೀಡಲು ಸಾಧ್ಯವಾಗಬೇಕೆಂದರೆ ಚಳುವಳಿ ತನ್ನ ಪರಿಕರಗಳನ್ನು ಚಿಂತನೆಯ ಮೂಲದಿಂದ ಮತ್ತು ಚಿಂತನೆ ತನಗೆ ಅಗತ್ಯವಾದ ಆಕರವನ್ನು ಚಳುವಳಿಯ ಮೂಸೆಯಿಂದ ತೆಗೆದುಕೊಳ್ಳಬೇಕು. ಅಂಥಹ ಒಂದು ಸಮ ಸಾಧ್ಯತೆಯನ್ನು ರೂಪಿಸಲಾಗಬೇಕೆನ್ನುವ ನೆಲೆಯಲ್ಲಿ ಸಮತೆಗಾಗಿ ಸಹಪಯಣ– ಮಹಿಳಾ ಕರ್ನಾಟಕ ಸಮಾವೇಶ–2017ನ್ನು ಮಂಡ್ಯದಲ್ಲಿ ಫೆಬ್ರುವರಿ 4 ಮತ್ತು 5 ರಂದು ನಡೆಸಲಾಯಿತು.

'ನಿಮ್ಮನೆ ಹೆಂಗಸರಿಗೆ ಎದ್ದು ರಂಗೋಲಿ ಹಾಕೋಕೆ ಹೇಳಿ. ಮನೆ ಮುಂದೆ ಸ್ವಚ್ಛ ಮಾಡಿಟ್ಟಿದ್ದೀವಿ ಎಂದು ಕೂಗಿ ಮಲಗಿರುವ ಗಂಡಸರಿಗೆ ಹೇಳಬೇಕು ಎನಿಸುತ್ತದೆ– ನಾನು ಪೌಡರ್ ಹಾಕಿಕೊಂಡು ಬಂದಿದೀನಿ. ನೀನು ನನಗೆ ಪೌಡರ್ ಹಚ್ಬೋದು ಬೇಡ ಅನ್ನಾರೆ. ನಾವು ಬೀದಿ ಗುಡಿಸಿದ ಧೂಳು ಎದ್ದರೆ ರಸ್ತೆಯಲ್ಲಿ ಹೋಗೋ ಜನ.. .. ನಾವು ಗುಡಿಸಿ ಸ್ವಚ್ಛ ಮಾಡಿದರೆ ತಾನೇ ಅವರು ಓಡಾಡೋದು. ಬೆಳಕು ಹರಿಯೋ ಮುನ್ನವೇ ಕತ್ತಲಲ್ಲಿ ಕೈಯಿಂಧ ಬಾಚಿ ಹೊಲಸು ತೆಗೀತೀವಿ. ಅಲ್ಲಿ ಯಾರ ಮಲ ಮೂತ್ರ ಇರ್ತದೋ, ಸತ್ತ ಪ್ರಾಣಿಗಳಿರ್ತವೋ ನಮಗೆ ಗೊತ್ತಿಲ್ಲ, ಆದರೆ ನಾವು ಜನರಿಗಾಗಿ ಅದನ್ನು ಮಾಡ್ತೀವಿ. ಆದರೆ ಅದೇ ಜನ ನಮ್ಮನ್ನು ಮನುಷ್ಯರ ಥರಹ ನೋಡೋದಿಲ್ಲ' ತನ್ನ ಬದುಕಿನ ಒಂದೊಂದು ಘಳಿಗೆಯನ್ನು ಮಾತಿನ ಮುತ್ತಾಗಿ ಅನುರಾಧ ತೆರೆದಿಟ್ಟಾಗ ಕೇಳುಗರ ಕಣ್ಣಾಲಿಗಳು ತುಂಬಿ ಕೈಗೆ ಕರವಸ್ತ್ರ ಬಂದಿದ್ದಂತೂ ನಿಜ.

ಅನುರಾಧ ಹಾಸನದ ಪೌರ ಕಾರ್ಮಿಕಳು. ತನ್ನ ಮತ್ತು ತನ್ನ ಸಹಚರರ ಬದುಕಿನ ದುಃಸ್ಥಿತಿಯನ್ನು ಹೇಳುತ್ತಲೇ ವ್ಯವಸ್ಥೆಯ ಕ್ರೌರ್ಯವನ್ನೂ ಬಿಡಿಸಿಟ್ಟಳು. ಮನುಷ್ಯತ್ವದ ಕನಿಷ್ಠ ಗುಣ ಲಕ್ಷಣಗಳನ್ನು ಉಳಿಸಿಕೊಂಡವರು ಮರು ಘಳಿಗೆಯಿಂದ ತಮ್ಮ ನಡೆ ನುಡಿಗಳನ್ನು ಬದಲಿಸಿಕೊಳ್ಳಬೇಕಾದ ಅಗತ್ಯವನ್ನು ಆ ಕ್ಷಣದಲ್ಲಿಯೇ ಮನಗೊಂಡುಬಿಡಬೇಕಾದಷ್ಟು ಹರಿತವಾದ ಭಾವ ಅವಳ ಮಾತುಗಳಿಗಿತ್ತು. ಇದು ಸಮತೆಗಾಗಿ ಸಹಪಯಣ ಕಾರ್ಯಕ್ರಮದ ಉದ್ದೇಶವೂ ಆಗಿತ್ತು. ಮಹಿಳಾ ಕರ್ನಾಟಕವೆಂಬುದು ವಿಭಿನ್ನ ಅನುಭವ ಲೋಕ ಭಂಡಾರ. ಇಲ್ಲಿ ಸಾಹಿತ್ಯವಿದೆ, ಸಂಗೀತವಿದೆ, ನೃತ್ಯ ಕಲೆ, ಮಾತು, ಬರಹ, ಚಳುವಳಿ ಎಲ್ಲವೂ ಇದೆ. ಇದಕ್ಕೆ ಸಹಪಯಣಿಗ ಪುರುಷರ ಸಾಂಗತ್ಯವೂ ಇದೆ. ಈ ಸಾಂಗತ್ಯ ಮತ್ತು ಸಾಧ್ಯತೆಗಳನ್ನು ಇನ್ನಷ್ಟು ಮನವರಿಕೆ ಮಾಡಿಕೊಳ್ಳುವ ನೆಲೆಯಲ್ಲಿ, ಗಟ್ಟಿಗೊಳಿಸಿಕೊಳ್ಳುವ, ಒಟ್ಟಿಗೇ ಮುನ್ನಡೆಯುವ ನೆಲೆಯಲ್ಲಿ ಮಂಡ್ಯದಲ್ಲಿ ನಡೆದ ಎರಡು ದಿನಗಳ ಮಹಿಳಾ ಕರ್ನಾಟಕ ಸಮಾವೇಶ 2017 'ಸಮತೆಗಾಗಿ ಸಹಪಯಣ' ಘೋಷಣೆಯಡಿಯಲ್ಲಿ ರೂಪುಗೊಂಡಿತ್ತು.

ದೇವದಾಸಿ–ಗೆಜ್ಜೆಪೂಜೆ

ಸರ್ಕಾರದ ನೆರವು ಮತ್ತು ನೆರಳಿನಲ್ಲಿಯೇ ನಡೆಯಬೇಕಾದ ಸಂಸ್ಥೆಗಳೂ ಕೂಡ ಕ್ರಿಯಾಶೀಲ ಮನಸ್ಸು ಮತ್ತು ಸಮಾಜಮುಖಿ ಆಲೋಚನೆಗಳನ್ನು ಹೊಂದಿ ಅದನ್ನು ಕಾರ್ಯಗತಗೊಳಿಸುವ ಬದ್ಧತೆ ಹೊಂದಿದ್ದರೆ ಯಾವುದೂ ಅಸಾಧ್ಯವಲ್ಲ ಎಂಬುದನ್ನು ತೋರಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರ ಈ ಸಹಪಯಣದ ಸಹವರ್ತಿಯಾಗಿದ್ದುದು ಈ ಪಯಣದ ಅಡಿಗಲ್ಲಿಗೆ ಬಲ ಕೊಟ್ಟಿತೆಂದರೆ ಅತಿಶಯೋಕ್ತಿಯಾಗಲಾರದು.

ಚಿಂತನೆ ಮತ್ತು ಚಳುವಳಿಗಳನ್ನು ಒಟ್ಟಿಗೆ ಬೆಸೆಯುವ ಮಾತುಗಳನ್ನು ನಾವು ಆಡುತ್ತಲೇ ಇರುತ್ತೇವೆ ಅದರರ್ಥ ಚಿಂತನೆಯಿಲ್ಲದೇ ಚಳುವಳಿಗಳು ನಡೆದಿವೆ ಅಥವಾ ಚಳುವಳಿಯ ಹಂಗಿಲ್ಲದೇ ಚಿಂತನೆ ಬೆಳೆದಿದೆ ಎಂದೇನೂ ಅಲ್ಲ. ಆದರೆ ಕಾಲದಿಂಧ ಕಾಲಕ್ಕೆ ಆಗುತ್ತಿರುವ ಮಾರ್ಪಾಟುಗಳಿಗೆ ತೆರೆದುಕೊಳ್ಳುವ ಮತ್ತು ಗತದ ಆಳದಿಂದ ಹೆಕ್ಕಿ ತೆಗೆದು ಈಗ ಇನ್ನಿಷ್ಟು ಅಗತ್ಯಕ್ಕೆ ತಕ್ಕಂತೆ ಪಾಲಿಶ್ ಮಾಡುವ ಚಿಕ್ಕ ಚಿಕ್ಕ ಪ್ರಯತ್ನಗಳ ಭಾಗ ಈ ಸಮಾವೇಶ. ಪೌರ ಕಾರ್ಮಿಕರ ಬದುಕಿನ ಬವಣೆ ಕು.ವೆಂ.ಪು ರವರ ಜಲಗಾರ ಕೃತಿಯ ಮುಖ್ಯ ವಸ್ತು. ಹಾಗೆಯೇ ಈಗ ಶತಮಾನವನ್ನು ಆಚರಿಸಬೇಕಿರುವ ಎಂ.ಕೆ.ಇಂದಿರಾರವರ ಗೆಜ್ಜೆಪೂಜೆ, ದೇವದಾಸಿಯರ ಬದುಕನ್ನು ಸಾಹಿತ್ಯ ಪ್ರಪಂಚಕ್ಕೆ ತೆರೆದಿಟ್ಟ ಕೃತಿ. ಕೃತಿಯನ್ನು ಕೈಗೆತ್ತಿ ಸಿನಿಮಾ ಕೂಡ ಮಾಡಲಾಗಿದೆ. ಸರಕಾರ ಹಲವು ಯೋಜನೆಗಳನ್ನೂ ಪ್ರಕಟಿಸಿದೆ. ದೇವದಾಸಿ ಪದ್ಧತಿಯನ್ನು ನಿಷೇಧಿಸಲಾಗಿದೆ ಕೂಡ. ಆದರೆ!! ಇಂದಿಗೂ ಗುಟ್ಟಾಗಿ ನಡೆಯುವ ಮುತ್ತುಕಟ್ಟುವ, ದೇಶದ ಅಸಂಖ್ಯಾತ ಸ್ಥಳಗಳಲ್ಲಿ ಕಾನೂನಿನ ಬೆಂಬಲವಿಲ್ಲದೆಯೂ ನಡೆಯುವ ವೇಶ್ಯಾವಾಟಿಕೆಯಲ್ಲಿ ದೇವದಾಸಿಯರಾಗಿ ದೇವರ ಸೇವೆಗೆ ಮೀಸಲಾದವರು ಕಾಣಸಿಗುತ್ತಾರೆ. ದೇವರ ಸೇವೆಯಿಂದ ಪಡೆದ ದೇವರ ಮಕ್ಕಳಿಗೆ ಶಿಕ್ಷಣದ ಅವಕಾಶ ಕೂಡ ಸುಲಭವಲ್ಲ. ಈ ನೆಲೆಯಲ್ಲಿ ಚಿಂತನೆಗೆ ವಸ್ತುವಾದ ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿಯನ್ನು ರೂಪಿಸುತ್ತಿರುವ ದೇವದಾಸಿ ಸಂಘಟನೆಯ ಮಾಳಮ್ಮ ಮನದಾಳದ ಮಾತುಗಳನ್ನು ಆಲಿಸುವ ಅವಕಾಶ 'ನುಡಿಯೊಡನಾಟ' ಗೋಷ್ಠಿಯಲ್ಲಿ ನಡೆಯಿತು.

ಇಸಾಬೇಗಂ–ಚಾಂದನಿ

ಧರ್ಮಗ್ರಂಥ ನೀಡಿದ ಅವಕಾಶವೆಂಬಂತೆ ದುರುಪಯೋಗಗೊಳ್ಳುತ್ತಿರುವ ತ್ರಿವಳಿ ತಲಾಖ್ ನ ಸಂತ್ರಸ್ತೆ ಇಸಾಬೇಗಂ ತನ್ನ ಗಂಡ ತನಗೆ ತಲಾಖ್ ಕೊಟ್ಟಿದ್ದೇ ಗೊತ್ತಿರದ ಮಹಿಳೆ. ಎದೆಗುಂದದೇ ಇಬ್ಬರು ಮಕ್ಕಳನ್ನು ಸಾಕಿ ತಾನೂ ಮಹಿಳಾ ಚಳುವಳಿಯ ಭಾಗವಾಗಿ ಬದುಕಿ ತೋರಿಸುತ್ತಿರುವ ದಿಟ್ಟೆ. ಪ್ರಕೃತಿಯ ಹಲವು ವೈಚಿತ್ರ್ಯಗಳು. ಗಂಡಾಗಿ ಹುಟ್ಟಿ ಹೆಣ್ಣು ಭಾವನೆಗಳು ಬೆಳೆಯುವ, ಹೆಣ್ಣಾಗಿ ಹುಟ್ಟಿ ಗಂಡಾಗಿ ಬಿಡುವ ಪರಿಸ್ಥಿತಿಯಲ್ಲಿ ಕುಟುಂಬ, ಸಮಾಜ ಎಲ್ಲವನ್ನೂ ಎದುರಿಸುವ ಸವಾಲಿಗೆ ಎದೆ–ಯೊಡ್ಡಿ ನಿಂತ ಚಾಂದನಿ. ಹೀಗೆ ಭಿನ್ನ ಅನುಭವ ಲೋಕದ ಕಥನವನ್ನು ಹಂಚಿಕೊಂಡಾಗ ಬರಹವೇ ಬೇರೆ ಬದುಕೇ ಬೇರೆ ಎನ್ನುವ ಭಾವ ಯಾರಿಗಾದರೂ ಇದ್ದರೆ ಅದು ಸರಿಯೇ ಎಂಬ ಪ್ರಶ್ನೆ ಎದ್ದಿರಲೇ ಬೇಕು. ಇದು ಸಹಪಯಣದ ನುಡಿಯೊಡನಾಟ. ನಿಮ್ಮೊಡನೆ ನಾವೆಂಬಂತೆ ಮನಕ್ಕೆ ತಟ್ಟುವ ಕಾವ್ಯ ಸಿಂಚನ ನೆರೆದವರ ಎದೆಗೆ ತಂಪು ನೀಡಿತು.

ಹೆಣ್ಣನ್ನು ಅಬಲೆಯಾಗಿಯೇ ಇರಿಸುತ್ತ ಮೇಲ್ಪದರದ ಸಬಲೀಕರಣದ ಮಾತುಗಳನ್ನಾಡುವ ಸಮಾಜದಲ್ಲಿ ಹೆಣ್ಣು ತುಳಿದ ಪ್ರತಿರೋಧದ ಹಾದಿಗಳ ಅನಾವರಣ, ಮುಂದೆ ನಿಗದಿಸಿಕೊಳ್ಳಬೇಕಾದ ಗುರಿ ಗಂತವ್ಯಗಳು, ಮತ್ತು ಗುರುತಿಸಿದ ನಡೆಯ ಜೊತೆ ನುಡಿಯ ಸಹಪಯಣಕ್ಕೆ ಸಾಥ್ ನೀಡುವ ಚರ್ಚೆಗಳು ಈ ಸಮಾವೇಶದ ತುಣುಕುಗಳು.

ಚಿಂತನೆ ಚಳುವಳಿಗಳ ಸಹಪಯಣ

ಇದು ಅಂತ್ಯವಲ್ಲ ಆರಂಭ. ಸಮಾವೇಶವನ್ನು ಸಂಘಟಿಸುವ ದಾರಿಯಲ್ಲಿ ಸಿಕ್ಕ ಅನುಭವಗಳು, ಸಹಪಯಣವೆಂಬುದು ಸುಲಭ ಸಾಧ್ಯವಲ್ಲವೆಂಬ ಅರಿವು, ಸಿಗಲೇ ಬೇಕಾದ ನೆರವುಗಳ ಅವಲೋಕನದೊಂದಿಗೆ ಮುನ್ನಡೆಯಬೇಕಾದ ಅಗತ್ಯ ಮತ್ತು ಮುನ್ನಡೆಯಬಲ್ಲೆವೆಂಬ ವಿಶ್ವಾಸ; ಮುಂದಿರುವ ಅಗಾಧ ಅವಕಾಶವನ್ನು ಮಹಿಳಾ ಕರ್ನಾಟಕ ಸಮಾವೇಶ ತೆರೆದಿಟ್ಟಿತು. ಮಹಿಳಾ ಅಧ್ಯಯನ ಕೇಂದ್ರಗಳು ಈ ಮಾದರಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವೂ ಇದೆ ಎಂಬ ಭಾವನೆ ಅಲ್ಲಲ್ಲಿ ಸುಳಿದಾಡಿದ್ದರೆ ಅದು ಅಚ್ಚರಿಯದಲ್ಲ.

ಚಿಂತನೆ ಮತ್ತು ಚಳುವಳಿಗಳ ಸಹಪಯಣದ ಅಗತ್ಯ ಹಿಂದಿಗಿಂತಲೂ ಇಂದು ಹೆಚ್ಚು ಅಗತ್ಯವೆನಿಸುತ್ತಿದೆ. ಚಿಂತಕರ ಚಾವಣಿಯಿಂದ ಹರಿದು ಬಂದ ಹನಿಗಳು ಚಳುವಳಿಯ ಸಾಂಗತ್ಯವನ್ನು ಪಡೆಯಲಾಗಬೇಕು, ಚಳುವಳಿಯಿಂದ ಎದ್ದ ಧೂಳು ಚಿಂತಕರ ಲೇಖನಿಯ ಶಾಯಿಯಾಗಬೇಕು. ಚಿಂತನೆಯಿಲ್ಲದ ಚಳುವಳಿ, ಹಾಗೂ ಚಳುವಳಿಯಿಲ್ಲದ ಚಿಂತನೆಯಿಂದ ಒಟ್ಟು ಸಮಾಜಕ್ಕೆ ಹೆಚ್ಚಿನ ಉಪಯೋಗವಾಗದೆಂಬ ನೆಲೆಯಲ್ಲಿ ಹಲವು ಬಾರಿ ಚರ್ಚೆಗಳೂ ನಡೆದಿವೆ. ಇಂದು ನಮ್ಮನ್ನು ಗಾಢವಾಗಿ ಆವರಿಸಿರುವ ಜಾತಿವಾದ, ಅಸ್ಪೃಶ್ಯತೆ, ಧಾರ್ಮಿಕ ಭಯೋತ್ಪಾದನೆಯಂಥಹ ಸಂದರ್ಭದಲ್ಲಿ ಅವನ್ನೆಲ್ಲ ವಿರೋಧಿಸುವ ಮತ್ತು ನಿಧಾನವಾಗಿ ಮರೆಗೆ ಸರಿಯುತ್ತಿರುವ ಮನುಷ್ಯ ಸಹಜ ಪ್ರೀತಿ, ವಿಶ್ವಾಸ ಸಾಮರಸ್ಯಗಳನ್ನು ಹೆಕ್ಕಿ ಮುನ್ನೆಲೆಗೆ ತರುವ ತೀವ್ರ ಅಗತ್ಯವಿದೆ. ಸುತ್ತೆಲ್ಲ ಆವರಿಸುತ್ತಿರುವ ಕತ್ತಲ ಕೂಪಕ್ಕೆ ಬೆಳಕು ನೀಡಲು ಸಾಧ್ಯವಾಗಬೇಕೆಂದರೆ ಚಳುವಳಿ ತನ್ನ ಪರಿಕರಗಳನ್ನು ಚಿಂತನೆಯ ಮೂಲದಿಂದ ಮತ್ತು ಚಿಂತನೆ ತನಗೆ ಅಗತ್ಯವಾದ ಆಕರವನ್ನು ಚಳುವಳಿಯ ಮೂಸೆಯಿಂದ ತೆಗೆದುಕೊಳ್ಳಬೇಕು. ಅಂಥಹ ಒಂದು ಸಮ ಸಾಧ್ಯತೆಯನ್ನು ರೂಪಿಸಲಾಗಬೇಕೆನ್ನುವ ನೆಲೆಯಲ್ಲಿ ಸಮತೆಗಾಗಿ ಸಹಪಯಣ–ಮಹಿಳಾ ಕರ್ನಾಟಕ ಸಮಾವೇಶ–2017ನ್ನು ಮಂಡ್ಯದಲ್ಲಿ ಫೆಬ್ರುವರಿ 4 ಮತ್ತು 5 ರಂದು ನಡೆಸಲಾಯಿತು. ●

ಕೇಳಿಸಿದ್ದು

ಅಭಿಷೇಕನ ಮೇಲೆ ಏನು ದೌರ್ಜನ್ಯವಾಗಿದೆ ಅದು ಊನಾಕ್ಕಿಂತ ಹೇಯವಾದದ್ದು ಇಂತಹ ಹೇಯ ಘಟನೆ ನಡೆದ ನಂತರವೂ ಇಲ್ಲಿನ ದಲಿತ ಗೃಹಮಂತ್ರಿ ಅಭಿಷೇಕ್ ನೋಡಲು ಬರುವುದಿಲ್ಲ ಎಂದರೆ, ಅವರನ್ನು ನಾವು ಸೋಲಿಸಬೇಕಿದೆ. ಗುಜಾರಾತ್ ಅನ್ನು ಸಂಘಪರಿವಾರ ಪ್ರಯೋಗಾಲಯ ಅನ್ನುತ್ತಾರೆ. ಅಲ್ಲಿ ನಡೆಯುವುದು ಸಂವಿಧಾನ ಅಲ್ಲ. ಆಳುವುದು ಸಂವಿಧಾನವಲ್ಲ, ಬದಲಾಗಿ ಸಂಘದ ನಿಯಮಗಳು. ಇಷ್ಟಿದ್ದರು ಊನಾ ಘಟನೆ ನಡೆದ ನಂತರ ಪಟೇಲ್ ಸುಮುದಾಯದ ಆನಂದಿಬೇನ್ ಪಟೇಲ್ ಅಲ್ಲಿ ದೌರ್ಜನ್ಯಕೆ ಒಳಗಾದ ಜನರನ್ನು ನೋಡಲು ಬರುತ್ತಾರೆ. ಆದರೆ ಇಲ್ಲಿನ ಕಾಂಗ್ರೇಸ್ ಸರಕಾರದ ದಲಿತ ಗೃಹಮಂತ್ರಿ ಆ ಕೆಲಸಕ್ಕೂ ಮುಂದಾಗುವುದಿಲ್ಲ. ಅಭಿಷೇಕ್ ಘಟನೆಯಲ್ಲಿ ಊನಾಕ್ಕಿಂತ ಹೆಚ್ಚಿನ ಕ್ರೌರ್ಯ ನಡೆದಿದೆ. ಆತನನ್ನು ಬೆತ್ತಲೆಗೊಳಿಸಿ, ಚಪ್ಪಲಿ ಹಾರ ಹಾಕಿ ಅವರನ್ನು ಥಳಿಸಲಾಗಿದೆ. ಇದು ಇಡೀ ದೇಶ ನಾಚಿಕೆ ಪಟ್ಟುಕೊಳ್ಳುವ ಸಂಗತಿ. ಅವರ ಆತ್ಮಭಿಮಾನ ಮತ್ತು ಮನುಷ್ಯ ಗೌರವವನ್ನು ನಾಶಮಾಡಲಾಗಿದೆ. ಈ ದೌರ್ಜನ್ಯಕ್ಕೆ ದೇಶದ ಎಲ್ಲರ ಖಂಡನೆ ದಾಖಲಾಗಬೇಕಿದೆ..

ನಾವು ಕ್ರಾಂತಿಕಾರಿ ಅಂಬೇಡ್ಕರ್ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ನಾವು ಅರ್ಥ ಮಾಡಿಕೊಳ್ಳಬೇಕಿದೆ. ಮೋಹನ್ ಭಾಗವತ್ ಹೊಟ್ಟೆ ಮೇಲಿರುವ ಕೊಬ್ಬು ಅಂಬಾನಿ ಮನೆಯ ಸಾಂಡ್ವಿಚ್ ನಿಂದ ಬಂದಿದ್ದು ಎಂದು ನಾವು ಅರ್ಥ ಮಾಡಿಕೊಳ್ಳಬೇಕು... ನಮಗೆ ಭೂಮಿ, ವಸತಿ, ಮತ್ತು ಶಿಕ್ಷಣಕ್ಕೂ ಹೋರಾಡಬೇಕಿದೆ. ನಾವೆಲ್ಲರೂ ಸೇರಿ ಒಕ್ಕೂಟ ರಚಿಸಿ ಅಂಬೇಡ್ಕರ್, ಫುಲೆ ಮತ್ತು ಭಗತ್ ಸಿಂಗ್ ಆಶಯವನ್ನು ಈಡೇರಿಸುವ ಕೆಲಸ ಮಾಡೋಣ. ಮುಂಬರುತ್ತಿರುವ ಭಗತ್ ಸಿಂಗ್ ಹುತಾತ್ಮ ದಿನದಂದು ನಾವೆಲ್ಲರೂ ಸೇರಿ (ಎಲ್ಲಾ ರಾಜ್ಯದವರು ಸೇರಿ) ಭೂಮಿ, ವಸತಿ ಮತ್ತು ಆಹಾರ ವಿಷಯ ಇಟ್ಟುಕೊಂಡು ಸಮಾವೇಶ–ವಿಚಾರ ಸಂಕಿರಣ ಮಾಡೋಣ, ಒಂದು ದೊಡ್ಡ ಜನಾಂದೋಲನವನ್ನು ರೂಪಿಸೋಣ ಜೈ ಭೀಮ್, ಇಂಕ್ವಿಲಾಬ್ ಜಿಂದಾಬಾದ್.

–ಜಿಗ್ನೇಶ್ ಮೇವಾನಿ (ಚಲೋ ತುಮಕೂರು ಸಮಾವೇಶದಲ್ಲಿ)

ಬೆಂಗಳೂರು ಅಂತರ್‍ರಾಷ್ಟ್ರೀಯ ಸಿನಿಮೋತ್ಸವ...... ಪುಟ 16 ರಿಂದ

ಸಿಕ್ಕಿದ್ದನ್ನು ಕಷ್ಟ-ಸುಖಗಳನ್ನು ಹಂಚಿಕೊಳ್ಳುವ, ಒಬ್ಬರಿಗೊಬ್ಬರು ನೆರವಾಗುವ ಮಾನವೀಯತೆಯೂ ಪುಟಿಯುತ್ತದೆ. ತೀವ್ರ ಮತಬೇಧಗಳಿದ್ದಾಗ್ಯೂ ವ್ಯಾನಿನ ಒಳಗೆ ಇದ್ದವರ 'ಹಣೆಬರಹ' ಪರಸ್ಪರ ತಳುಕು ಹಾಕಿಕೊಂಡಿದೆ ಎನ್ನುವ ಅರಿವು ಮೂಡುವ ಕ್ಷಣಗಳೂ ಇವೆ.

'ಅರಬ್ ವಸಂತ'ದ ಕ್ರಾಂತಿ ವಿಫಲವಾದ ನಂತರದ ತೀವ್ರ ರಾಜಕೀಯ-ಸಾಮಾಜಿಕ ಬಿಕ್ಕಟ್ಟಿನಲ್ಲಿ ಸಿಕ್ಕಿರುವ ಈಜಿಪ್ಟಿಗೆ 'ಕ್ಲ್ಯಾಶ್'ನ ವ್ಯಾನ್ ಒಂದು ರೂಪಕದಂತಿದೆ. ಇಡೀ ಈಜಿಪ್ಟಿನ ಜನ ಈ ವ್ಯಾನಿನಲ್ಲಿ ಸಿಲಕಿಕೊಂಡವರಂತಿದ್ದಾರೆ ಎಂದು ಧ್ವನಿಸುತ್ತದೆ. ಎಲ್ಲಾ ರಾಜಕೀಯ ನಿಲುವುಗಳನ್ನು ಅವುಗಳನ್ನು ಹೊಂದಿರುವವರ ಒಳಗಿನ ವೈರುಧ್ಯಗಳನ್ನು ವಸ್ತುನಿಷ್ಟವಾಗಿ 'ಕ್ಲ್ಯಾಶ್' ಪ್ರಸ್ತುತಪಡಿಸುತ್ತದೆ. 'ಮುಸ್ಲಿಂ ಬ್ರದರ್‌ಹುಡ್'ನ ರಾಜಕಾರಣ ನೇರ ಟೀ-ಕೆಗೆ ಒಳಗಾಗದಿದ್ದರೂ, ಸಿನಿಮಾ ಅದರ ಪಿತೂರಿ ಮಾದರಿಯ ಕೆಲಸದ ರೀತಿಯನ್ನು ಬಿಚ್ಚಿಡುತ್ತದೆ. ವಿರುದ್ಧ ಸೈದ್ಧಾಂತಿಕ-ರಾಜಕೀಯ ನಿಲುವುಗಳಿಗೆ ಅವಕಾಶ ಕೊಡಬೇಕು, ಎಲ್ಲಾ ನಿಲುವುಗಳೂ ಮಾನವೀಯ ಮೌಲ್ಯವನ್ನು ಬಿಟ್ಟುಕೊಡಬಾರದು ಎಂಬ ಧೋರಣೆಯನ್ನು ಸಿನಿಮಾ ಎತ್ತಿಹಿಡಿಯುತ್ತದೆ. ಇದರಿಂದಾಗಿಯೋ ಏನೋ ಈಜಿಪ್ಟಿನಲ್ಲಿ ಈ ಸಿನಿಮಾ ಸಾರ್ವಜನಿಕ ವೀಕ್ಷಣೆಗೆ ಸೆನ್ಸಾರ್ ಅನುಮತಿ ನೀಡಲಾಗಿದ್ದು, (ಬಹುಶಃ ಅವರದೇ ಕಾರಣಗಳಿಗಾಗಿ) ಎಲ್ಲಾ ರಾಜಕೀಯ ನಿಲುವುಗಳವರೂ ಸಿನಿಮಾವನ್ನು ಮೆಚ್ಚಿಕೊಂಡಿದ್ದಾರಂತೆ. 'ಕ್ಲ್ಯಾಶ್' ಇತ್ತೀಚಿನ ವರ್ಷಗಳಲ್ಲಿ ಅರಬ್ ದೇಶಗಳಿಂದ ಬಂದ ಸಿನಿಮಾಗಳಲ್ಲಿ ಅತ್ಯುತ್ತಮ ಸಿನಿಮಾ. ಹಲವು ಸಿನಿಮೋತ್ಸವಗಳಲ್ಲಿ ಅಗ್ರ ಮನ್ನಣೆ ಪಡೆದಿದ್ದು, ಕೇರಳ ಸಿನಿಮೋತ್ಸವದಲ್ಲಿ 'ಸುವರ್ಣ ಚಕೋರಂ'(ಮೊದಲ ಸ್ಥಾನ) ಮತ್ತು ನೋಡುಗರ 'ರಜತ ಚಕೋರಂ' (ಎರಡನೇ ಸ್ಥಾನ) ಪ್ರಶಸ್ತಿ ಪಡೆದಿದೆ ಎಂಬುದೂ ಗಮನಾರ್ಹ.

'ನೆರುದಾ'-ಕಾವ್ಯಮಯ 'ಅರೆ ಜೀವನಚಿತ್ರ-ಅರೆ ಪುರಾಣ'

ಮತ್ತೊಂದು ನೆನಪಿನಲ್ಲುಳಿಯುವ ಸಿನಿಮಾ 'ನೆರುದಾ'. ಚಿಲಿ ದೇಶದ ಪ್ರಸಿದ್ಧ ಎಡಪಂಥೀಯ ಕವಿ ಪಾಬ್ಲೊ ನೆರುದಾರ ಜೀವನಚಿತ್ರ (ಬಯೋಪಿಕ್) ಅನಿಸುವ, ಆದರೆ ಅಲ್ಲದ ವಿಶಿಷ್ಟ ಚಿತ್ರ. 1948ರಲ್ಲಿ ಚಿಲಿ ಅಧ್ಯಕ್ಷ ಕಮ್ಯುನಿಸ್ಟ್-ವಿರೋಧಿ ಕಾನೂನು ತಂದು ದುಡಿಯುವ ಜನರ ಹೋರಾಟದಲ್ಲಿ ತೆ-ಡಗಿದ ಕಮ್ಯುನಿಸ್ಟ್ ಪಕ್ಷದ ಸದಸ್ಯರನ್ನು ಬೇಟೆಯಾಡಲು ತೊಡಗುತ್ತಾರೆ. ಆಗ ಕಮ್ಯುನಿಸ್ಟ್ ಸೆನೆಟರ್ ಆಗಿದ್ದ ನೆರುದಾ ಅವರಿಗೆ ಸೆನೆಟರ್ ಆಗಿ ಬಂಧನದಿಂದ ವಿನಾಯಿತಿ ಇದ್ದರೂ, ಅವರ ಬಂಧನಕ್ಕೆ ವಾರಂಟ್ ಹೊರಡುತ್ತದೆ. ಪಕ್ಷ ಅವರನ್ನು ಬಂಧನ ತಪ್ಪಿಸಲು ದೇಶಾಂತರ ಹೋಗಬೇಕೆಂದು ನಿರ್ದೇಶನ ಕೊಡುತ್ತದೆ. ಅದನ್ನು ಧಿಕ್ಕರಿಸಿ ಸುಮಾರು ಒಂದು ವರ್ಷ ಕಾಲ ಕೆಲ ಕಾಲ ಪಕ್ಷದ ಸಹಾಯದಿಂದ ಕೆಲ ಕಾಲ ತನ್ನಷ್ಟಕ್ಕೆ ಚಿಲಿಯಲ್ಲೇ ಹೆಂಡತಿಯ ಜತೆ ಭೂಗತರಾಗಿದ್ದು ಅವರನ್ನು ಬಂಧಿಸಲು ಬೆನ್ನಟ್ಟುತ್ತಿರುವ ಒಬ್ಬ ವಿಶೇಷ ಪೋಲಿಸ್ ಅಧಿಕಾರಿಯ ನಾಯಕತ್ವದ ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಕೊನೆಗೆ ಅರ್ಜೆಂಟಿನಾಕ್ಕೆ ದೇಶಾಂತರ ಹೋಗುವುದು ಸಿನಿಮಾದ ಹಂದರ.

ಇದು ನೆರುದಾರ ಜೀವನದ ಒಂದು ಅಷ್ಟೇನು ಪರಿಚಯವಿರದ ಒಂದು ಸಣ್ಣ ಅವಧಿ. ಮಾತ್ರವಲ್ಲ, ಇಲ್ಲಿ ಬರುವಂಥದು ಪೂರ್ಣ ವಾಸ್ತವ ನಡೆದ ಘಟನೆಗಳೂ ಅಲ್ಲ. ನೆರುದಾರ ನಂತರ ಬರುವ ಪ್ರಮುಖ ಪಾತ್ರ ವಿಶೇಷ ಪೋಲಿಸ್ ಅಧಿಕಾರಿಯ ಪಾತ್ರ ಕಾಲ್ಪನಿಕವಾದ್ದು. ಅದು ಕಾಲ್ಪನಿಕ ಅಂತ ಆತನದೇ ವಾಯ್ಸ್-ಓವರ್ ನಲ್ಲಿ ಸ್ಪಷ್ಟವಾಗುತ್ತದೆ. ಇಡೀ ಚಿತ್ರದಲ್ಲಿ ಬರುವ ಕೆಲವು ಘಟನಾವಳಿಗಳು ವಾಸ್ತವ, ಕೆಲವು ಕಾಲ್ಪನಿಕ. 'ನೆರುದಾ' 'ಜೀವನಚಿತ್ರ-ವಿರೋದಿ' (ಆಂಟಿ-ಬಯೋಪಿಕ್) ಚಿತ್ರಣ ಎನ್ನುತ್ತಾರೆ ಅದರ ನಿರ್ದೇಶಕ. ನೆರುದಾ ಅವರದು ಸಂಕೀರ್ಣ ವ್ಯಕ್ತಿತ್ವ. ಆತ ಮಹಾನ್ ಕವಿ, ಕ್ರಾಂತಿಕಾರಿ ಕಮ್ಯುನಿಸ್ಟ್ ರಾಜಕಾರಣಿ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ, ಪತ್ತೇದಾರಿ ಕಾದಂಬರಿಗಳಲ್ಲಿ, ಅಡುಗೆಯಲ್ಲಿ, ವೈನ್ ಗಳಲ್ಲಿ ವಿಶೇಷ ಆಸಕ್ತಿ ಹಾಗೂ ಪರಿಣತಿ ಇರುವ ಸಂಕೀರ್ಣ ವ್ಯಕ್ತಿತ್ವ ಆತನದು. ಆತನ ವ್ಯಕ್ತಿತ್ವವನ್ನು ಮಾಮೂಲಿ ಜೀವನಚಿತ್ರದ ಮಾದರಿಯಿಂದ ಸೆರೆಹಿಡಿಯಲಾಗದು. ವಿಶೇಷ ಪೋಲಿಸ್ ಅಧಿಕಾರಿಯ ಪಾತ್ರ ನೆರುದಾ-ಮಾದರಿಯ ಸೃಷ್ಟಿ, ಎನ್ನುತ್ತಾರೆ ನಿರ್ದೇಶಕ.

ನೆರುದಾ ಭೂಗತರಾಗಿದ್ದು ಪೋಲಿಸ್ ಬೇಟೆಯಿಂದ ತಪ್ಪಿಸಿಕೊಂಡು ತಿರುಗಾಟದಲ್ಲಿರುವಾಗ, ನೆರುದಾರ ಅತಿ ಹೆಚ್ಚು ಪ್ರಸಿದ್ಧವಾದ ಪ್ರೇಮಕಾವ್ಯದ ಬದಲು, ಸಿನಿಮಾದದಲ್ಲಿ ಬರುವಂತಹದು ಅವರ ಶೋಷಣೆ-ಅನ್ಯಾಯಗಳ ವಿರುದ್ಧ ಆಕ್ರೋಶ-ಸಿಟ್ಟಿನ ಕವನಗಳು. ಅವರ ಆಕ್ರೋಶ-ಸಿಟ್ಟಿನ ಕವನಗಳನ್ನು ದುಡಿಯುವ ಜನರು ತಮ್ಮ ಕೆಲಸದ ಸ್ಥಳಗಳಲ್ಲಿ, ಸಭೆಗಳಲ್ಲಿ, ಪಕ್ಷದ ಕಾರ್ಯಕರ್ತರು ತಮ್ಮ ಸಭೆ-ಪ್ರತಿಭಟನೆಗಳಲ್ಲಿ, ಜೈಲುಗಳಲ್ಲಿ, ಸೂಳೆಯರು ಸೂಳೆಕೇರಿಗಳಲ್ಲಿ ವಾಚಿಸುತ್ತಾರೆ. ನೆರುದಾರ ಬೇಟೆ, ಅವರ ತಿರುಗಾಟ, ವಿಶೇಷ ಪೋಲಿಸ್ ಅಧಿಕಾರಿಯ ಅಣಕ, ದುಡಿಯುವ ಜನರ ಬೇಟೆ ಮತ್ತು ಅವರ ಪ್ರತಿರೋಧದ ಪ್ರತೀಕವಾಗುತ್ತದೆ. ನೆರುದಾ ಅವರನ್ನು ಜನರ ಕವಿಯಾಗಿ ಚಿತ್ರಿಸುವ 'ನೆರುದಾ' ಕಾವ್ಯಮಯವಾದ 'ಅರೆ-ಜೀವನಚಿತ್ರ, ಅರೆ-ಪುರಾಣ' ಸಿನಿಮಾ ನೆನಪಿನಲ್ಲಿ ಉಳಿಯುತ್ತದೆ.

ಹಲವು ಜಗತ್ತುಗಳಿಗೆ 'ಕಿಂಡಿ'

ಈ ಮೂರು ಸಿನಿಮಾಗಳಲ್ಲದೆ ನನಗೆ ಇಷ್ಟವಾದ ಇತರ ಮೂರು ಚಿತ್ರಗಳೆಂದರೆ – ಎರಡು ಕೊರಿಯಾಗಳ ನಡುವೆ ಸಂಕೀರ್ಣ ಸಂಬಂಧ-ವಿವಾದಗಳ ಬಗೆಗಿನ 'ದಿ ನೆಟ್' ಮತ್ತು ಯಾರೂ ಹೆಚ್ಚೇನೂ ಕೇಳಿರದ 19ನೇ ಶತಮಾನದ ಮಹಿಳಾ ತತ್ವಶಾಸ್ತ್ರಜ್ಞೆ ಲೌ ಆಂಡ್ರಿಯಾಸ್ ಬಗೆಗಿನ ಅಸಾಮಾನ್ಯ ಜೀವನಚಿತ್ರ 'ಇನ್ ಲೌ ವಿದ್ ಲೌ'(ಜರ್ಮನಿ) ಹಾಗೂ ಅಲ್ಜೀರಿಯಾದ ರೈತನೊಬ್ಬ ತನ್ನ ಹಸುವನ್ನು ಪ್ಯಾರೀಸ್ ಕೃಷಿ ಮೇಳಕ್ಕೆ 'ಸೌಂದರ್ಯ ಸ್ಪರ್ಧೆ'ಗೆ ಕಾಲ್ನಡಿಗೆಯಲ್ಲಿ ಒಯ್ಯುವ ಪಯಣದಲ್ಲಿ ಫ್ರಾನ್ಸ್ ಅನ್ವೇಷಣೆ ಮಾಡುವ 'ಒನ್ ಮ್ಯಾನ್ ಎಂಡ್ ಹಿಸ್ ಕೌ'(ಅಲ್ಜೀರಿಯಾ). ಇವಲ್ಲದೆ ಕೊ-ರಿಯಾದ ಜಪಾನಿ ಫ್ಯಾಸಿಸ್ಟ್ ಆಳ್ವಿಕೆಯ ವಿರುದ್ಧದ ವಿಮೋಚನಾ ಹೋರಾಟದ ಕಥನದ 'ಏಜ್ ಆಫ್ ಶ್ಯಾಡೋಸ್', ಅರಬ್ ದೇಶಗಳ ರಾಜಕೀಯ ಬಿಕ್ಕಟ್ಟಿನ ವೈಯಕ್ತಿಕ ಆಯಾಮಗಳ ಬಗೆಗಿನ 'ಇನ್ ದಿ ಲಾಸ್ಟ್ ಡೇಸ್ ಆಫ್ ಸಿಟಿ'(ಈಜಿಪ್ಟ್); ಮಹಿಳೆಯ ಮೇಲೆ ದೌರ್ಜನ್ಯಗಳ ವಿರುದ್ಧ ಪ್ರತಿರೋಧ ಬಗೆಗಿನ 'ಇನ್ ಬಿಟ್ವೀನ್' (ಪ್ಯಾಲೆಸ್ಟೀನ್), ಸಾಮಾನ್ಯ ದುಡಿಯುವ ಜನರ ಜೀವನದ ತಾತ್ವಿಕತೆಯ ಚಿತ್ರಣ ನೀಡುವ 'ಟ್ರೈನ್ ಡ್ರೈವರ್ಸ್ ಡೈರಿ'(ಸರ್ಬಿಯಾ), 'ಲಿಫ್ಟ್ ಮನ್'(ಕನ್ನಡ); ಮಾನವ ಸಂಬಂಧಗಳ ಹಲವು ಮಗ್ಗಲುಗಳನ್ನು ಶೋಧಿಸುವ – 'ಇಟ್ ಈಸ್ ಓನ್ಲಿ ಎಂಡ್ ಆಫ್ ದಿ ವರ್ಲ್ಡ್'(ಕೆನಡಾ), 'ಯುವರ್ ಸೆಲ್ಫ್ ಅಂಡ್ ಯುವರ್ಸ್', 'ದಿ ನ್ಯಾರೋ ಪಾಥ್'(ಮಲಯಾಳಂ), 'ಲಿಲಿ ಲೇನ್'(ಹಂಗರಿ), 'ಪರ್ಸನಲ್ ಅಫೇರ್ಸ್'(ಪ್ಯಾಲೆಸ್ಟೀನ್); ಹಲವು ದೇಶಗಳ ಜನರ ಬದುಕಿನ ಕೆಲವು ಆಯಾಮಗಳನ್ನು ಅನಾವರಣಗೊಳಿಸುವ – 'ಮಾ ರೋಸ'(ಫಿಲಿಪ್ಪೀನ್ಸ್), ಗ್ರಾಜುಯೇಶನ್ (ರೊಮಾನಿಯಾ), ಸಿಂಕ್ (ದ. ಆಫ್ರಿಕಾ), ಗಾಡ್ ಲೆಸ್(ಬಲ್ಗೇರಿಯಾ).

ಸಿನಿಮೋತ್ಸವದಲ್ಲಿ ಸಿನಿಮಾ ಪ್ರದರ್ಶನಗಳಲ್ಲದೆ ಸಿನಿಮಾ ಪರಿಣತರದಿಂದ ಸಿನಿಮಾ ಮಾಡುವ ಹಲವು ಆಯಾಮಗಳ ಬಗ್ಗೆ ಮಾಸ್ಟರ್ ಕ್ಲಾಸುಗಳು, ವಿಚಾರ ಸಂಕಿರಣಗಳು ನಡೆದವು. ಜನವಾದಿ ಮಹಿಳಾ ಸಂಘಟನೆಯ ಜತೆ ಜಂಟಿಯಾಗಿ ಸಂಘಟಿಸಿದ 'ಸಿನಿಮಾ ಜಗತ್ತು ಮತ್ತು ವಿಷಯಗಳಲ್ಲಿ ಸ್ತ್ರೀ ಶಕ್ತಿ' ಇವುಗಳಲ್ಲಿ ಒಂದಾಗಿತ್ತು. ಫಿಲಂ ನಿರ್ದೇಶಕಿಯರಾದ ಕರ್ನಾಟಕದ ಕವಿತಾ ಲಂಕೇಶ್ ಮತ್ತು ಘಾನಾದ ಪ್ರೆಸಿಲ್ಲಾ ಅನಾನಿ ಚರ್ಚೆಯಲ್ಲಿ ಭಾಗವಹಿಸಿದ್ದರು.

ಒಟ್ಟಾರೆಯಾಗಿ ಹೇಳುವುದಾದರೆ, ಈ ಬೆಂಗಳೂರು ಸಿನಿಮೋತ್ಸವ (Biffes-9) ಇಲ್ಲೇ ಇಡೀ ಜಗತ್ತನ್ನೇ ನೋಡಲು ಅನುವು ಮಾಡಿಕೊಡುವ ಕಿಂಡಿಯಾಗಿತ್ತು. ಜಗತ್ತಿನ ಇತರ ದೇಶಗಳ ಜನರ ಇಂದಿನ ಹಿಂದಿನ ಬದುಕಿನ ಹಲವು ಆಯಾಮಗಳಿಗೆ ಮಾತ್ರವಲ್ಲ, ನಮ್ಮದೇ ದೇಶದ ಜನರ ವೈವಿಧ್ಯಮಯ ಬದುಕಿನ ಹಲವು ಆಯಾಮಗಳಿಗೆ, ಹಲವು ಪ್ರಸಿದ್ಧ ವ್ಯಕ್ತಿಗಳ ಘಟನೆಗಳಿಗೆ, ಮನುಷ್ಯ ಸಂಬಂಧಗಳಿಗೆ, ಹಲವು ದೇಶಗಳನ್ನು ಇಂದು ಬಾಧಿಸುತ್ತಿರುವ ಹಾಗೂ ಆಶ್ಚರ್ಯಜನಕ ಸಾಮ್ಯಗಳಿರುವ ಮೂಲಭೂತವಾದ, ಜನಾಂಗೀಯವಾದ, ಆಕ್ರಾಮಕ ರಾಷ್ಟ್ರವಾದ, ಮಹಿಳೆಯರ ಮೇಲೆ ದೌರ್ಜನ್ಯದಂತಹ ಹಲವು ಸಮಸ್ಯೆಗಳ ಮತ್ತು ಅವುಗಳ ವಿರುದ್ಧ ಗಟ್ಟಿ ಪ್ರತಿರೋಧಗಳ, ಮುಂತಾದ ಹಲವು ಅದ್ಭುತ 'ಜಗತ್ತು'ಗಳಿಗೆ ಒಂದು ಅಪೂರ್ವ ಕಿಂಡಿಯಾಗಿತ್ತು. ●

ಮಾನ್ಯ ಜಿಗ್ನೇಶ್ ಮೇವಾನಿಯವರೇ...

ನೀವು ಇಂದಿನಿಂದ ಒಂದು ವಾರ ಕರ್ನಾಟಕ ಪ್ರವಾಸದಲ್ಲಿದ್ದೀರಿ ಎಂದು ತಿಳಿಯಿತು. ನಿಮ್ಮ ಒಂದು ವಾರಗಳ ಕಾಲದ ರಾಜ್ಯ ಪ್ರವಾಸದ ಕಾರ್ಯಕ್ರಮಗಳ ಕುರಿತು ಸಹಜ ಕುತೂಹಲದಿಂದ ವಿವರಗಳಿಗಾಗಿ ತಡಕಾಡಿದಾಗ ಅಚ್ಚರಿಯಾಯ್ತು, ಜೊತೆಗೆ ನಿರಾಶೆಯೂ...

ನೀವು ಪ್ರಥಮ ಬಾರಿ ರಾಜ್ಯಕ್ಕೆ ಭೇಟಿ ನೀಡಿದ್ದು ಉಡುಪಿ ಕಾರ್ಯಕ್ರಮದ ಮೂಲಕ. ಈ ಬಾರಿ ಅದೇ ಉಡುಪಿಯ ಅವಳಿ ನಗರ ಮಂಗಳೂರಿನ ಮೂಲಕ ರಾಜ್ಯ ಪ್ರವಾಸ ಆರಂಭಿಸುತ್ತಿದ್ದೀರಿ. ಅಲ್ಲಿಂದ ಬೆಂಗಳೂರು, ಬೆಂಗಳೂರಿಂದ ತುಮಕೂರ ಚಲೋ, ಆನಂತರ ಎರಡು ದಿನಗಳ ಕಾಲ ಗೌರಿ ಲಂಕೇಶ್ ಜೊತೆ ಚಿಲ್. (ಹಾಗಂತ ಗೌರಿಯವರೇ ಬರೆದುಕೊಂಡಿದ್ದಾರೆ) ನೀವು ತುಮಕೂರು ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಎರಡು ದಿನಗಳನ್ನು ಹಿರಿಯರಾದ (ತಾಯಿ ಸಮಾನರಾದ) ಗೌರಿಯವರೊಂದಿಗೆ ಸಂತೋಷವಾಗಿ ಕಳೆಯುವುದು ನಮಗೆ ಖುಷಿಯ ವಿಚಾರವೇ. ಆದರೆ ನೀವು ಮಂಗಳೂರಿನಲ್ಲಿ ಭಾಗವಹಿಸುತ್ತಿರುವ ಕಾರ್ಯಕ್ರಮ ಮಾತ್ರ ನಮಗೆ ಬೇಸರ, ಆತಂಕ ಉಂಟು ಮಾಡಿದೆ. ನಿಮ್ಮ ಬದ್ಧತೆಯ ಕುರಿತು ಅನುಮಾನವನ್ನು ಹುಟ್ಟಿಸಿದೆ.

ನೀವು ಅಂದು ಉಡುಪಿ ಭೇಟಿಯಲ್ಲಿ ಕೋಮುವಾದಿಗಳ ವಿರುದ್ಧ ಗುಡುಗಿದ್ದೀರಿ. ಗುಜರಾತಿನಂತಹ ಕೋಮುವಾದದ ಪ್ರಯೋಗಶಾಲೆಯಲ್ಲಿ ಸಂಘಪರಿವಾರಕ್ಕೆ ಸೆಡ್ಡುಹೊಡೆದು ನಿಂತ ನಿಮ್ಮ ಧೈರ್ಯ, ಸಂಘಟನಾ ಚಾತುರ್ಯ, ಹೋರಾಟದ ಕೆಚ್ಚು ಕಂಡಿದ್ದ ನಮಗೆ ಉಡುಪಿಯಲ್ಲಿ ಕೋಮುಶಕ್ತಿಗಳ ವಿರುದ್ಧದ ಸಮಾವೇಶದಲ್ಲಿ ನೀವು ಭಾಗವಹಿಸಿದ್ದು. ಅಲ್ಲಿ ನಿರ್ಭಿಡೆಯಿಂದ ಮಾತಾಡಿದ್ದು, ಎಲ್ಲಾ ವಿಧದ ಕೋಮುವಾದವೂ ಅಪಾಯಕಾರಿ ಎಂದು ಮಾಧ್ಯಮಗಳ ಜೊತೆ ತಮ್ಮ ವಿಚಾರಗಳನ್ನು ಹಂಚಿಕೊಂಡದ್ದು ಕೋಮುವಾದದ ಅಪಾಯಗಳ ವಿರುದ್ಧ ಸೆಣಸುವ ಯುವ ತಲೆಮಾರಿಗೆ ನಿಮ್ಮ ಬಗ್ಗೆ ಅಪಾರ ಗೌರವ ಮೂಡುವಂತಾಗಿತ್ತು. ಅದಾಗಿ ನಾಲ್ಕೇ ತಿಂಗಳಲ್ಲಿ ಮತ್ತೆ ನೀವು ಕರ್ನಾಟಕದ ಗುಜರಾತ್ ಮಂಗಳೂರಿಗೆ ಪ್ರೇಮಿಗಳ ದಿನವಾದ ಪೆಬ್ರವರಿ ಹದಿನಾಲ್ಕರಂದು ಬರುತ್ತಿದ್ದೀರಿ. ಪ್ರೇಮಿಗಳ ದಿನದ ಬದ್ಧ ವಿರೋಧಿಗಳು, ಮುಸ್ಲಿಂ ಕೋಮುವಾದದ ಅಧಿಕೃತ ವಾರಿಸುದಾರರೂ, ತಮ್ಮ ಸಂಘಟಿತ ಕೋಮುವಾದಿ ಸಿದ್ಧಾಂತಕ್ಕಾಗಿಯೇ ಉಡುಪಿ ಚಲೋ ಕಾರ್ಯಕ್ರಮದಿಂದ ಹೊರಗಿಡಲ್ಪಟ್ಟಿದ್ದ PFI ನ ವಿದ್ಯಾರ್ಥಿ ವೇದಿಕೆ CFI ನ ವೇದಿಕೆಯಲ್ಲಿ ಕಾಣಿಸಿಕೊಳ್ಳಲಿದ್ದೀರಿ. ಇದು ತಿಳಿಯದೇ ಆದ ತಪ್ಪು ಅಂತ ನಮಗನಿಸುತ್ತಿಲ್ಲ. ಆದರೂ ನಿಮ್ಮ ಗಮನಕ್ಕಿರಲಿ ಅಂತ ಒಂದೆರಡು ಉದಾಹರಣೆಗಳು.

CFI ನ ಮಾತೃ ಸಂಘಟನೆ PFI (ಅದರ ಪೂರ್ವಾಶ್ರಮದ ಹೆಸರು ಕೆ ಎಫ್ ಡಿ) ಈ ಹಿಂದೆ ಕೋಮುಸೌಹರ್ದ ವೇದಿಕೆಯ ಸಹಭಾಗಿ ಸಂಘಟನೆಯಾಗಿತ್ತು. (ನಿಮ್ಮ ಪಾಲಿಗೆ ತಾಯಿಯಾಗಿರುವ ಗೌರವಾನ್ವಿತ ಗೌರಿ ಲಂಕೇಶ್ ಕೋಮುಸೌಹರ್ದ ವೇದಿಕೆಯ ಪ್ರಮುಖರು, ನಮ್ಮ ಮಾತುಗಳನ್ನು ಅವರಲ್ಲಿ ಖಚಿತ ಪಡಿಸಿಕೊಳ್ಳಬಹುದು) ಹಲವು ವರ್ಷಗಳ ಕಾಲ ಕೋಮುಸೌಹರ್ದ ವೇದಿಕೆಯ ಪ್ರಮುಖ ಶಕ್ತಿಯಾಗಿದ್ದ PFI ಇಂದು ಕೋಮು ಸೌಹರ್ದ ವೇದಿಕೆಯಲ್ಲಿಲ್ಲ. ಅದಕ್ಕೆ ಕಾರಣವಾದ ಅಂಶಗಳು PFI ಗುಪ್ತವಾಗಿ, ಸಂಘಟಿತವಾಗಿ ಆಚರಿಸಿಕೊಳ್ಳುತ್ತಾ ಬಂದಿದ್ದ ಕೋಮುವಾದಿ ಸಿದ್ಧಾಂತ. ಅದರ ಭಾಗವಾಗಿ ಅದು ನಡೆಸಿದ ಕೋಮುವಾದಿ ಕೃತ್ಯಗಳು, ನೈತಿಕ ಪೊಲೀಸ್ ಗಿರಿ.

PFI ಒಂದು ಕೋಮುವಾದಿ ಸಂಘಟನೆ, ಇದರ ಚಟುವಟಿಕೆ RSS, ಸಂಘಪರಿವಾರದ ಕೋಮುರಾಜಕಾರಣಕ್ಕೆ ಪೂರಕವಾಗಿದೆ. ಎಂದು ಕೋಮುಸೌಹರ್ದ ವೇದಿಕೆಯ ಕೆಲವು ಪದಾಧಿಕಾರಿಗಳು ತಕರಾರು ಎತ್ತುತ್ತಿದ್ದರೂ ಅದಕ್ಕೆ ಆಧಾರಗಳಿಲ್ಲ ಎಂಬ ನೆಪಗಳನ್ನು ಮುಂದಿಟ್ಟು PFI ಯನ್ನು ಕೋಮು ಸೌಹರ್ದ ವೇದಿಕೆಯಲ್ಲಿ ಉಳಿಸಿಕೊಳ್ಳಲಾಗಿತ್ತು. ಆದರೆ ಐದಾರು ವರ್ಷಗಳ ಹಿಂದೆ ಮೈಸೂರಿನಲ್ಲಿ ನಡೆದ ಕೋಮುಗಲಭೆಯಲ್ಲಿ RSS ನಂತೆ, PFI ಸಹ ತನ್ನ ಕೊಡುಗೆ ನೀಡಿದ್ದು ಆಧಾರ ಸಹಿತ ಬಹಿರಂಗವಾಯಿತು. ಆ ನಂತರ ಮಂಗಳೂರಿನ ವಿಟ್ಲ ಸಮೀಪ ಮುಸ್ಲಿಂ ಬಡ ವಿಧವೆಯೊಬ್ಬಳಿಗೆ ಸಹಾಯ ಮಾಡಿದ ಕಾರಣಕ್ಕೆ ಹಿಂದು ಸಮುದಾಯಕ್ಕೆ ಸೇರಿದ ಪತ್ರಕರ್ತನೊಬ್ಬನಿಗೆ PFI ಕಾರ್ಯಕರ್ತರು ಬಹಿರಂಗವಾಗಿ ಮಾರಣಾಂತಿಕ ಹಲ್ಲೆ ನಡೆಸಿದ್ದು, ತಮ್ಮ ಈ ಅನೈತಿಕ ಪೊಲೀಸ್ ಗಿರಿಯನ್ನು ಚಿತ್ರೀಕರಿಸಿ ತಮ್ಮ ಸಾಧನೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟದ್ದು ಕೋಲಾಹಲಕ್ಕೆ ಕಾರಣವಾಗಿತ್ತು. ಈ ಹಿಂದೆ ಹಲವು ಇಂತಹ ಮೋರಲ್ ಪೊಲೀಸಿಂಗ್ ನಡೆಸಿದ ಆರೋಪಗಳಿದ್ದರೂ ಸಾಕ್ಷ್ಯಗಳಿಲ್ಲ ಎಂಬ ಕಾರಣಕ್ಕೆ PFI ಯನ್ನು ತಮ್ಮ ಸಹಭಾಗಿಯನ್ನಾಗಿ ಉಳಿಸಿಕೊಂಡಿದ್ದ ಕೋಮುಸೌಹರ್ದ ವೇದಿಕೆ ವಿಟ್ಲ ಘಟನೆಯಿಂದ ತೀವ್ರ ಮುಜುಗರುಕ್ಕೆ ಒಳಗಾಯಿತು, ಮಾತ್ರವಲ್ಲ PFI ಒಂದು ಮತೀಯ ಮೂಲಭೂತವಾದಿ, ಕೋಮುವಾದಿ ಸಂಘಟನೆ ಎಂದು ಪರಿಗಣಿಸಿ ಸೌಹರ್ದ ವೇದಿಕೆಯಿಂದ ಹೊರಹಾಕಿತು (ಇದೆಲ್ಲವನ್ನು ಗೌರಿಯವರು ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ಭಾವಿಸುತ್ತೇವೆ)

ಈ ಎಲ್ಲಾ ಕಾರಣಕ್ಕೆ ಉಡುಪಿ ಚಲೋ ದಿಂದ ಹೊರಗಿಡಲ್ಪಟ್ಟ ಸಂಘಟನೆಯ ವಿದ್ಯಾರ್ಥಿ ವೇದಿಕೆಯಲ್ಲಿ ಈಗ ನೀವು ನಿಂತುಕೊಳ್ಳಲಿದ್ದೀರಿ. ಮಂಗಳೂರಿನ, ಉಡುಪಿ, ಶಿವಮೊಗ್ಗ, ಕೊಡಗು ಸೇರಿದಂತೆ ಕಾಲೇಜುಗಳಲ್ಲಿ ಹಿಂದು ಮುಸ್ಲಿಂ ವಿಭಜನೆಗೆ ABVP ಯೊಂದಿಗೆ ಸ್ಪರ್ಧೆಗೆ ಬೀಳುವ, ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾ ತೊಡುವುದನ್ನು ಖಾತರಿ ಪಡಿಸುವ, ಅವರ ಚಲನವಲನಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವ, ಸಹಪಾಠಿ ಹಿಂದು ವಿದ್ಯಾರ್ಥಿಗಳೊಂದಿಗೆ ಕನಿಷ್ಟ ಮಾತಾಡುವುದನ್ನೂ ಸಹಿಸದ ಪ್ರೇಮವಿರೋಧಿ ABVP ಯ ಮುಸ್ಲಿಂ ವರ್ಷನ್ CFI ವೇದಿಕೆಯಲ್ಲಿ ಉತ್ಕಟ ಜೀವನ ಪ್ರೇಮದ ತಾವು ಪ್ರೇಮಿಗಳ ದಿನದಂದೇ ಕಾಣಿಸಿಕೊಳ್ಳುತ್ತಿರುವುದು ಪರಿಸ್ಥಿತಿಯ ವ್ಯಂಗ್ಯವೋ, ಯುವ ಹೋರಾಟಗಾರರಾದ ತಮ್ಮ ಆತ್ಮ ವಂಚನೆಯೋ ಅಥವಾ ನಿಮ್ಮನ್ನು ದಾರಿ ತಪ್ಪಿಸುತ್ತಿರುವ ಕರ್ನಾಟಕದ ತಮ್ಮ ಆಪ್ತರ ಅವಕಾಶವಾದಿತನವೋ, ನಿಮ್ಮ ವೇದಿಕೆ ಮೋಹವೋ... ಒಟ್ಟು ಯುವ ತಲೆಮಾರಿನ ಜಾತ್ಯಾತೀತ, ಜೀವಪರ ಮನಸ್ಸುಗಳಲ್ಲಿ ಒಂದು ಆಶಾವಾದವನ್ನು ಮೂಡಿಸಿದ್ದ ಜಿಗ್ನೇಶ್ ಮೇವಾನಿಯಿಂದ ಇಂತಹ ಒಂದು ನಡೆಯನ್ನು, ಜಾತ್ಯಾತೀತ ಹೋರಾಟಕ್ಕೆ ಒಂದು ಬಲಿಷ್ಟ ಪ್ರಹಾರವನ್ನು ನಾವ್ಯಾರು ನಿರೀಕ್ಷೆ ಮಾಡಿರಲಿಲ್ಲ. ಮೊದಲ ಭೇಟಿಯಲ್ಲಿ ನೀವು ಮೂಡಿಸಿದ ಆಶಾವಾದ ಎರಡನೇ ಭೇಟಿಯಲ್ಲಿ ತಾವೇ ಕೈಯಾರೆ ಕಡವಿಹಾಕಿದ್ದು ನಮಗೆಲ್ಲ ಅಪಾರ ನೋವು ತಂದಿದೆ. ಒಟ್ಟು ಹತ್ತರಲ್ಲಿ ನೀವೂ ಹನ್ನೊಂದಾದಿರಿ. ನಿಮ್ಮ ಈ ಭಾರಿಯ ಪ್ರವಾಸ ನಿಮಗೆ ಸಂತಸ ತರಲಿ. ಚಿಲ್ ಆಗಲಿ.

ಇತೀ,

ನಿಮ್ಮ ನಡೆಯಿಂದ ಬೇಸರಗೊಂಡ ಜಾತ್ಯಾತೀತ ಕಾರ್ಯಕರ್ತರು.

JANASHAKTHI KANNADA VARA PATRIKE Feb 20-26, 2017 Price : Rs. 10/- Date of Publication : 17 February 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಇತ್ತೀಚೆಗೆ ನಡೆದ 9ನೇ ಬೆಂಗಳೂರು ಅಂತರ್ರಾಷ್ಟ್ರೀಯ ಸಿನಿಮೋತ್ಸವ (Biffes-9) ಇಲ್ಲೇ ಇಡೀ ಜಗತ್ತನ್ನೇ ನೋಡಲು ಅನುವು ಮಾಡಿಕೊಡುವ ಕಿಂಡಿಯಾಗಿತ್ತು. ಜಗತ್ತಿನ ಇತರ ದೇಶಗಳ ಜನರ ಇಂದಿನ ಹಿಂದಿನ ಬದುಕಿನ ಹಲವು ಆಯಾಮಗಳಿಗೆ ಮಾತ್ರವಲ್ಲ, ನಮ್ಮದೇ ದೇಶದ ಜನರ ವೈವಿಧ್ಯಮಯ ಬದುಕಿನ ಹಲವು ಆಯಾಮಗಳಿಗೆ, ಮನುಷ್ಯ ಸಂಬಂಧಗಳಿಗೆ, ಹಲವು ದೇಶಗಳನ್ನು ಇಂದು ಬಾಧಿಸುತ್ತಿರುವ ಹಾಗೂ ಆಶ್ಚರ್ಯಜನಕ ಸಾಮ್ಯಗಳಿರುವ ಮೂಲಭೂತವಾದ, ಜನಾಂಗೀಯವಾದ, ಆಕ್ರಾಮಕ ರಾಷ್ಟ್ರವಾದ, ಮಹಿಳೆಯರ ಮೇಲೆ ದೌರ್ಜನ್ಯದಂತಹ ಹಲವು ಸಮಸ್ಯೆಗಳ ಮತ್ತು ಅವುಗಳ ವಿರುದ್ಧ ಗಟ್ಟಿ ಪ್ರತಿರೋಧಗಳ, ಹಲವು ಅದ್ಭುತ 'ಜಗತ್ತು'ಗಳಿಗೆ ಒಂದು ಅಪೂರ್ವ ಕಿಂಡಿಯಾಗಿತ್ತು. ಅಂತಹ ಕಿಂಡಿಯಲ್ಲಿ ಕಂಡ ಕೆಲವು ದೃಶ್ಯಗಳು ಇಲ್ಲಿವೆ.





ಬೆಂಗಳೂರು ಅಂತರ್ರಾಷ್ಟ್ರೀಯ ಸಿನಿಮೋತ್ಸವ-2017

'ಜಗತ್ತು'ಗಳನ್ನು ನೋಡಲು ಒಂದು ಅಪೂರ್ವ ಕಿಂಡಿ

ವಸಂತರಾಜ ಎನ್.ಕೆ.

ಇತ್ತೀಚೆಗೆ (ಫೆ. 2-9) ಬೆಂಗಳೂರು ಮತ್ತು ಮೈಸೂರುಗಳಲ್ಲಿ ನಡೆದ 9ನೇ ಬೆಂಗಳೂರು ಅಂತರ್ರಾಷ್ಟ್ರೀಯ ಸಿನಿಮೋತ್ಸವ (ಬಿಐಎಫ್‌ಎಫ್‌ಇಎಸ್-9) ದಲ್ಲಿ 15 ಪರದೆಗಳಲ್ಲಿ 17 ವಿಭಾಗಗಳಲ್ಲಿ 60 ದೇಶಗಳ 230 ಸಿನಿಮಾಗಳ 450 ಪ್ರದರ್ಶನ ಮಾಡಲಾಯಿತು. ಇದು ಸಂಖ್ಯಾತ್ಮಕವಾಗಿ (2016ರಲ್ಲಿ 174 ಸಿನಿಮಾಗಳಿಗೆ ಹೋಲಿಸಿದರೆ) ಹೆಚ್ಚು. ಮಾತ್ರವಲ್ಲ ಗುಣಾತ್ಮಕವಾಗಿಯೂ, ಸಿನಿಮಾ ನೋಡುಗರ ಸಂಖ್ಯೆ, ಹಿನ್ನೆಲೆಯಲ್ಲಿ ವೈವಿಧ್ಯತೆಯ ದೃಷ್ಟಿಯಿಂದಲೂ ಒಂದು ಹೆಜ್ಜೆ ಮುಂದೆ ಹೋಗಿದೆ ಎಂಬುದು ಸಾಮಾನ್ಯ ಅಭಿಪ್ರಾಯ. ನೋಡುಗರಲ್ಲಿ ಯುವಜನರ ಪ್ರಮಾಣ ಇನ್ನಷ್ಟು ಹೆಚ್ಚಿದ್ದೂ ಗಮನಾರ್ಹವಾಗಿತ್ತು.

ಸಿನಿಮೋತ್ಸವದ 17 ವಿಬಾಗಗಳಲ್ಲಿ ನಾಲ್ಕು (ಏಶ್ಯನ್, ಚಿತ್ರಭಾರತಿ, ಕನ್ನಡ ಮತ್ತು ಕನ್ನಡ ಜನಪ್ರಿಯ ಮನೋರಂಜನಾ ಸಿನಿಮಾ) ವಿಭಾಗಗಳು ಸ್ಪರ್ಧಾತ್ಮಕವಾಗಿದ್ದವು. 90ಕ್ಕೂ ಹೆಚ್ಚು ಸಿನಿಮಾಗಳಿದ್ದ ಜಗತ್ತಿನ ಸಿನಿಮಾ ವಿಭಾಗ ಅತ್ಯಂತ ದೊಡ್ಡದು ಮತ್ತು ನೋಡುಗರಿಗೆ ಆಕರ್ಷಕವಾಗಿತ್ತು. ಪ್ರತಿ ಬಾರಿ ಇರುವಂತೆ ಕೆಲವು ದೇಶಗಳ (ಈಜಿಪ್ಟ್, ವಿಯೇಟ್ನಾಂ ಮತ್ತು ಲಕ್ಸಂಬರ್ಗ್) ಮೇಲೆ ವಿಶೇಷ ಒತ್ತು ಇತ್ತು.

ಇಷ್ಟು ಆಯ್ಕೆಗಳಿದ್ದರೂ ಸಿನಿಮೋತ್ಸವದಲ್ಲಿ ಒಬ್ಬ ವ್ಯಕ್ತಿ ನೋಡಲು ಸಾಧ್ಯವಿರುವುದು (ಪ್ರತಿ ದಿನ 5ರಂತೆ 7 ದಿನಗಳಲ್ಲಿ) 35 ಸಿನಿಮಾಗಳನ್ನು ಮಾತ್ರ. ನನಗೆ ನೋಡಲು ಸಾಧ್ಯವಾಗಿದ್ದು 20 ಸಿನಿಮಾಗಳು ಮಾತ್ರ. ಅವುಗಳಲ್ಲಿ ನೆನಪಿನಲ್ಲುಳಿಯುವಂತಹುದು ಮತ್ತು ಬರೆಯಲೇಬೇಕಾದ್ದು ಎಂದು ಅನಿಸಿದ್ದು 2-3 ಸಿನಿಮಾಗಳ ಬಗ್ಗೆ.



ಧಾರ್ಮಿಕ ಮೂಲಭೂತವಾದದ ರೂಪಕ 'ಶಿಷ್ಯ'

ಅವುಗಳಲ್ಲಿ ಮೊದಲನೆಯದು 'ಡಿಸೈಪಲ್' (ಶಿಷ್ಯ) ಎಂಬ ಎಸ್ಟೋನಿಯನ್/ರಶ್ಯನ್ ಸಿನಿಮಾ. ವೆನಿಯಾ ಎಂಬ ಒಬ್ಬ ಹೈಸ್ಕೂಲ್ ವಿದ್ಯಾರ್ಥಿ ವಿಚಿತ್ರ ಉದ್ಧಟ ವರ್ತನೆಗಳನ್ನು ಪ್ರದರ್ಶಿಸುತ್ತಾ ಶಾಲಾ ನಿಯಮ-ನೀತಿಗಳನ್ನು ಉಲ್ಲಂಘಿಸುತ್ತಾ, ಅದನ್ನು ಸಮರ್ಥಿಸುಕೊಳ್ಳಲು ಬೈಬಲಿನ ಹೇಳಿಕೆಗಳನ್ನು ಗಟ್ಟಿಯಾಗಿ ಹೇಳುತ್ತಾ ಹೋಗುತ್ತಾನೆ. ತಾನು ಈಜು ಪಾಠಗಳಿಗೆ ಹೋಗುವುದಿಲ್ಲ ಎಂದು ಆರಂಭವಾಗುವ ಆತನ ವಿಲಕ್ಷಣ ವರ್ತನೆಗಳು ಇನ್ನಷ್ಟು ವಿಲಕ್ಷಣವಾಗುತ್ತಾ ಹೋಗುತ್ತವೆ. ಹುಡುಗಿಯರು ಬಿಕಿನಿ ಧರಿಸಿ ಈಜಬಾರದು. ಬೈಬಲ್ ಗೆ ವಿರುದ್ಧವಾದ ಡಾರ್ವಿನ್ ವಿಕಾಸವಾದ ಕಲಿಸಬಾರದು. ಲೈಂಗಿಕ ಪ್ರಕ್ರಿಯೆಗಳ ಬಗ್ಗೆ ಶಿಕ್ಷಣ ನೀಡಬಾರದು ಇತ್ಯಾದಿ. ಧರ್ಮದ ಬಗ್ಗೆ ಆತನ (ಅದರಲ್ಲೂ ಬೈಬಲಿನಲ್ಲಿ ಹೇಳಿದಂತೆ ಅಕ್ಷರಶಃ ನಡೆಯುವ) ಗೀಳು ಗಟ್ಟಿಯಾಗುತ್ತಾ ಅದನ್ನು ಎಲ್ಲರ ಮೇಲೆ ಹೇರುವ ಭರದಲ್ಲಿ ಹಿಂಸಾತ್ಮಕವೂ ಆಗುತ್ತಾ ಹೋಗುತ್ತದೆ. ಮಹಿಳಾ-ವಿರೋಧಿ ಜ್ಯೂ-ವಿರೋಧಿಯಾಗುತ್ತಾ ಹೋಗುತ್ತದೆ. ಆ ಮೂಲಕ ತನ್ನ ಮೂರು ಕೆಲಸ ಮಾಡಿ ಸಾಕುತ್ತಿರುವ ಬಡ ತಾಯಿ, ಶಿಕ್ಷಕರು, ಪ್ರಿನ್ಸಿಪಾಲ್, ಆಡಳಿತ ಮಂಡಳಿ, ಚರ್ಚ್ ಮತ್ತು ಇಡೀ ಸಮಾಜದ ಒಪ್ಪಿತ ಮೌಲ್ಯಗಳನ್ನು ಪ್ರಶ್ನಿಸುತ್ತಾ ಹೋಗುತ್ತಾನೆ.

ಈ ನಡುವೆ ಅವನ ಜತೆ ಮಾತನಾಡುವ (ಸದಾ ಇತರರ ಗೇಲಿಗೆ ಗುರಿಯಾಗುವ) ಏಕಮಾತ್ರ ಅಂಗವಿಕಲ ಸಹಪಾಠಿಯ ಅಂಗವಿಕಲತೆಯನ್ನು ಯೇಸುಕ್ರಿಸ್ತನಂತೆ ಮ್ಯಾಜಿಕ್ ಮೂಲಕ ಪ್ರಯತ್ನಿಸಿ ವಿಫಲನಾಗುವ, ಅದಕ್ಕೆ ಆತನ ನಂಬಿಕೆ ಸಾಲದು ಎಂದು ಆತನನ್ನೇ ಹಳಿಯುವ, ಚರ್ಚ್ ಬೈಬಲಿನ ಪ್ರಕಾರ ನಡಯುತ್ತಿಲ್ಲ ಎಂದು ಪಾದ್ರಿಯನ್ನೇ ಆಪಾದಿಸುವ ವಿಲಕ್ಷಣತೆಗಳೂ ಸೇರಿಕೊಳ್ಳುತ್ತವೆ. ಇವರೆಲ್ಲರೂ (ತಾಯಿ, ಶಿಕ್ಷಕರು, ಪ್ರಿನ್ಸಿಪಾಲ್, ಆಡಳಿತ ಮಂಡಳಿ, ಚರ್ಚ್ ಮತ್ತು ಇಡೀ ಸಮಾಜ) ಆತನ ಈ ಗೀಳನ್ನು ಪ್ರಶ್ನಿಸಿ ಅದಕ್ಕೆ ಸವಾಲು ಹೋಗುವ ಬದಲು ಆತನ ಒತ್ತಡಕ್ಕೆ ಮಣಿಯುತ್ತಾ ಆತ ಹೇರುವ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾ ಹೋಗುತ್ತಾರೆ. ಆತನಿಗೆ ಸವಾಲು ಹಾಕುವುದು ಒಬ್ಬ ಬಯಾಲಜಿ ಶಿಕ್ಷಕಿ ಎಲೆನಾ ಮಾತ್ರ. ಆದರೆ ಆಕೆಯನ್ನು ಸಹಶಿಕ್ಷಕರು, ಪ್ರಿನ್ಸಿಪಾಲ್, ಆಡಳಿತ ಮಂಡಳಿ, ಕೊನೆಗೆ ಆಕೆಯ ಸಂಗಾತಿ ಸಹ ಬೆಂಬಲಿಸುವುದಿಲ್ಲ. ಆಕೆ ವೆನಿಯಾನ ಬೈಬಲಿನ ಗೀಳನ್ನು ಸೋಲಿಸಲು ಬೈಬಲ್ ಅಧ್ಯಯನ ಮಾಡಿ, ಆತ ಹೇಳುವುದಕ್ಕೆ ತದ್ವಿರುದ್ಧವಾದ ಹೇಳಿಕೆಗಳೂ ಇವೆ ಎಂದು ಸವಾಲು ಹಾಕುತ್ತಾಳೆ. ಇದರಿಂದ ವೆನಿಯಾ ಇನ್ನಷ್ಟು ಉದ್ರಿಕ್ತನಾಗುತ್ತಾ ಹೋಗುತ್ತಾನೆ. ಆಕೆ ಜ್ಯೂ ಆದ್ದರಿಂದ ಕ್ರಿಶ್ಚಿಯನ್-ವಿರೋಧಿ ಎಂದು ಆಪಾದಿಸುತ್ತಾನೆ. ಆಕೆಯನ್ನು ಕೊಲ್ಲಲು ಅವನ ಪ್ರಭಾವಕ್ಕೆ ಒಳಗಾದ ಅಂಗವಿಕಲ ಸಹಪಾಠಿಯನ್ನು ಪ್ರಚೋದಿಸುತ್ತಾನೆ. ಆತ ನಿರಾಕರಿಸಿದಾಗ ಆತನನ್ನೇ ಕೊಲೆ ಮಾಡುತ್ತಾನೆ. ಎಲೆನಾಳನ್ನು ಬೆದರಿಕೆ ಹಾಕಿ ಓಡಿಸುವ ಪ್ರಯತ್ನ ವಿಫಲವಾದಾಗ, ಲೈಂಗಿಕ ದೌರ್ಜನ್ಯದ ಆಪಾದನೆ ಹಾಕಿ, ಆಡಳಿತ ಮಂಡಳಿಯೇ ಆಕೆಯನ್ನು ವಜಾ ಮಾಡುವಂತೆ ಮಾಡುತ್ತಾನೆ.

'ಶಿಷ್ಯ', ಹಲವು ನಾಟಕೀಯ ತಿರುವುಗಳಿಂದ ನೋಡುಗರನ್ನು ದಂಗು ಬಡಿಸುತ್ತದೆ. ಇದು ಇಂದಿನ ಧಾರ್ಮಿಕ ಮೂಲಭೂತವಾದ ಸೇರಿದಂತೆ ಎಲ್ಲಾ ಗೊಡ್ಡು ಕುರುಡು ನಂಬಿಕೆಗಳಿಂದ ವೈಚಾರಿಕತೆ-ತರ್ಕ ನಶಿಸುತ್ತಿರುವ ರಶ್ಯದ ಚಿತ್ರಣ ಮಾತ್ರವಲ್ಲ. ಇಡೀ ಜಗತ್ತನ್ನು ಆವರಿಸುತ್ತಿರುವ ಧಾರ್ಮಿಕ ಮೂಲಭೂತವಾದ/ಆಕ್ರಾಮಕ ಬಲಪಂಥದ, ಅದಕ್ಕೆ ಬಲಿ ಬೀಳುತ್ತಿರುವ ವ್ಯವಸ್ಥೆಯ ಮತ್ತು ಅದಕ್ಕೆ ಪ್ರತಿ-ರೋಧದ ಅದ್ಭುತ ರೂಪಕ ಸಹ. ವೆನಿಯಾ ತನ್ನ ರೂಮನ್ನೇ ಅಡಿಮೇಲು ಮಾಡಿ ವಿರೂಪಗೊಳಿಸುವ, ವಿಕಾಸವಾದ ವಿರುದ್ಧ ಪ್ರತಿಭಟಿಸಲು ಚಿಂಪಾಂಜಿಯ ವೇಷ ಹಾಕಿ ದಾಂಧಲೆ ಮಾಡುವ, ಬಯಾಲಜಿ ಲ್ಯಾಬಿನಲ್ಲಿ ಕ್ರಾಸ್ ಸ್ಥಾಪಿಸುವ, ಕೊನೆಗೆ ಸ್ಕೂಲು ಬಿಟ್ಟು ತಾನು ಎಲ್ಲೂ ಹೋಗುವುದಿಲ್ಲ ಎಂದು ಬಯಾಲಜಿ ಲ್ಯಾಬಿನ ನೆಲಕ್ಕೆ ತನ್ನ ಶೂ ಗಳನ್ನು ಮೊಳೆ ಜಡಿದು ನಿಂತುಕೊಳ್ಳುವ - ದೀರ್ಘ ದೃಶ್ಯಗಳು ಸಶಕ್ತವಾಗಿ ಮೂಡಿಬಂದು ನೆನಪಿನಲ್ಲಿ ಉಳಿಯುತ್ತವೆ.

'ಕ್ಲ್ಯಾಶ್'- 'ಅರಬ್ ವಸಂತ'ದ ತಾಕಲಾಟಗಳು

2010ರ 'ಅರಬ್ ವಸಂತ'ದಿಂದ ಈಜಿಪ್ಟಿನ ಮಿಲಿಟರಿ ಸರಕಾರದ ಪತನದ ನಂತರ ನಡೆದ ಚುನಾವಣೆಗಳಲ್ಲಿ ಮೂಲಭೂತವಾದಿ 'ಮುಸ್ಲಿಂ ಬ್ರದರ್ ಹುಡ್' ಗೆದ್ದು ಸರಕಾರ ಮಾಡುತ್ತದೆ. ಈ ಸರಕಾರದ ಪ್ರಜಾಪ್ರಭುತ್ವದ ದಮನದ ವಿರುದ್ಧ ಸೆಕ್ಯುಲರ್ ಪ್ರಜಾಸತ್ತಾತ್ಮಕ ಶಕ್ತಿಗಳ ಚಳುವಳಿಯನ್ನು ಬಳಸಿ 2013ರಲ್ಲಿ ಮಿಲಿಟರಿ ಪುನಃ ಅಧಿಕಾರಕ್ಕೆ ಬರುತ್ತದೆ. ಇದನ್ನು ವಿರೋಧಿಸಿ 'ಮುಸ್ಲಿಂ ಬ್ರದರ್‌ಹುಡ್' ದೇಶವ್ಯಾಪಿ ಹಿಂಸಾತ್ಮಕವಾದ ಪ್ರದರ್ಶನ/ಚಳುವಳಿಯನ್ನು ಹೂಡುತ್ತದೆ. ಸೆಕ್ಯುಲರ್ ಪ್ರಜಾಸತ್ತಾತ್ಮಕ ಶಕ್ತಿಗಳು 'ಮುಸ್ಲಿಂ ಬ್ರದರ್ ಹುಡ್' ಸರಕಾರವನ್ನು ಉರುಳಿಸಿದ್ದನ್ನು ಬೆಂಬಲಿಸಿ ಪ್ರದರ್ಶನ/ಚಳುವಳಿಯನ್ನು ಹೂಡುತ್ತವೆ. ಎರಡು ಗಂಪುಗಳು ಪರಸ್ಪರರ ಮೇಲೆ ದಾಳಿಗಳನ್ನೂ ಮಾಡುತ್ತವೆ. ಪೋಲಿಸರು ಪ್ರದರ್ಶನ/ಚಳುವಳಿಗಳನ್ನು ದಮನ ಮಾಡಲು ಕಠಿಣ ಕ್ರಮ ಕೈಗೊಂಡು ಇಂತವರನ್ನೆಲ್ಲಾ ಬಂಧಿಸುತ್ತಾ ಹೋಗುತ್ತಾರೆ. ಪೋಲಿಸ್ ವ್ಯಾನ್ ನಲ್ಲಿ ಬಂಧಿತ 'ಮುಸ್ಲಿಂ ಬ್ರದರ್ ಹುಡ್' ಬೆಂಬಲಿಗರು, 2010ರಲ್ಲಿ ಮಿಲಿಟರಿ ಸರಕಾರದ ವಿರುದ್ಧ ಹೋರಾಡಿದ ಆದರೆ ಈಗ 'ಮುಸ್ಲಿಂ ಬ್ರದರ್ ಹುಡ್' ವಿರೋಧಿಸಿ ಮಿಲಿಟರಿ ಸರಕಾರ ಬೆಂಬಲಿಸುವವರು, ಸುಮ್ಮನೆ ತಮಾಷೆ ನೋಡಲು ಬಂದವರು, ದೊಂಬಿಯಲ್ಲಿ ಅಕಾಸ್ಮಾತ್ತಾಗಿ ಸಿಕ್ಕಿ ಹಾಕಿಕೊಂಡವರು - ಹೀಗೆ ಒಂದು ಮಿನಿ ಈಜಿಪ್ಟಿನ ಸಮಾಜವೇ ಇಲ್ಲಿದೆ. ಎಲ್ಲಾ ವರ್ಗದವರೂ, ಎಲ್ಲಾ ರಾಜಕೀಯ ನಿಲುವುಗಳವರು, ಎಲ್ಲಾ ವಯಸ್ಸಿನವರು, ಒಂದೆರಡು ಇಡೀ ಕುಟುಂಬ ಇಲ್ಲಿ ಬಂದಿತರಾಗಿದ್ದಾರೆ. ಈಜಿಪ್ಟ್ ಮೂಲದ ಅಮೆರಿಕನ್ ಪ್ರಜೆಯಾದ 'ವಿದೇಶಿ' ಪತ್ರಕರ್ತನೂ ಅವನ ಸ್ಥಳೀಯ 'ಬ್ರದರ್ ಹುಡ್' ಬೆಂಬಲಿಗ ಫೋಟೊಗ್ರಾಫರ್ ಸಹ ಇದ್ದಾರೆ. ವ್ಯಾನಿನ ಒಳಗೆ ತಳ್ಳಲ್ಪಡುವ ಮೊದಲಿಗರು ಇವರು. ಅಮೆರಿಕವೇ ಈ ಪರಿಸ್ಥಿತಿಗೆ ಹೊಣೆ ಎಂಬ ಅಭಿಪ್ರಾಯವಿರುವ 'ವಿದೇಶಿ' ಪತ್ರಕರ್ತ ಎರಡೂ ಕಡೆಯವರ ಸಂಶಯ, ತಿರಸ್ಕಾರಕ್ಕೂ ಒಳಗಾಗುತ್ತಾನೆ.

ವ್ಯಾನ್ ಅವರನ್ನು ಜೈಲಿಗೆ ಹಾಕಲು ಹೊರಟಾಗ ದಾರಿಯಲ್ಲಿ ಟ್ರಾಫಿಕ್ ಜಾಮಿನಿಂದ, ಗುಂಪು ದಂಗೆಗಳಿಂದಾಗಿ, ಜೈಲಿನಲ್ಲಿ ಜಾಗ ಇಲ್ಲದೆ ಹಲವು ಗಂಟೆಗಳ ಕಾಲ 'ಮಿನಿ ಈಜಿಪ್ಟ್' ವ್ಯಾನ್ ಒಳಗೇ ಇರುತ್ತದೆ. ಈ ವ್ಯಾನಿನ ಒಳಗೆ ನಡೆಯುವ ಘಟನೆಗಳೂ ಸಂಘರ್ಷಗಳೂ 'ಕ್ಲ್ಯಾಶ್' ಚಿತ್ರದ ವಸ್ತು. ಇಡೀ ಸಿನಿಮಾ ಚಿತ್ರಣ ವ್ಯಾನಿನ ಒಳಗೆ, ವ್ಯಾನಿಂದ ಕಂಡ ಇನ್ನೊಂದು ವ್ಯಾನು, ಮತ್ತು ಹೊರಗಿನ ದೃಶ್ಯಗಳದ್ದು. ಬಂಧಿತರು 'ಮುಸ್ಲಿಂ ಬ್ರದರ್ ಹುಡ್' ಎಂದುಕೊಂಡು ವ್ಯಾನ್ ಮೇಲೆ ಹೊರಗಿಂದ ದಾಳಿ ಮಾಡುವ ವಿರೋಧಿಗಳು, ವ್ಯಾನಿನಿಂದ ಎರಡೂ ಕಡೆಯ ಘೋಷಣೆಗಳು ಮೊಳಗಿದಾಗ ಎರಡು ಕಡೆಯ ವಿರೋಧಿಗಳಿಂದ ದಾಳಿಗೊಳಗಾಗುವುದು ವ್ಯಾನಿನ ಒಳಗೆ ಇದ್ದವರ ಪಾಡನ್ನು ಇನ್ನಷ್ಟು ಸಂಕೀರ್ಣವಾಗಿಸುತ್ತದೆ. ವ್ಯಾನಿನ ಒಳಗೂ 'ಮುಸ್ಲಿಂ ಬ್ರದರ್ ಹುಡ್' ಮತ್ತು ಅವರ ವಿರೋಧಿಗಳ ನಡುವೆ ಸಂಘರ್ಷ ಸದಾ ನಡೆಯುತ್ತಿದ್ದು ಆಗಾಗ ತಾರಕ-ಕ್ಕೆ ಏರುತ್ತದೆ. ಆಗ ವ್ಯಾನಿನ ಒಳಗೆ ಇದ್ದವರೆಲ್ಲರೂ ಜಲಫಿರಂಗಿ, ಅಶ್ರುವಾಯು ಎದುರಿಸಬೇಕಾಗುತ್ತದೆ. ಅನ್ನ, ನೀರಿಲ್ಲದೆ ಗಾಯಗೊಂಡ ವ್ಯಾನಿನ ಒಳಗೆ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**